ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 11 ಭಾನುವಾರ 2023

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 56 | ಪುಟಗಳು: 12

₹4

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ವಿದ್ಯುತ್ ದರ ಹೆಚ್ಚಳಕ್ಕೆ ಹೋಟೆಲ್ ಮಾಲೀಕರ ಸಂಘ ತೀವ್ರ ವಿರೋಧ

ವಾಣಿಜ್ಯ ಮತ್ತು ಕೈಗಾರಿಕೆ ಸಂಸ್ಥೆಯಿಂದಲೂ ಆಕ್ರೋಶ



ಮೈಸೂರು, ಜೂ.10(ಆರ್‌ಕೆ)–ಸರ್ಕಾರವು ಶೇ.40ರಷ್ಟು ವಿದ್ಯುತ್ ದರ ಹೆಚ್ಚಿಸಿರುವುದು ಗೃಹ ಬಳಕೆ ಮತ್ತು ಕೈಗಾರಿಕೋದ್ಯಮಿಗಳಿಗೆ ಭಾರೀ ಹೊರೆಯಾಗಿದೆ ಎಂದು ಹೋಟೆಲ್ ಮಾಲೀಕರ ಸಂಘ ಹಾಗೂ ಮೈಸೂರು ವಾಣಿಜ್ಯ ಮತ್ತು ಕೈಗಾರಿಕೆ ಸಂಸ್ಥೆಗಳು ತೀವ್ರ ವಿರೋಧ ವ್ಯಕ್ತಪಡಿಸಿವೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ನಿಗದಿತ ಶುಲ್ಕ (ಠೇವಣಿ)ವನ್ನು ಶೇ.60 ಹಾಗೂ ಬಳಕೆ ಮಾಡಿದ ವಿದ್ಯುತ್‌ಗೆ ಯೂನಿಟ್‌ಗೆ 2.42 ರೂ. ಸೇರಿ ಒಟ್ಟು ಶೇ.40ರಷ್ಟು ದರ ಏರಿಸಿರುವುದು ಆತಂಕಕಾರಿಯಾಗಿದೆ ಎಂದು ತಿಳಿಸಿದ್ದಾರೆ.

ಪ್ರಮುಖವಾಗಿ ಕೈಗಾರಿಕೆಗಳಿಗೆ ವಿದ್ಯುತ್ ದರ, ನಿಗದಿತ ಶುಲ್ಕ ಹಾಗೂ ಇಂಧನ ಹೊಂದಾಣಿಕೆ ಶುಲ್ಕವನ್ನು ಮನ ಬಂದಂತೆ ಹೆಚ್ಚಿಸಲಾಗಿದ್ದು, ಇದರಿಂದ ಈಗಾಗಲೇ ಸಂಕಷ್ಟದಲ್ಲಿರುವ ಕೈಗಾರಿಕೆಗಳನ್ನು ಇನ್ನು ಮುಂದೆ ನಡೆಸಲು ಕಷ್ಟವಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೆಚ್ಚಿಸಿರುವ ಶುಲ್ಕ ಹಾಗೂ ದರವನ್ನು ಕೈಬಿಡಬೇಕೆಂದು ನಾರಾಯಣಗೌಡರು ಒತ್ತಾಯಿಸಿದ್ದಾರೆ.

ಈ ಸಂಬಂಧ ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ಮೈಸೂರು ಚೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿ (MCCI) ಅಧ್ಯಕ್ಷ ಕೆ.ಬಿ.ಲಿಂಗರಾಜು ಅವರು, ಕೈಗಾರಿಕೆಗಳು, ವಾಣಿಜ್ಯ ಕೇಂದ್ರ ಸೇರಿದಂತೆ ಎಲ್ಲಾ ರೀತಿಯ ಬಳಕೆದಾರರ ವಿದ್ಯುತ್ ದರ ಏರಿಕೆ ಮಾಡಿರುವುದು ಜನರನ್ನು ಸಂಕಷ್ಟಕ್ಕೆ ಸಿಲುಕಿಸಿದಂತಾಗಿದೆ. ಸರ್ಕಾರವು ಈ ಬಗ್ಗೆ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದ್ದಾರೆ.

ಮನೆ ಭೋಗ್ಯಕ್ಕೆ ಕೊಡಿಸುವುದಾಗಿ ವಂಚನೆ

ಮೈಸೂರು, ಜೂ.10– ಬೇರೆಯವರ ಮನೆಯನ್ನು ಭೋಗ್ಯದ ಕರಾರು ಮಾಡಿ ಕೊಟ್ಟು ತಾಯಿ ಮತ್ತು ಮಗಳಿಗೆ ವಂಚಿಸಿರುವ ಬಗ್ಗೆ ವರದಿಯಾಗಿದೆ.

ಕೈಲಾಸಪುರಂ ನಿವಾಸಿಗಳಾದ ಫಾತಿಮಾಬೀ ಮತ್ತು ಆಕೆಯ ಮಗಳು ತಬಸ್ಸುಮ್ ವಂಚನೆಗೊಳಗಾದವರಾಗಿದ್ದು, ರಾಜೀವ್‌ನಗರ 1ನೇ ಹಂತದ ಮಹಮ್ಮದ್ ಮುಸ್ತಫಾ, ಮಹಮ್ಮದ್ ಅಲಿ ಮತ್ತು ಸತ್ಯನಗರದ ನೂರ್ ಆರೋಪಕ್ಕೆ ಗುರಿಯಾಗಿರುವವರು.

ಕ್ರೈಂ ಬಾಕ್ಸ್

ಫಾತಿಮಾಬೀ ಮತ್ತು ತಬಸ್ಸುಮ್ ಕೈಲಾಸಪುರಂನಲ್ಲಿ ವಾಸವಿದ್ದರು. ಬಟ್ಟೆ ಅಂಗಡಿಗೆ ಕೆಲಸಕ್ಕೆ ಹೋಗುತ್ತಿದ್ದ ತಬಸ್ಸುಮ್‌ನ ಪತಿ ನಿಧನ ಹೊಂದಿದ ನಂತರ ಆಕೆ ತನ್ನ ತಾಯಿ ಮತ್ತು ಮೂವರು ಮಕ್ಕಳೊಂದಿಗೆ ಭೋಗ್ಯಕ್ಕೆ ಮನೆ ಮಾಡಿಕೊಂಡು ಹೋಗಬೇಕೆಂದು ಮನೆ ಹುಡುಕುತ್ತಿದ್ದಾಗ ಸತ್ಯನಗರದ ಬ್ರೋಕರ್ ನೂರ್ ಈಕೆಗೆ ಪರಿಚಯವಾಗಿದ್ದಾನೆ.

ಕ್ಯಾತಮಾರನಹಳ್ಳಿಯಲ್ಲಿ 20x30 ಅಳತೆಯ ಮನೆ 3.50 ಲಕ್ಷಕ್ಕೆ ಭೋಗ್ಯಕ್ಕೆ ಇದೆ. ಇನ್ನು 2 ತಿಂಗಳಲ್ಲಿ ಮನೆ ಖಾಲಿ ಆಗುತ್ತದೆ ಎಂದು ತಿಳಿಸಿ, ಮನೆಯ ಮಾಲೀಕನೆಂದು ಮಹಮ್ಮದ್ ಮುಸ್ತಫಾ ಎಂಬಾತನನ್ನು ಪರಿಚಯಿಸಿದ್ದಾನೆ. ಮುಸ್ತಫಾ ಮತ್ತು ಮಹಮ್ಮದ್ ಅಲಿ ಅವರುಗಳು ನೂರ್ ಸಮ್ಮುಖದಲ್ಲಿ ಹಂತ ಹಂತವಾಗಿ ತಬಸ್ಸುಮ್ ಅವರಿಂದ 3.50 ಲಕ್ಷ ರೂ. ಪಡೆದು ಸದರಿ ಮನೆಗೆ ಕಳೆದ ಮೇ 23ರಂದು ಭೋಗ್ಯದ ಕರಾರು ಪತ್ರ ಮಾಡಿಕೊಟ್ಟಿದ್ದಾರೆ.

ಈ ಪತ್ರವನ್ನಿಟ್ಟುಕೊಂಡು ತಾನಿದ್ದ ಮನೆ ಖಾಲಿ ಮಾಡಿ ಸಾಮಾನು ಸರಂಜಾಮುಗಳೊಂದಿಗೆ ತಬಸ್ಸುಮ್ ಕ್ಯಾತಮಾರನಹಳ್ಳಿ ಮನೆಗೆ ಹೋದಾಗ ಅಲ್ಲಿಗೆ ಬಂದ ಸಯ್ಯದ್ ತನ್ವೀರ್ ಪಾಷಾ ಎಂಬುವನು ಈ ಮನೆ ತನ್ನದಾಗಿದ್ದು, ಯಾರಿಗೂ ಭೋಗ್ಯಕ್ಕೆ ಕೊಟ್ಟಿಲ್ಲ ಎಂದು ತಿಳಿಸಿದ್ದಾರೆ. ಭೋಗ್ಯದ ಕರಾರು ಪತ್ರ ತೋರಿಸಿದಾಗ ಅವರು ಮನೆ ಬಾಡಿಗೆಗೆ ಯಾರಿಗಾದರೂ ಕೊಡಿಸುವಂತೆ ಮುಸ್ತಫಾ ಅವರಿಗೆ ತಾನು ತಿಳಿಸಿರುವುದಾಗಿ ಹೇಳಿದ ಹಿನ್ನೆಲೆಯಲ್ಲಿ ಅನ್ಯ ಮಾರ್ಗವಿಲ್ಲದೇ ತಬಸ್ಸುಮ್ ತಾನಿದ್ದ ಹಳೆಯ ಮನೆಗೇ ವಾಪಸ್ಸಾಗಿದ್ದಾರೆ.

ಬ್ರೋಕರ್ ವಿರುದ್ಧ ಪ್ರಕರಣ ದಾಖಲು

ತನಗೆ ಮೋಸ ಮಾಡಿರುವ ಬಗ್ಗೆ ಮುಸ್ತಫಾನನ್ನು ಪ್ರಶ್ನಿಸಿದಾಗ ಆತ ಹಣ ಹಿಂತಿರುಗಿಸಲು ಕಾಲಾವಕಾಶ ಕೇಳಿದ್ದ ಎನ್ನಲಾಗಿದ್ದು, ಕೊನೆಗೆ ಹಣವನ್ನೂ ಕೊಡದೇ ತಮ್ಮನ್ನೇ ದಬಾಯಿಸುತ್ತಿದ್ದಾನೆ ಎಂದು ತಬಸ್ಸುಮ್ ಜೂನ್ 6ರಂದು ನೀಡಿದ ದೂರನ್ನು ದಾಖಲಿಸಿಕೊಂಡಿರುವ ಮಂಡಿ ಠಾಣೆ ಪೊಲೀಸರು, ತನಿಖೆ ಮುಂದುವರಿಸಿದ್ದಾರೆ.

ಮೃಗಾಲಯದಲ್ಲಿ ಪ್ರವಾಸಿಗರ ವ್ಯಾನಿಟಿ ಬ್ಯಾಗ್‌ನಲ್ಲಿದ್ದ 50 ಸಾವಿರ ರೂ. ಕಳವು

ಮೈಸೂರು, ಜೂ.10– ಮಹಾರಾಷ್ಟ್ರದಿಂದ ಕುಟುಂಬ ಸಮೇತವಾಗಿ ಮೈಸೂರು ಪ್ರವಾಸಕ್ಕೆ ಬಂದಿದ್ದ ಗೃಹಿಣಿಯ ವ್ಯಾನಿಟಿ ಬ್ಯಾಗ್‌ನಿಂದ 50 ಸಾವಿರ ರೂ. ಕಳವು ಮಾಡಿರುವ ಘಟನೆ ಮೈಸೂರು ಮೃಗಾಲಯದಲ್ಲಿ ನಡೆದಿದೆ.

ಮಹಾರಾಷ್ಟ್ರದ ನಾಸಿಕ್ ನಿವಾಸಿ ಶಿಲ್ಪಾ ವೈಭವ್ ಸೋನಾರ್(43) ಹಣ ಕಳೆದುಕೊಂಡವರಾಗಿದ್ದು, ಇವರು ಕುಟುಂಬ ಸಮೇತರಾಗಿ ಕರ್ನಾಟಕಕ್ಕೆ ಪ್ರವಾಸ ಬಂದಿದ್ದು, ಬೆಂಗಳೂರಿನಿಂದ ಕಾರಿನಲ್ಲಿ ಊಟಿಗೆ ಹೋಗಿದ್ದ ಈ ಕುಟುಂಬ ಜೂನ್ 4ರಂದು ಮಧ್ಯಾಹ್ನ ಮೈಸೂರಿಗೆ ಬಂದು ರಿಯೋ ಮೆರಿಡಿಯನ್ ಹೋಟೆಲ್‌ನಲ್ಲಿ ಸ್ವಲ್ಪ ಸಮಯ ವಿಶ್ರಾಂತಿ ಪಡೆದ ನಂತರ ಅಂದು ಮಧ್ಯಾಹ್ನ 2.45ರ ಸುಮಾರಿನಲ್ಲಿ ಮೈಸೂರು ಮೃಗಾಲಯಕ್ಕೆ ಹೋಗಿದ್ದಾರೆ. ಮಧ್ಯಾಹ್ನ 3.15ರ ಸುಮಾರಿನಲ್ಲಿ ಹುಲಿಗಳಿರುವ ಜೋನ್ ಬಳಿ ಅವರು ಹೋದಾಗ ವ್ಯಾನಿಟಿ ಬ್ಯಾಗ್ ಜಿಪ್ ತೆರೆದಿರುವುದು ಕಂಡುಬಂದಿದ್ದು, ಬ್ಯಾಗ್‌ನೊಳಗೆ ನೋಡಿಕೊಂಡಾಗ ಅದರಲ್ಲಿದ್ದ 50 ಸಾವಿರ ರೂ. ಕಳವು ಮಾಡಲಾಗಿದೆ. ಈ ಸಂಬಂಧ ನಜರ್‌ಬಾದ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

> ಇಂತಹ ಸ್ಥಳದಲ್ಲಿ ಖದೀಮರು ಹೊಂಚು ಹಾಕುತ್ತಿರುತ್ತಾರೆ. ಹಾಗಾಗಿ ಮಾರುವೇಷದಲ್ಲಿ ಪೊಲೀಸರು ಕಾರ್ಯನಿರತರಾದರೆ ಖದೀಮರಿಗೆ ಕಡಿವಾಣ ಹಾಕಬಹುದು. ಪ್ರವಾಸಿಗರಿಗೂ ರಕ್ಷಣೆ ಒದಗಿಸಿದಂತಾಗುತ್ತದೆ.

50 ಲಕ್ಷ ನಗದು, ನಿವೇಶನ ಕೊಡುವಂತೆ ಪತ್ನಿ, ಆಕೆಯ ಸಹೋದರನ ಕಿರುಕುಳ: ವ್ಯಕ್ತಿ ಆತ್ಮಹತ್ಯೆ

ಮೈಸೂರು, ಜೂ. 10– ಪತಿ ಮತ್ತು ಆತನ ಕುಟುಂಬದವರ ವರದಕ್ಷಿಣೆ ಕಿರುಕುಳದಿಂದ ಗೃಹಿಣಿಯರು ಆತ್ಮಹತ್ಯೆಗೆ ಶರಣಾಗುವ ಪ್ರಕರಣಗಳು ಸರ್ವೇ ಸಾಮಾನ್ಯವಾಗಿ ವರದಿಯಾಗುತ್ತಿರುತ್ತವೆ. ಆದರೆ, ಪತ್ನಿ ಮತ್ತು ಆಕೆಯ ಸಹೋದರನ ಕಿರುಕುಳದಿಂದ ವ್ಯಕ್ತಿಯೋರ್ವ ಡೆತ್‌ನೋಟ್ ಬರೆದಿಟ್ಟು ಆತ್ಮಹತ್ಯೆಗೆ ಶರಣಾಗಿರುವ ಬಗ್ಗೆ ನ್ಯಾಯಾಲಯದ ಆದೇಶದ ಮೇರೆಗೆ ಪ್ರಕರಣ ದಾಖಲಾಗಿದೆ.

ಮೈಸೂರಿನ ಲಕ್ಷ್ಮೀನಿವಾಸ ರಸ್ತೆ ನಿವಾಸಿ ಸುರೇಶ್‌ಕುಮಾರ್ ಜೈನ್ ಎಂಬುವರ ಸಹೋದರ ದಿನೇಶ್‌ಕುಮಾರ್ ಕಳೆದ ಮಾರ್ಚ್ 20ರಂದು ಮನೆಯಲ್ಲೇ ಆತ್ಮಹತ್ಯೆ ಮಾಡಿಕೊಂಡಿದ್ದು, ಮನೆಯವರು ಈತನ ಆತ್ಮಹತ್ಯೆಗೆ ಕಾರಣ ಗೊತ್ತಿಲ್ಲದೇ ತಲೆಕೆಡಿಸಿಕೊಂಡಿದ್ದರು. ಮೃತನ 13ನೇ ದಿನದ ಕಾರ್ಯ ಮಾಡಿದ ನಂತರ ಆತನ ಕೊಠಡಿಯನ್ನು ಸ್ವಚ್ಛಗೊಳಿಸುವ ವೇಳೆ ದಿನೇಶ್‌ಕುಮಾರ್‌ನ ಡೆತ್‌ನೋಟ್ ತಮಗೆ ದೊರಕಿದೆ ಎಂದು ಆತನ ಸಹೋದರ ಸುರೇಶ್‌ಕುಮಾರ್ ಜೈನ್ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ.

ತನ್ನ ಸಹೋದರ ದಿನೇಶ್‌ಕುಮಾರ್‌ನ ಪತ್ನಿ ಶ್ವೇತಾ ಮತ್ತು ಆಕೆಯ ಸಹೋದರ ಕಪಿಲ್ ವಿ.ಜೈನ್ ಅವರುಗಳು 50 ಲಕ್ಷ ನಗದು ಮತ್ತು ಮನೆ ಕೊಡುವಂತೆ ದಿನೇಶ್‌ಕುಮಾರ್‌ಗೆ ಹಿಂಸೆ ನೀಡಿದ್ದಾರೆ. ಅವರ ಹಿಂಸೆ ತಾಳಲಾರದೆ ಡೆತ್‌ನೋಟ್ ಬರೆದಿಟ್ಟು ತನ್ನ ಸಹೋದರ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ತಿಳಿಸಿದ್ದಾರೆ. ಈ ಸಂಬಂಧ ನ್ಯಾಯಾಲಯ ನೀಡಿದ ಆದೇಶದ ಮೇರೆಗೆ ದೇವರಾಜ ಠಾಣೆ ಪೊಲೀಸರು ಭಾರತೀಯ ದಂಡ ಸಂಹಿತೆ 306, 384, 109, 34ರಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

ಗರ್ಭಿಣಿ ಮಹಿಳೆ ಅನುಮಾನಾಸ್ಪದ ಸಾವು

ಮೈಸೂರು, ಜೂ.10(ಸಿಎನ್)– ಗರ್ಭಿಣಿ ಮಹಿಳೆಯೊಬ್ಬರು ಅನುಮಾನಾಸ್ಪದವಾಗಿ ಸಾವನ್ನಪ್ಪಿರುವ ಘಟನೆ ಮೈಸೂರಿನ ಕೆ.ಜಿ.ಕೊಪ್ಪಲಿನ 5ನೇ ಅಡ್ಡರಸ್ತೆಯಲ್ಲಿ ಶನಿವಾರ ನಡೆದಿದೆ.

ಜ್ಯೋತಿ (35) ಸಂಶಯಾಸ್ಪದವಾಗಿ ಸಾವಿಗೀಡಾಗಿದ್ದು, ಮೈಸೂರಿನ ಜೆ.ಪಿ.ನಗರದಲ್ಲಿರುವ ಖಾಸಗಿ ಕಂಪನಿಯಲ್ಲಿ ದರ್ಜಿಯಾಗಿ ಕೆಲಸ ನಿರ್ವಹಿಸುತ್ತಿದ್ದರು ಎನ್ನಲಾಗಿದೆ. ಮನೆಯ ಕೊಠಡಿಯಲ್ಲಿ ಸಾವನ್ನಪ್ಪಿದ್ದು, ರಕ್ತಸಿಕ್ತವಾಗಿ ಬಿದ್ದಿದ್ದ ಶವ ನೋಡಿ ಮನೆ ಮಾಲೀಕರು ಗಾಬರಿಗೊಂಡು, ತಕ್ಷಣ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.

ವಿಷಯ ತಿಳಿಯುತ್ತಿದ್ದಂತೆ ಘಟನಾ ಸ್ಥಳಕ್ಕೆ ಸರಸ್ವತಿಪುರಂ ಪೊಲೀಸರು, ಶ್ವಾನದಳ, ಬೆರಳಚ್ಚು ತಂಡ ಹಾಗೂ ಸಂಚಾರ ಮತ್ತು ಅಪರಾಧ ವಿಭಾಗದ ಡಿಸಿಪಿ ಮುತ್ತುರಾಜ್ ಆಗಮಿಸಿ ಪರಿಶೀಲನೆ ನಡೆಸಿದ್ದಾರೆ. ಸಾವಿಗೆ ನಿಖರ ಕಾರಣ ತಿಳಿದು ಬಂದಿಲ್ಲ ಎಂದು ಪೊಲೀಸರು ತಿಳಿಸಿದ್ದು, ಈ ಸಂಬಂಧ ಸರಸ್ವತಿಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತವರಿನಲ್ಲಿ ಸಿಎಂ ಸಿದ್ದರಾಮಯ್ಯರಿಗೆ ಭವ್ಯ ಸ್ವಾಗತ; ಬೆಳ್ಳಿ ಗದೆ, ಖಡ್ಗ, ಕುರಿ ಕೊಡುಗೆ





ಮೈಸೂರು,ಜೂ.10 (ಎಂಟಿವೈ)– ರಾಜ್ಯದ ಮುಖ್ಯಮಂತ್ರಿಯಾಗಿ ಎರಡನೇ ಬಾರಿಗೆ ಅಧಿಕಾರವಹಿಸಿಕೊಂಡ ಬಳಿಕ ಮೊಟ್ಟ ಮೊದಲ ಬಾರಿಗೆ ತವರು ಕ್ಷೇತ್ರ ವರುಣಕ್ಕೆ ಆಗಮಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕ್ಷೇತ್ರದ ಜನತೆ ಪ್ರೀತಿಪೂರ್ವಕವಾದ ಸ್ವಾಗತ ಕೋರಿ, ಅಭಿಮಾನ ಮೆರೆದರು.

ಬೆಂಗಳೂರಿನ ಹೆಚ್‌ಎಎಲ್ ವಿಮಾನ ನಿಲ್ದಾಣದಿಂದ ಹೆಲಿಕಾಪ್ಟರ್‌ನಲ್ಲಿ ಸುತ್ತೂರಿನ ಹೆಲಿಪ್ಯಾಡ್‌ಗೆ ಆಗಮಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಜಿಲ್ಲಾಡಳಿತದ ವತಿಯಿಂದ ಗೌರವ ಸಲ್ಲಿಸಲಾಯಿತು. ಬಳಿಕ ಸಚಿವರಾದ ಡಾ.ಹೆಚ್.ಸಿ.ಮಹಾದೇವಪ್ಪ ಹಾಗೂ ಕೆ.ವೆಂಕಟೇಶ್, ಶಾಸಕರಾದ ಡಿ.ರವಿಶಂಕರ್, ದರ್ಶನ್ ಧ್ರುವನಾರಾಯಣ್, ಅನಿಲ್ ಚಿಕ್ಕಮಾದು, ಕೆ.ಹರೀಶ್‌ಗೌಡ, ಪುಟ್ಟರಂಗಶೆಟ್ಟಿ, ಎ.ಆರ್.ಕೃಷ್ಣಮೂರ್ತಿ, ಮಾಜಿ ಶಾಸಕ ಡಾ.ಯತೀಂದ್ರ ಅವರೊಂದಿಗೆ ತೆರೆದ ವಾಹನದಲ್ಲಿ ಕೃತಜ್ಞತಾ ಸಮಾವೇಶ ಆಯೋಜಿಸಿದ್ದ ಬಿಳಿಗೆರೆವರೆಗೂ ವಿವಿಧ ಜಾನಪದ ಕಲಾತಂಡಗಳೊಂದಿಗೆ ಭವ್ಯ ಮೆರವಣಿಗೆಯಲ್ಲಿ ಸಾಗಿದರು. ಡೊಳ್ಳು ಕುಣಿತ, ಪೂಜಾ ಕುಣಿತ, ಗೊಂಬೆ ಕುಣಿತ, ಪಟದ ಕುಣಿತ, ಕಂಸಾಳೆ ಸೇರಿದಂತೆ ವಿವಿಧ ಜಾನಪದ ಕಲಾತಂಡಗಳು ಮೆರವಣಿಗೆಗೆ ಮೆರಗು ನೀಡಿದವು. ಅಭಿಮಾನಿಗಳು ಸಿದ್ದರಾಮಯ್ಯ ಚಿತ್ರವುಳ್ಳ ಹಳದಿ ಬಾವುಟದೊಂದಿಗೆ ಅಭಿಮಾನ ಪ್ರದರ್ಶಿಸಿದರು. ಜಿಲ್ಲೆಯಾದ್ಯಂತ ಆಗಮಿಸಿದ್ದ ನೂರಾರು ಮುಖಂಡರು ಮೆರವಣಿಗೆಯಲ್ಲಿ ಸಾಗಿದರು.

ಟಗರು, ಬೆಳ್ಳಿ ಗದೆ, ಖಡ್ಗ ಉಡುಗೊರೆ ಸ್ವೀಕಾರಕ್ಕೆ ನಕಾರ: ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ದಿನವೇ ಪುಸ್ತಕ ಹೊರತುಪಡಿಸಿ ಯಾವುದೇ ಉಡುಗೊರೆ ಸ್ವೀಕರಿಸುವುದಿಲ್ಲ ಎಂದು ಸಿದ್ದರಾಮಯ್ಯ ಘೋಷಿಸಿದ್ದರು. ಆದರೆ, ವರುಣ ಕ್ಷೇತ್ರ ಕಾರ್ಯಕರ್ತರ ಸಮಾವೇಶದಲ್ಲಿ ಕಾರ್ಯಕರ್ತರು ಸಿದ್ದರಾಮಯ್ಯ ಅವರನ್ನು ಅಭಿನಂದಿಸಲು ಮುಂದಾದರು. ದೊಡ್ಡ ದೊಡ್ಡ ಹಾರ ತಂದಿದ್ದವರಿಂದ ಹಾರ ಹಾಕದಂತೆ ತಾಕೀತು ಮಾಡುತ್ತಿದ್ದರು. ಆದರೆ, ಕ್ಷೇತ್ರದ ಮತದಾರರಾಗಿರುವುದರಿಂದ ಅನಿವಾರ್ಯವಾಗಿ ಕೆಲವೊಮ್ಮೆ ಹಾರ ಹಾಕಿಸಿಕೊಳ್ಳಬೇಕಾಯಿತು.

ಇದೇ ವೇಳೆ ಯುವಕರ ಗುಂಪೊಂದು ಬೆಳ್ಳಿಯ 2 ಗಧೆ ಹಾಗೂ ಖಡ್ಗವೊಂದನ್ನು ತಂದು ಉಡುಗೊರೆ ನೀಡಲು ಮುಂದಾದರು. ಅದನ್ನು ಸಿದ್ದರಾಮಯ್ಯ ಸ್ವೀಕರಿಸಲಿಲ್ಲ. ಕಾರ್ಯಕರ್ತರು ಬಲವಂತ ಮಾಡಿದ್ದರಿಂದ ಒಂದು ಗದೆಯನ್ನು ಸಚಿವ ಡಾ.ಮಹದೇವಪ್ಪ, ಇನ್ನೊಂದು ಗದೆಯನ್ನು ಮಾಜಿ ಶಾಸಕ ಡಾ.ಯತೀಂದ್ರ ಹಾಗೂ ಖಡ್ಗವನ್ನು ಸಚಿವ ಕೆವೆಂಕಟೇಶ್ ಸ್ವೀಕರಿಸಿ ಜನರ ಮುಂದೆ ಪ್ರದರ್ಶಿಸಿದರು. ಸಚಿವ ಡಾ.ಮಹದೇವಪ್ಪ ಮಾತನಾಡುತ್ತಿದ್ದ ವೇಳೆ ಸಿದ್ದರಾಮನಹುಂಡಿ ಸಮೀಪದ ಕಡೆಕಟ್ಟೆಹುಂಡಿಯಿಂದ ಐದಾರು ಮಂದಿ 2 ಬಂಡೂರು ಕುರಿಗಳನ್ನು ವೇದಿಕೆಗೆ ತಂದು ಸಿದ್ದರಾಮಯ್ಯ ಅವರಿಗೆ ನೀಡಲು ಪ್ರಯತ್ನಿಸಿದರು. ಆದರೆ, ಪೊಲೀಸರು ವೇದಿಕೆ ಏರಲು ತಡೆದರು. ಇದನ್ನು ಗಮನಿಸಿದ ಸಚಿವ ಹೆಚ್.ಸಿ.ಮಹದೇವಪ್ಪ ವೇದಿಕೆ ಮೇಲೆ ಬಿಡುವಂತೆ ಸೂಚಿಸಿದರು. ಬಳಿಕ ಸಿದ್ದರಾಮಯ್ಯರಿಗೆ ಕುರಿಗಳನ್ನು ನೀಡಲಾಯಿತು.

ನಾಳೆ ಮೈಸೂರಲ್ಲಿ ಶ್ರೀ ಚಾಮುಂಡೇಶ್ವರಿ ಪ್ರತಿಷ್ಠಾಪನಾ ಮಹೋತ್ಸವ



ಮೈಸೂರು, ಜೂ. 10(ಸಿಎನ್)– ಚಾಮುಂಡೇಶ್ವರಿ ನೈರುತ್ಯ ರೈಲ್ವೆ ನೌಕರರ ಬಡಾವಣೆಯಲ್ಲಿ, ನೂತನವಾಗಿ ನಿರ್ಮಾಣವಾಗಿರುವ ದೇವಸ್ಥಾನದಲ್ಲಿ, ಶ್ರೀ ಚಾಮುಂಡೇಶ್ವರಿ ಅಮ್ಮನವರ ಪ್ರತಿಷ್ಠಾಪನಾ ಕಾರ್ಯ ಜೂನ್ 12ರಂದು ನೆರವೇರಲಿದೆ ಎಂದು ದೇವಸ್ಥಾನ ಭಕ್ತ ಮಂಡಳಿ ಅಧ್ಯಕ್ಷರು ತಿಳಿಸಿದ್ದಾರೆ.

ವಿಶೇಷ ಆಹ್ವಾನಿತರಾಗಿ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಜಿ.ಟಿ.ದೇವೇಗೌಡರು ಆಗಮಿಸಿ, ದೇವಸ್ಥಾನ ಲೋಕಾರ್ಪಣೆಗೊಳಿಸಲಿದ್ದಾರೆ.

ಕಾರ್ಯಕ್ರಮಗಳ ವಿವರ: ಜೂ.11 ಭಾನುವಾರ ಸಂಜೆ 5 ಗಂಟೆಗೆ ಯಾಗ ಶಾಲೆ ಪ್ರವೇಶ, ಗಣಪತಿ ಪೂಜೆ, ಅಂಕುರ ಅರ್ಪಣೆ, ಪುಣ್ಯಾಹವಾಚನ, ನವಗ್ರಹಾರಾಧನೆ, ಕಲಶ ಸ್ಥಾಪನೆ, ಅದಿವಾಸಾಂಗ ಪೂಜೆಗಳು, ನವಗ್ರಹ ಪುರಸ್ಕರ ವಾಸ್ತು, ರಾಕ್ಷೋಘ್ನ–ಸುದರ್ಶನ ಹೋಮಗಳು, ದಿಕ್ಬಲಿ ನಡೆಯಲಿದೆ. 12ರ ಸೋಮವಾರ ಬೆಳಗ್ಗೆ ಗಂಗಾಪೂಜೆ, ನೇತ್ರೋನ್ಮಿಲನ, ಕಲಾಹೋಮ, ಲೋಕ ಕಲ್ಯಾಣಾರ್ಥವಾಗಿ ದುರ್ಗಾ ಹೋಮ, ಪೂರ್ಣಾಹುತಿ. 10.45 ಹಾಗೂ 11.30ರ ವೇಳೆಗೆ ಸಲ್ಲುವ ಶುಭ ಸಿಂಹ ಲಗ್ನದಲ್ಲಿ ಶೃಂಗ ಕಲಶ ಪ್ರತಿಷ್ಠಾಪನೆ, ಕುಂಭಾಭಿಷೇಕ ನಡೆಯಲಿದೆ. ಮ. 12.30ಕ್ಕೆ ಮಹಾಮಂಗಳಾರತಿ ಮತ್ತು ತೀರ್ಥ ಪ್ರಸಾದ ವಿನಿಯೋಗ ಏರ್ಪಡಿಸಲಾಗಿದೆ. ಕಾರ್ಯಕ್ರಮಗಳಿಗೆ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಬಂದು ದೇವಿ ಅನುಗ್ರಹಕ್ಕೆ ಪಾತ್ರರಾಗುವಂತೆ ಕೋರಲಾಗಿದೆ.



ಮೈಸೂರಿನ ವಿದ್ಯಾರಣ್ಯಪುರಂನ ಸಮಾನಮನಸ್ಕರ ಬಳಗದಿಂದ ನೂತನ ಶಾಸಕ ಟಿ.ಎಸ್.ಶ್ರೀವತ್ಸ ಅವರನ್ನು ಅಭಿನಂದಿಸಲಾಯಿತು. ಈ ವೇಳೆ ಸಮಾನಮನಸ್ಕರ ಬಳಗದ ಶ್ರೀಕಂಠಶರ್ಮ, ನಾಗೇಶ್, ಸತ್ಯಪ್ರಕಾಶ್, ಹೊಮ್ಮ ಮಂಜುನಾಥ್, ರಾಜಕುಮಾರ್, ಉಮಾಶಂಕರ್, ನಗರಪಾಲಿಕೆ ಸದಸ್ಯರಾದ ಮಾ.ವಿ. ರಾಮ್‌ಪ್ರಸಾದ್, ಎಮ್.ಸಿ.ರಮೇಶ್ ಹಾಗೂ ವಿಪ್ರ ಬಾಂಧವರು ಹಾಜರಿದ್ದರು.

ಜಾತಿ ಗಣತಿ ವರದಿ ಅನುಷ್ಠಾನಕ್ಕೆ ಒತ್ತಾಯ



ಮೈಸೂರು, ಜೂ.10(ಸಿಎನ್)–ರಾಜ್ಯದಲ್ಲಿ ಅಧಿಕಾರಕ್ಕೆ ಬಂದಿರುವ ನೂತನ ಕಾಂಗ್ರೆಸ್ ಸರ್ಕಾರ ಡಾ.ಕಾಂತರಾಜ್ ಅವರ ಜಾತಿ ಗಣತಿ ವರದಿಯನ್ನು ಅನುಷ್ಠಾನಕ್ಕೆ ತರಬೇಕೆಂದು ರಾಜ್ಯ ಕಾಯಕ ಸಮಾಜಗಳ ಒಕ್ಕೂಟದ ರಾಜ್ಯಾಧ್ಯಕ್ಷ ಕೆ.ಸಿ.ಪುಟ್ಟಸಿದ್ದಶೆಟ್ಟಿ ಮನವಿ ಮಾಡಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ನಮ್ಮ ಮನವಿಗಳನ್ನು ಈಡೇರಿಸುವಂತೆ ಕೋರಿ ಶೀಘ್ರದಲ್ಲೇ ಒಕ್ಕೂಟದ ನಿಯೋಗವೊಂದು ಸಿಎಂ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಲಿದೆ. ರಾಜ್ಯದಲ್ಲಿ ಕುಲಕಸುಬು ಆಧಾರಿತ ಕಾಯಕ ವರ್ಗಗಳಲ್ಲಿನ 195 ಜಾತಿಗಳು ಅತ್ಯಂತ ಹಿಂದುಳಿದಿವೆ. ಹೀಗಾಗಿ ಇವುಗಳ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಸಮಪಾಲು, ಸಮಬಾಳು ಎಂಬ ನೀತಿಗೆ ಅನುಗುಣವಾಗಿ ಕ್ರಮ ಕೈಗೊಳ್ಳಬೇಕಾಗಿದೆ ಎಂದರು.


ಜಾಗತೀಕರಣ, ಖಾಸಗೀಕರಣ ಮತ್ತು ಉದಾರೀಕರಣದಿಂದಾಗಿ ನಮ್ಮ ಕುಲಕಸುಬುಗಳು ಅವನತಿಯತ್ತ ಸಾಗುತ್ತಿವೆ. ಕಚ್ಚಾ ಸಾಮಗ್ರಿ, ಮಾರುಕಟ್ಟೆ ಸಮಸ್ಯೆಗಳು ಕಾಡುತ್ತಿವೆ. ಈ ಕಾರಣದಿಂದಾಗಿ ಜುಲೈನಲ್ಲಿ ಮಂಡಿಸಲಿರುವ ರಾಜ್ಯ ಬಜೆಟ್‌ನಲ್ಲಿ ಸಮಾಜಕ್ಕೆ 1000 ಕೋಟಿ ರೂ. ಅನುದಾನ ನೀಡಬೇಕೆಂದು ಮನವಿ ಮಾಡಲಿದ್ದೇವೆ ಎಂದರು. ಈ ವೇಳೆ ಶ್ರೀನಿವಾಸ್, ನಿವೃತ್ತ ಉಪನ್ಯಾಸಕ ಎಸ್.ನಂಜಪ್ಪ, ಗಾಣಿಗ ಸಮಾಜದ ಮುಖಂಡ ರಮೇಶ್ ಇದ್ದರು.

ಮಕ್ಕಳ ಸಿನಿಮಾಗೆ ಉತ್ತಮ ಪ್ರತಿಕ್ರಿಯೆ



ಮೈಸೂರು,ಜೂ.10(ಪಿಎಂ)–ನವಿಲುಗರಿ ಸಿನಿಮಾಸ್ ಬ್ಯಾನರ್‌ನಡಿ ನಿರ್ಮಾಣಗೊಂಡ 'ಬಾರಿಸು ಕನ್ನಡ ಡಿಂಡಿಮವ' ಸಿನಿಮಾ ಓಟಿಟಿ ಪ್ಲಾಟ್‌ಫಾರಂನಲ್ಲಿ ಬಿಡುಗಡೆಗೊಂಡಿದ್ದು, ಚಿತ್ರಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ ಎಂದು ಚಿತ್ರದ ನಿರ್ಮಾಪಕ, ನಿರ್ದೇಶಕ ಪಿ.ಬಿ.ನವಿಲುಗರಿ ನವೀನ್ ತಿಳಿಸಿದರು. ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮಕ್ಕಳೇ ಪ್ರಧಾನವಾಗಿ ಈ ಸಿನಿಮಾದಲ್ಲಿ ಅಭಿನಯಿಸಿದ್ದಾರೆ. ಶಾಲೆಯಲ್ಲಿ ಯೋಗ ಶಿಕ್ಷಣ ಅಗತ್ಯ, ಕನ್ನಡ ಮಾಧ್ಯಮದಲ್ಲಿ ಓದುವ ಮಕ್ಕಳೂ ಬುದ್ಧಿವಂತರೇ ಎಂಬ ಸಂದೇಶವನ್ನು ಸಿನಿಮಾ ಒಳಗೊಂಡಿದೆ. ಸರ್ಕಾರದ ಅನುಮತಿ ಪಡೆದು ಶಾಲೆಗಳಲ್ಲಿ ಈ ಚಿತ್ರ ಪ್ರದರ್ಶಿಸಲು ಉದ್ದೇಶಿಸಲಾಗಿದೆ ಎಂದರು. ಸಿನಿಮಾದ ಸಹ ನಿರ್ದೇಶಕಿ ಅಶ್ವಿಕ ಮೈಸೂರು, ಮುಖಂಡರಾದ ರಾಜಶೇಖರ್, ಅರ್ಪಣ ಪುಣ್ಯಕೋಟಿ, ಗೀತಾ ಶ್ರೀಧರ್, ಚಿತ್ರದಲ್ಲಿ ಅಭಿನಯಿಸಿರುವ ಮಕ್ಕಳು ಗೋಷ್ಠಿಯಲ್ಲಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

11.6.2023 ಭಾನುವಾರ, ಮಳೆ ನಕ್ಷತ್ರ: ಮೃಗಶಿರ, 08.06.2023ರಿಂದ 21.06.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ,
ಕೃಷ್ಣ ಪಕ್ಷ, ತಿಥಿ: ಅಷ್ಟಮಿ, ನಕ್ಷತ್ರ: ಪೂಭಾ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

■ **ಬ್ರಹ್ಮಕುಮಾರೀಸ್ ಯೂತ್ ವಿಂಗ್ :** ವೈ20 ಕಾರ್ಯಕ್ರಮ, ಚಾಲನೆ : ವಿದ್ಯಾ ವಿಕಾಸ್ ಎಜುಕೇಷನಲ್ ಟ್ರಸ್ಟ್ ಕಾರ್ಯದರ್ಶಿ ಕವೀಶ್‌ಗೌಡ, ಉಪಸ್ಥಿತರು : ಬಿಜೆಪಿ ಅಲ್ಪಸಂಖ್ಯಾತರ ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿ ಡಾ. ಅನಿಲ್ ಥಾಮಸ್, ಏರ್‌ಪೋರ್ಟ್ ಅಥಾರಿಟಿ ಆಫ್ ಇಂಡಿಯಾ ನಿವೃತ್ತ ನಿರ್ದೇಶಕ ಆರ್. ಮಂಜುನಾಥ್, ಮೈಸೂರು ವಿವೇಕಾನಂದ ಯೋಗ ಶಿಕ್ಷಣ ಮತ್ತು ಸಂಶೋಧನಾ ಕೇಂದ್ರದ ಸ್ಥಾಪಕ ಅಧ್ಯಕ್ಷ ಡಾ. ಪಿ.ಎನ್. ಗಣೇಶ್ ಕುಮಾರ್, ಸ್ಥಳ:ಕುಕ್ಕರಹಳ್ಳಿ ಕೆರೆ, ಬೆಳಗ್ಗೆ 6.30ಕ್ಕೆ.

■ **ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ :** ಮೈ ಗ್ರೀನ್ ವಸ್ತು ಪ್ರದರ್ಶನ, ಸ್ಥಳ: ನಂಜರಾಜ ಬಹದ್ದೂರ್ ಛೌಲ್ಟ್ರಿ, ಮೆಟ್ರೋಪೋಲ್ ಸರ್ಕಲ್, ಬೆಳಗ್ಗೆ 10 ರಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಅರ್ಧ ತಲೆನೋವಿನ ತೊಂದರೆಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 10ರಿಂದ.

■ **ಅರಸು ಜಾಗೃತಿ ಅಕಾಡೆಮಿ ಚಾರಿಟಬಲ್ ಟ್ರಸ್ಟ್:** ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರ 41ನೇ ವರ್ಷದ ಪುಣ್ಯಸ್ಮರಣೆ ಮತ್ತು ಸಾಧಕರಿಗೆ ಧ್ವನಿ ಕೊಟ್ಟ ದಣಿ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ: ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಮುಖ್ಯ ಅತಿಥಿಗಳು: ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಅರಸು ಜಾಗೃತಿ ಅಕಾಡೆಮಿ ಚಾರಿಟಬಲ್ ಟ್ರಸ್ಟ್ ಉಪಾಧ್ಯಕ್ಷ ಹೆಚ್.ಎ.ವೆಂಕಟೇಶ್, ಶತಮಾನೋತ್ಸವ ಸಂಭ್ರಮದ ಅರಸು ಸಂಘದ ಅಧ್ಯಕ್ಷ ಹೆಚ್.ಎಂ.ಟಿ.ಲಿಂಗರಾಜೇ ಅರಸ್, ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮೈಸೂರು ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕೋದ್ಯಮಿಗಳ ಸಂಘದ ಅಧ್ಯಕ್ಷ ಲಿಂಗರಾಜು, ಅಧ್ಯಕ್ಷತೆ : ತವರು ಅರಸು ಮಹಿಳಾ ಸಮಾಜದ ಅಧ್ಯಕ್ಷೆ ಶ್ರೀಮತಿ ವಿಜಯಲಕ್ಷ್ಮಿ ಅರಸ್, ಸ್ಥಳ: ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣ, ಬೆಳಗ್ಗೆ 10ಕ್ಕೆ.

■ **ಬಸವ ಸಮಿತಿ :** ಶರಣ ಸಂಗಮ–282, ದೀಕ್ಷಿತ್ ಆರೋಗ್ಯಧಾಮದ ಡಾ. ಸಿ.ಎಸ್. ಅನಿಲ್‌ಕುಮಾರ್ ದೀಕ್ಷಿತ್ ಅವರಿಂದ ಆರೋಗ್ಯಕ್ಕಾಗಿ ಕುಟುಂಬ ಕುರಿತು ಉಪನ್ಯಾಸ, ಅಧ್ಯಕ್ಷತೆ :ಬಸವ ಸಮಿತಿ ಅಧ್ಯಕ್ಷ ಹೆಚ್.ವಿ. ಬಸವರಾಜು, ಸ್ಥಳ: ಬಸವ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 10.30ಕ್ಕೆ

■ **ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ :** ಜಯಲಕ್ಷ್ಮೀಪುರಂ ಬಡಾವಣೆಯಲ್ಲಿ 30ನೇ ಸೇವಾ ಕೇಂದ್ರದ ಉದ್ಘಾಟನಾ ಸಮಾರಂಭ, ಸಾನ್ನಿಧ್ಯ : ಈವಿವಿ ಮುಖ್ಯ ಸಂಚಾಲಕರಾದ ರಾಜಯೋಗಿನಿ ಬಿ.ಕೆ.ಲಕ್ಷ್ಮೀಜಿ, ಉದ್ಘಾಟನೆ : ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಮುಖ್ಯ ಅತಿಥಿಗಳು : ಶಾಸಕ ಕೆ. ಹರೀಶ್‌ಗೌಡ, ಮುಖ್ಯ ಅತಿಥಿಗಳು : ಕೈಗಾರಿಕೋದ್ಯಮಿ ಡಾ. ಎಂ. ಜಗನ್ನಾಥ ಶೆಣೈ, ಮಹಾಜನ ಎಜುಕೇಷನ್ ಸೊಸೈಟಿ ಕಾರ್ಯದರ್ಶಿ ಶ್ರೀಮತಿ ವಿಜಯಲಕ್ಷ್ಮಿ ಭಾಗವತ್, ಸ್ಥಳ: ಬ್ರಹ್ಮಾಕುಮಾರೀಸ್, ರಾಘವೇಂದ್ರಸ್ವಾಮಿ ಮಠದ ಬೀದಿ, ಜಯಲಕ್ಷ್ಮಿಪುರಂ, ಬೆಳಗ್ಗೆ 10.30ಕ್ಕೆ.

■ **ಪಲಾಶ್ ಬಿದಪ್ಪ :** ಡಿಸೈನರ್ ಬೋಟಿಕ್ 'ಕ್ಲೋಸೆಟ್' ಉದ್ಘಾಟನಾ ಸಮಾರಂಭ, ಮುಖ್ಯ ಅತಿಥಿಗಳು: ಚಿತ್ರನಟಿ ಹರ್ಷಿತಾ ಪೂಣಚ್ಚ, ಶಾಸಕರಾದ ಅನಿಲ್ ಚಿಕ್ಕಮಾದು, ಎ.ಎಸ್.ಪೊನ್ನಣ್ಣ, ಹರೀಶ್‌ಗೌಡ, ಜಿ.ಡಿ.ಹರೀಶ್‌ಗೌಡ, ಪಾಲಿಕೆ ಸದಸ್ಯೆ ಭಾಗ್ಯ ಮಾದೇಶ್, ಸ್ಥಳ: ಗೋಕುಲಂ ಮುಖ್ಯ ರಸ್ತೆ, ಬೆಳಗ್ಗೆ 10.30ಕ್ಕೆ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಶ್ರೀ ಡಾ.ಬಾಲಗಂಗಾಧರನಾಥ ಸ್ವಾಮೀಜಿಯವರ ಒಕ್ಕಲಿಗರ ಸಂಘ:** ನೂತನ ಶಾಸಕರಿಗೆ ಸನ್ಮಾನ, ಅಧ್ಯಕ್ಷತೆ: ನಿವೃತ್ತ ಪೊಲೀಸ್ ಅಧಿಕಾರಿ ಮೊಗಣ್ಣೇಗೌಡ, ಪ್ರಾಸ್ತಾವಿಕ ಭಾಷಣ: ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸನ್ಮಾನಿತರು: ಶಾಸಕ ಕೆ.ಹರೀಶ್‌ಗೌಡ, ಮುಖ್ಯ ಅತಿಥಿಗಳು: ಜಿಪಂ ಮಾಜಿ ಅಧ್ಯಕ್ಷ ಕೆ.ಮರೀಗೌಡ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 10.30ಕ್ಕೆ.

■ **ವಿಶ್ವ ಚೇತನ ಬಳಗ :** ನಾಲ್ವಡಿ ಕೃಷ್ಣರಾಜ ಒಡೆಯರ್ 139ನೇ ಜಯಂತಿ, ಅಧ್ಯಕ್ಷತೆ: ಲೇಖಕ ಕಾಳಿಹುಂಡಿ ಶಿವಕುಮಾರ್, ಹಿರಿಯ ಸಾಹಿತಿ ಇಂದಿರಾ ಹೆಚ್.ಪಾಟೀಲ್ ಅವರಿಂದ ಒಡೆಯರ್ ಒಂದು ನೆನಪು ಕುರಿತು ಉಪನ್ಯಾಸ, ಮುಖ್ಯ ಅತಿಥಿಗಳು: ನೃತ್ಯಗಾರ್ತಿ ಡಾ.ಎಂ.ಎನ್.ಯದುಗಿರಿ ಗೋಪಾಲನ್, ಹಿರಿಯ ವಾಗ್ಮಿ ವಿ.ನಾರಾಯಣರಾವ್, ಶ್ರೇಷ್ಠ ಶಿಕ್ಷಕ ಪ್ರಶಸ್ತಿ ಪುರಸ್ಕೃತರು: ಕೆ.ಪಿ.ಬೋರೇಗೌಡ, ಶ್ರೇಷ್ಠ ದೈಹಿಕ ಶಿಕ್ಷಕಿ ಪ್ರಶಸ್ತಿ : ಶ್ರೀಮತಿ ಟಿ.ಜೆ. ವಿಮಲ, ಮೈಸೂರು ಸಿರಿ ರತ್ನ ಪ್ರಶಸ್ತಿ : ಶ್ರೀಮತಿ ಎ.ಎಸ್. ವಾಣಿಸುಬ್ಬಯ್ಯ, ಸ್ಥಳ: ನಮನ ಕಲಾ ಮಂಟಪ, ಕೃಷ್ಣಮೂರ್ತಿಪುರಂ, ಮಧ್ಯಾಹ್ನ 2 ಗಂಟೆಯಿಂದ.

■ **ಶ್ರೀ ರಾಘವೇಂದ್ರ ಸ್ವಾಮಿ ಬೃಂದಾವನ ಸನ್ನಿಧಾನ:** ಶ್ರೀ ರಾಘವೇಂದ್ರ ಸ್ವಾಮಿ 76ನೇ ಬೃಂದಾವನ ಪ್ರತಿಷ್ಠಾಪನಾ ವರ್ಧಂತ್ಯುತ್ಸವ ಜ್ಞಾನಸತ್ರ, ಪಂಡಿತ್ ವಿದ್ವಾವಾಚಸ್ಪತಿ ಶ್ರೀ ಪ್ರಭಂಜನಾಚಾರ್ಯ ವ್ಯಾಸನಕೆರೆ ಅವರಿಂದ ಶ್ರೀ ಮನ್ಮಹಾಭಾರತ ಪ್ರವಚನ, ಸ್ಥಳ: ಶ್ರೀ ರಾಯರ ಮಠ, ಕೃಷ್ಣಮೂರ್ತಿಪುರಂ, ಸಂಜೆ 6ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ:** ಸ್ವಾಮಿ ಅಘಹರಾನಂದರಿಂದ ಸೋದರ ಸಂನ್ಯಾಸಿಗಳೊಂದಿಗೆ ಸ್ವಾಮಿ ವಿವೇಕಾನಂದರು ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಸಂಜೆ 6ಕ್ಕೆ.

■ **ಶ್ರೀ ಕೃಷ್ಣಗಾನಸಭಾ:** ಶ್ರೀಮತಿ ಗಿರಿಜಾ ಮತ್ತು ಪಿ.ವಿ.ಭಾರದ್ವಾಜ್ ಅವರ ಚಿಕ್ಕಬಳ್ಳಾಪುರದ ಚೀಲನಹಳ್ಳಿ ಶಾಲಾ ಸಹಾಯಾರ್ಥ ಸಂಗೀತ ಕಾರ್ಯಕ್ರಮ, ಕು. ತಾರಾ ಕಮಲಕಾಂತಾ ಅವರಿಂದ ಗಾಯನ, ವಿದ್ವಾನ್ ಎಂ.ಡಿ.ಅರ್ಜುನ–ಪಿಟೀಲು, ವಿದುಷಿ ಈಶ್ವರಿ ರಮೇಶ–ಮೃದಂಗ, ಸ್ಥಳ: ಆಳ್ವಾರ್ ಕಲಾಭವನ, ಶ್ರೀ ಕೃಷ್ಣ ದೇವಸ್ಥಾನ, ಗೋಕುಲಂ ಮೂರನೇ ಹಂತ, ಸಂಜೆ 6ಕ್ಕೆ.

■ **ಶಶಿ ಥಿಯೇಟರ್:** ಶಶಿ ಥಿಯೇಟರ್ ಕಲಾವಿದರಿಂದ 'ಉರಿಯ ಉಯ್ಯಾಲೆ' ನಾಟಕ ಪ್ರದರ್ಶನ, ರಚನೆ: ಡಾ.ವೆಂಕಟೇಶ್‌ಮೂರ್ತಿ, ನಿರ್ದೇಶನ: ಶಶಿಕಲಾ, ಸ್ಥಳ: ರಮಾಗೋವಿಂದ ರಂಗಮಂದಿರ, ಸಂಜೆ 6.30ಕ್ಕೆ.

■ **ರಂಗಾಯಣ:** ರಂಗಾಯಣದ ಕಿರಿಯ ರೆಪರ್ಟರಿ ಕಲಾವಿದರಿಂದ ಚಂದ್ರಗಿರಿ ತೀರದಲ್ಲಿ ನಾಟಕ ಪ್ರದರ್ಶನ, ರಚನೆ: ಡಾ.ಸಾರಾ ಅಬೂಬಕ್ಕರ್, ನಿರ್ದೇಶನ: ಅಮಿತ್ ಜೆ. ರೆಡ್ಡಿ, ಸ್ಥಳ: ಭೂಮಿಗೀತ ರಂಗಮಂದಿರ, ಸಂಜೆ 6.30ಕ್ಕೆ.

ಕಳಲೆಯಲ್ಲಿಂದು, ನಂಜನಗೂಡು ತಾ.

■ **ಕಳಲೆ ಶ್ರೀ ರಾಕಾಸಮ್ಮನವರ ದೇವಸ್ಥಾನ ಟ್ರಸ್ಟ್:** ಕಳಲೆ ಶ್ರೀ ರಾಕಾಸಮ್ಮನವರ ದೇವಸ್ಥಾನದ 6ನೇ ವಾರ್ಷಿಕೋತ್ಸವ, ಬೆಳಗ್ಗೆ ಗಣಪತಿ ಹೋಮ, ನವಗ್ರಹ ಹೋಮ, ವಾಸ್ತು ಹೋಮ, ದುರ್ಗಿ ಹೋಮ, ಶಾಂತಿ ಹೋಮ, ವಿಶೇಷ ಪೂಜೆ, ಮಧ್ಯಾಹ್ನ 1ಕ್ಕೆ ಅನ್ನ ಸಂತರ್ಪಣೆ, ಸ್ಥಳ: ದೇವಸ್ಥಾನದ ಆವರಣ, ಕಳಲೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.30 ಮೈಸೂರಿನ ಯೋಗ ವಿದ್ಯಾಪರಂಪರೆ–ಬಾನುಲಿ ಸರಣಿ, ಪ್ರಸ್ತುತಿ–ಡಾ. ಎ.ಎಸ್. ಚಂದ್ರಶೇಖರ್, 6.35 ಬದುಕು ಮಣ್ಣಿನೊಂದಿಗೆ–ಬಾನುಲಿ ಸರಣಿ, ಲೇಖನ ಮತ್ತು ಪ್ರಸ್ತುತಿ–ಎ.ಪಿ.ಚಂದ್ರಶೇಖರ್, 6.40 ಪದ ಸಂಸ್ಕೃತಿ, ಪ್ರಸ್ತುತಿ–ಡಾ.ಜ್ಯೋತಿ ಶಂಕರ್, 9.45 ನಮ್ಮ ಆರೋಗ್ಯ–ಗರ್ಭಿಣಿಯರಿಗೆ ಸಕ್ಕರೆ ಕಾಯಿಲೆ ಎಷ್ಟು ಸಿಹಿ–ಕುರಿತು ತಿಳಿಸಿಕೊಡಲಿದ್ದಾರೆ ಡಾ.ಶಿಲ್ಪಾ ಎನ್.ವಿಜಯ್, 10.00 ಕೇಳಿ ಗಿಳಿಗಳೇ–ಕಥೆ ಕೇಳು ಪುಟ್ಟಾ–ಕಥೆ ಹೇಳುತ್ತಾರೆ ಬಿ.ಜಿ.ಕವಿತಾ, 10.30 ಮಕ್ಕಳ ಮಂಟಪ–ಮೈಸೂರಿನ ಲಿಂಗಾಂಬುಧಿಯಲ್ಲಿರುವ ಅರಿವು ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರನಾಮ–ಸುಧಾ ಮಂಜುನಾಥ್, 12.45 ಜನಪದ ಸಂಗೀತ–ನಾಗಣ್ಣ ಮತ್ತು ಸಂಗಡಿಗರು–ತತ್ವಪದಗಳು, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆಗಳು–ಆರತಿ ಆನಂದ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.45 ಯಕ್ಷಗಾನ ತಾಳ ಮದ್ದಲೆ, ಪ್ರಸಂಗ–ಭಕ್ತ ಮಯೂರ ಧ್ವಜ, ಪ್ರಸ್ತುತಿ– ಪೈವಳಿಕೆಯ ಬೆನಕ ಯಕ್ಷ ಕಲಾ ವೇದಿಕೆಯ ಸದಸ್ಯರು, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.55 ಕೃಷಿರಂಗ–ಜಾನುವಾರು ಆರೋಗ್ಯ ಹಾಗೂ ಉತ್ಪಾದನೆ ಮೇಲೆ ವಾತಾವರಣ ಉಷ್ಣಾಂಶದ ಪರಿಣಾಮ ಕುರಿತು ಡಾ.ವಿದ್ಯಾಲಕ್ಷ್ಮಿ ಜಿ.ಎಂ. ಅವರೊಂದಿಗೆ ಸಂದರ್ಶನ. ಸಂದರ್ಶಕರು–ಜಿ.ಶಾಂತಕುಮಾರ್, 8.00 ವಿಶಿಷ್ಟ ವ್ಯಕ್ತಿ–ವಿಶೇಷ ಯತ್ನ–ಬಾನುಲಿ ಸರಣಿ. ಆರೋಗ್ಯ ಬುತ್ತಿ ಸಂಸ್ಥೆಯ ಆಲೂರು ಮೂರ್ತಿ ಅವರೊಂದಿಗೆ ಸಂವಾದ. ಭಾಗವಹಿಸುವವರು ದಿವಾಕರ ಹೆಗಡೆ, 9.15 ರಂಗಗೀತೆಗಳು–ಸುಭದ್ರ ಪರಿಣಯ ನಾಟಕದ ಹಾಡುಗಳು, 9.30 ಸವಿನೆನಪು, 10.00 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ ಅಶ್ವಿನಿ ಶ್ರೀನಿವಾಸ್–ವೇಣುವಾದನ

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 11 ಭಾನುವಾರ 2023

ಸಂಪುಟ: 44 | ಸಂಚಿಕೆ: 56 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಜೀರೋ ಟ್ರಾಫಿಕ್ ಕಲ್ಪಿಸಿದ್ದಕ್ಕೆ ಸಿಎಂ ಗರಂ



ಮೈಸೂರು ವಿಮಾನ ನಿಲ್ದಾಣದಿಂದ ಜಿಲ್ಲಾ ಪಂಚಾಯಿತಿವರೆಗೆ ಜೀರೋ ಟ್ರಾಫಿಕ್ ಕಲ್ಪಿಸಿದ್ದಕ್ಕೆ ನಗರ ಪೊಲೀಸ್ ಆಯುಕ್ತರ ಮೇಲೆ ಮುಖ್ಯಮಂತ್ರಿ ಸಿದ್ದರಾಮಯ್ಯ ಗರಂ ಆದ ಪ್ರಸಂಗ ನಡೆಯಿತು. ಜೀರೊ ಟ್ರಾಫಿಕ್ ಏಕೆ ಮಾಡಿದ್ದೀರಾ? ನನಗೆ ಜೀರೋ ಟ್ರಾಫಿಕ್ ಸೌಲಭ್ಯ ಬೇಡ ಅಂತ ಹೇಳಿರೋದು ನಿಮಗೆ ಗೊತ್ತಿದೆಯಾ ಎಂದು ಸಿಎಂ ಪ್ರಶ್ನಿಸಿದರು. ಪೊಲೀಸ್ ಆಯುಕ್ತರು ಏನೂ ಮಾತನಾಡದೆ ಮೌನವಾಗಿದ್ದರು. ಆಗ ಮಾತು ಮುಂದುವರೆಸಿದ ಸಿಎಂ, 'ಡೋಂಟ್ ಡು ದಟ್'(ಹಾಗೆ ಮಾಡಬೇಡಿ) ಎಂದರು. ಜಿಲ್ಲಾ ಪಂಚಾಯ್ತಿಯಿಂದ ರಾಮಕೃಷ್ಣನಗರದ ನಿವಾಸಕ್ಕೆ ಸಿಎಂ ತೆರಳುವ ವೇಳೆ ಜೀರೋ ಟ್ರಾಫಿಕ್ ಕಲ್ಪಿಸಿರಲಿಲ್ಲ. ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಬಳಿಕ ಸಿದ್ದರಾಮಯ್ಯ ಜೀರೊ ಟ್ರಾಫಿಕ್ ಸೌಲಭ್ಯ ತ್ಯಜಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

ಚುನಾವಣೆ ಹೊಸ್ತಿಲ ಮುಡಾ ನಿರ್ಣಯಗಳಿಗೆ ಸಿಎಂ ಬ್ರೇಕ್

ಜಿಲ್ಲಾ ಮಟ್ಟದ ಅಧಿಕಾರಿಗಳ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು, ವಿಧಾನಸಭಾ ಚುನಾವಣೆಗೆ 2–3 ತಿಂಗಳಿರುವಾಗ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಕೈಗೊಂಡ ಯಾವ ನಿರ್ಣಯಗಳನ್ನೂ ಅನುಷ್ಠಾನಕ್ಕೆ ತರಬಾರದು. ಸಿಎ ನಿವೇಶನ, ಬದಲಿ ನಿವೇಶನ ಸೇರಿದಂತೆ ಯಾವುದನ್ನೂ ಜಾರಿಗೊಳಿಸಬಾರದು ಎಂದು ಪ್ರಾಧಿಕಾರದ ಆಯುಕ್ತ ಜಿ.ಟಿ.ದಿನೇಶ್ ಕುಮಾರ್‌ಗೆ ಖಡಕ್ ಸೂಚನೆ ನೀಡಿದರು.

ಸಾರಿಗೆ ಸಂಸ್ಥೆ ವಿಭಾಗಗಳ ವಿಲೀನ; 2 ಡಿಪೋ ಬಂದ್

ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಿ ನಿರ್ಧಾರ: ಸಿಎಂ

ಕೆಎಸ್‌ಆರ್‌ಟಿಸಿ ಮೈಸೂರು ನಗರ ವಿಭಾಗ ಹಾಗೂ ಗ್ರಾಮಾಂತರ ವಿಭಾಗವನ್ನು ವಿಲೀನಗೊಳಿಸಿದ ಪರಿಣಾಮ ಹಳ್ಳಿಗಳಿಗೆ ಸರಿಯಾಗಿ ಬಸ್ ಸಂಚರಿಸುತ್ತಿಲ್ಲ. ಇನ್ನೂ ಸಾಕಷ್ಟು ಸಮಸ್ಯೆಗಳಾಗಿವೆ ಎಂದು ಚಾಮುಂಡೇಶ್ವರಿ ವಿಧಾನಸಭಾ ●9ನೇ ಪುಟಕ್ಕೆ

ಸರ್ಕಾರದ ಜೊತೆಗೆ ಆಡಳಿತ ವ್ಯವಸ್ಥೆಯೂ ಬದಲಾಗಬೇಕು

ಮೈಸೂರಲ್ಲಿ ಅಧಿಕಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಕೆ

● ಮೈಸೂರು ಜಿಲ್ಲಾ ಪಂಚಾಯ್ತಿ ಸಭಾಂಗಣದಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಆಡಳಿತ ಪಾಠ ● ಪ್ರಜಾಪ್ರಭುತ್ವದಲ್ಲಿ ಜನರೇ ಮಾಲೀಕರು; ನಾವು, ನೀವು ಅವರ ಕೆಲಸ ಮಾಡಲು ಇರುವುದು ● ಕಾರ್ಯಬದ್ಧತೆ ಪ್ರದರ್ಶಿಸದ ಅಧಿಕಾರಿಗಳಿಗೆ ವರ್ಗಾವಣೆ ಮಾತ್ರವಲ್ಲ ಮುಲಾಜಿಲ್ಲದೆ ಶಿಸ್ತು ಕ್ರಮ





ಮೈಸೂರಿಗೆ ಭೇಟಿ ನೀಡಿದ್ದ ಸಿದ್ದರಾಮಯ್ಯನವರು, ಜಿಪಂ ಸಭಾಂಗಣದಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳ ಸಭೆ ನಡೆಸಿದರು. ಸಚಿವರಾದ ಕೆ.ವೆಂಕಟೇಶ್, ಡಾ.ಹೆಚ್.ಸಿ.ಮಹದೇವಪ್ಪ, ಶಾಸಕರಾದ ಜಿ.ಟಿ.ದೇವೇಗೌಡ, ತನ್ವೀರ್ ಸೇಠ್ ಮತ್ತಿತರರು ಪಾಲ್ಗೊಂಡಿದ್ದರು.

ಮೈಸೂರು, ಜೂ.10(ಎಸ್‌ಬಿಡಿ)– **ಸರ್ಕಾರದ ಜೊತೆಗೆ ಆಡಳಿತ ವ್ಯವಸ್ಥೆಯೂ ಬದಲಾಗಬೇಕು. ಈ ನಿಟ್ಟಿನಲ್ಲಿ ಅಧಿಕಾರಿಗಳು ಎಚ್ಚರಿಕೆಯಿಂದ ಕಾರ್ಯ ನಿರ್ವಹಿಸಬೇಕು. ನಿರ್ಲಕ್ಷ್ಯಿಸಿದರೆ ವರ್ಗಾವಣೆ ಮಾತ್ರವಲ್ಲ ಅಂತಹವರ ವಿರುದ್ಧ ಮುಲಾಜಿಲ್ಲದೆ ಕ್ರಮ ಕೈಗೊಳ್ಳುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರಿಗಳಿಗೆ ಚಾಟಿ ಬೀಸಿದ್ದಾರೆ.**

ಎರಡನೇ ಬಾರಿ ಮುಖ್ಯಮಂತ್ರಿಯಾದ ಬಳಿಕ ಇದೇ ಮೊದಲು ಮೈಸೂರಿಗೆ ಭೇಟಿ ನೀಡಿ, ಜಿಲ್ಲಾ ಪಂಚಾಯ್ತಿ ಸಭಾಂಗಣದಲ್ಲಿ ಶನಿವಾರ ಜಿಲ್ಲಾ ಮಟ್ಟದ ಅಧಿಕಾರಿಗಳ ಮೊದಲ ಸಭೆ ನಡೆಸಿದ ಅವರು, ಜಿಲ್ಲಾ ಉಸ್ತುವಾರಿ ಸಚಿವರು ಪ್ರಗತಿ ಪರಿಶೀಲನಾ ಸಭೆ(ಕೆಡಿಪಿ ಮೀಟಿಂಗ್)ನಡೆಸುತ್ತಾರೆ. ಹಾಗಾಗಿ ಇಲಾಖಾವಾರು ವಿಮರ್ಶೆ ಮಾಡಲು ಹೋಗುವುದಿಲ್ಲ. ನಾನಿಂದು ಅಧಿಕಾರಿಗಳಿಗೆ ಎಚ್ಚರಿಕೆ ನೀಡಲು ಬಂದಿದ್ದೇನೆ ಎಂದು ಹೇಳಿದರು. ಸರ್ಕಾರ ಬದಲಾವಣೆಯಾಗಿದೆ ಹಿಂದಿನ ಸರ್ಕಾರ ಹೋಗಿ ಹೊಸ ಸರ್ಕಾರ ●9ನೇ ಪುಟಕ್ಕೆ

ಉಸ್ತುವಾರಿ ಸಚಿವರಿಗೂ ಮುಖ್ಯಮಂತ್ರಿ ಪಾಠ!

ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸಭೆಯಲ್ಲಿ ಅಧಿಕಾರಿಗಳಿಗೆ ಮಾತ್ರವಲ್ಲ ಜಿಲ್ಲಾ ಉಸ್ತುವಾರಿ ಸಚಿವರಿಗೂ ಸೂಚನೆ ನೀಡಿದರು. ಜಿಲ್ಲಾ ಉಸ್ತುವಾರಿ ಸಚಿವರು ಹೇಗಿರುತ್ತಾರೋ ಅಧಿಕಾರಿಗಳೂ ಹಾಗೆಯೇ ಇರುತ್ತಾರೆ. ನೀವು ಆರಾಮವಾಗಿದ್ದರೆ ಅವರೂ ಆರಾಮವಾಗಿರುತ್ತಾರೆ. ಬರೀ ಅಧಿಕಾರಿಗಳನ್ನು ತಪ್ಪಿತಸ್ಥರನ್ನಾಗಿ ಮಾಡಬಾರದು. ನಿಮ್ಮ ತಪ್ಪುಗಳನ್ನೂ ಸರಿಪಡಿಸಿಕೊಂಡು ಅಧಿಕಾರಿಗಳೊಂದಿಗೆ ಕಾರ್ಯ ನಿರ್ವಹಿಸಬೇಕೆಂದು ತಿಳಿಸಿದರು.

ಕುಡಿಯುವ ನೀರಿಗೆ ಸಮಸ್ಯೆಯಾಗದಂತೆ ಕ್ರಮ ಕೈಗೊಳ್ಳಿ

● ಅಧಿಕಾರಿಗಳಿಗೆ ಸಿಎಂ ಸೂಚನೆ ● ಬೆಳೆ ನಷ್ಟವಾಗದಂತೆಯೂ ಎಚ್ಚರಿಕೆ ವಹಿಸಿ

ಮೈಸೂರು, ಜೂ.10(ಎಸ್‌ಬಿಡಿ)– ಕುಡಿಯುವ ನೀರು ಸರಬರಾಜು ಹಾಗೂ ಬೆಳೆ ನಷ್ಟವಾಗದಂತೆ ಎಚ್ಚರಿಕೆಯಿಂದ ಸರಿದೂಗಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಜಿಲ್ಲಾಡಳಿತಕ್ಕೆ ಸೂಚನೆ ನೀಡಿದರು. ಜಿಲ್ಲಾ ಮಟ್ಟದ ಅಧಿಕಾರಿಗಳ ಸಭೆಯಲ್ಲಿ ನೀರಿನ ಲಭ್ಯತೆ ಬಗ್ಗೆ ಮುಖ್ಯಮಂತ್ರಿಗಳಿಗೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಸುಮಾರು 20 ದಿನಗಳವರೆಗೆ ಕುಡಿಯುವ ನೀರಿಗೆ ಸಮಸ್ಯೆ ಆಗುವುದಿಲ್ಲ, ಇನ್ನೆರಡು ದಿನಗಳಲ್ಲಿ ಮಳೆ ಆರಂಭವಾಗುವುದಾಗಿ ಮಾಹಿತಿ ಇದೆ ಎಂದರು. ಇದಕ್ಕೆ ಪೂರಕ ಮಾಹಿತಿ ನೀಡಿದ ನೀರಾವರಿ ಇಲಾಖೆ ಅಧಿಕಾರಿಗಳು, ಜುಲೈವರೆಗೆ ಕುಡಿಯುವ ನೀರಿಗೆ ಸಮಸ್ಯೆಯಾಗುವುದಿಲ್ಲ. ಆದರೆ ಮಂಡ್ಯದ ರೈತರು ಕಬ್ಬು ಬೆಳೆಗೆ ನೀರು ಬಿಡುವಂತೆ ಒತ್ತಾಯಿಸುತ್ತಿದ್ದಾರೆ. ಹೇಮಾವತಿ ಜಲಾಶಯದಲ್ಲಿ 15 ಟಿಎಂಸಿ ನೀರಿದ್ದು, ಅಲ್ಲಿಂದ ನೀರು ಪಡೆಯಬಹುದು ಎಂದು ತಿಳಿಸಿದರು.



ಯಾವುದೇ ಕಾರಣಕ್ಕೂ ಕುಡಿಯುವ ನೀರಿಗೆ ತೊಂದರೆಯಾಗಬಾರದು. ಕುಡಿಯುವ ನೀರು ಕಲ್ಪಿಸಿ ಹಾಗೂ ಅಗತ್ಯವಿರುವ ಬೆಳೆಗೆ ನೀರು ಕಲ್ಪಿಸಿ ಪರಿಸ್ಥಿತಿಯನ್ನು ಸರಿದೂಗಿಸಬೇಕು. ಮಳೆ ವಿಳಂಬವಾದರೆ ಕುಡಿಯುವ ನೀರಿಗೆ ಆದ್ಯತೆ ನೀಡಬೇಕು. ಇದು ಜಿಲ್ಲಾಧಿಕಾರಿ ಹಾಗೂ ಸಿಇಓ ಜವಾಬ್ದಾರಿ. ಹಣದ ಕೊರತೆಯಿಲ್ಲ. ಆದರೆ ಅಧಿಕಾರಿಗಳ ತಪ್ಪಿನಿಂದ ಕುಡಿಯುವ ●9ನೇ ಪುಟಕ್ಕೆ

ತಮಿಳುನಾಡಿಗೆ ನೀರು ಬಿಡುವ ಪ್ರಶ್ನೆಯೇ ಇಲ್ಲ

"ನಮ್ಮ ಬಳಿ ನೀರು ಇದ್ದರೆ ತಾನೇ ತಮಿಳುನಾಡಿಗೆ ನೀರು ಬಿಡಲು ಸಾಧ್ಯ. ಸದ್ಯಕ್ಕೆ ನೀರು ಬಿಡುವ ಪ್ರಶ್ನೆಯೇ ಇಲ್ಲ. ನೀರು ಕೊಡಬಾರದು ಎಂಬುದೇನಿಲ್ಲಾ. ಆದರೂ ಮೊದಲು ನಮ್ಮ ಬೆಳೆಗಳಿಗೆ, ಕುಡಿಯಲು ಬಳಕೆ ಮಾಡಿಕೊಳ್ಳಬೇಕು. ನಾಡಹಬ್ಬ ಮೈಸೂರು ದಸರಾ ಆಚರಣೆ ಸಂಬಂಧ ಹೈ ಪವರ್ ಮೀಟಿಂಗ್ ಕರೆದು ಪ್ರತ್ಯೇಕ ದಸರಾ ಪ್ರಾಧಿಕಾರ ಮಾಡಬೇಕೇ ಬೇಡವೇ ಎಂಬುದರ ಕುರಿತು ಚರ್ಚಿಸಿ, ನಿರ್ಧರಿಸಲಾಗುವುದು.

–ಸಿದ್ದರಾಮಯ್ಯ, ಮುಖ್ಯಮಂತ್ರಿ (ಮಾಧ್ಯಮಗಳಿಗೆ ಪ್ರತಿಕ್ರಿಯೆ)

ವರುಣ ಕ್ಷೇತ್ರದ ಮತದಾರರು, ಕಾರ್ಯಕರ್ತರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕೃತಜ್ಞತೆ ಸಲ್ಲಿಕೆ

ಲೋಕಸಭಾ ಚುನಾವಣೆಯಲ್ಲಿ 20 ಸ್ಥಾನ ಗೆದ್ದೇ ಗೆಲ್ತೀವಿ

ಮೈಸೂರು, ಜೂ.10(ಎಂಟಿವೈ)– ಕೇಂದ್ರದ ಬಿಜೆಪಿ ಸರ್ಕಾರ ಕೊಟ್ಟ ಭರವಸೆಗಳನ್ನು ಈಡೇರಿಸಲು ಆಗದೆ ವಚನ ಭ್ರಷ್ಟವಾಗಿದೆ. ಈ ಕಾರಣದಿಂದ ಬಿಜೆಪಿ ವಿರುದ್ಧ ಆಡಳಿತ ವಿರೋಧಿ ಅಲೆ ದೇಶದುದ್ದಗಲಕ್ಕೂ ಇರುವುದರಿಂದ 2024ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲುವು ಸಾಧಿಸುತ್ತದೆ. ನಾವು ಬಂದ ನಂತರ ಇಂಧನ, ರಸಗೊಬ್ಬರ ಹಾಗೂ ಅಡುಗೆ ಅನಿಲದ ಬೆಲೆ ಕಡಿಮೆ ಮಾಡುತ್ತೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದ್ದಾರೆ.

ವರುಣ ಕ್ಷೇತ್ರದ ಬಿಳಿಗೆರೆ ಗ್ರಾಮದಲ್ಲಿ ಆಯೋಜಿಸಿದ್ದ ವರುಣ ಕ್ಷೇತ್ರದ ಮತದಾರರು ಹಾಗೂ ಕಾಂಗ್ರೆಸ್ ಕಾರ್ಯಕರ್ತರ ಕೃತಜ್ಞತಾ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು. ಬಿಜೆಪಿ ನಾಯಕರು ಸುಳ್ಳುಗಳನ್ನೇ ಸತ್ಯ ಎಂದು ನಂಬಿಸುವ ಕೆಲಸ ಮಾಡುತ್ತಿದ್ದಾರೆ. ಪ್ರಧಾನಿ ಮೋದಿ ಸೇರಿದಂತೆ ಕೇಂದ್ರ ನಾಯಕರು ಕಳೆದ ಲೋಕಸಭಾ ಚುನಾವಣೆಯಲ್ಲಿ ನೀಡಿದ್ದ ಭರವಸೆಯನ್ನು ಈಡೇರಿಸದೆ ವಚನ ಭ್ರಷ್ಟರಾಗಿದ್ದಾರೆ. ●6ನೇ ಪುಟಕ್ಕೆ



ಇದೇ ನನ್ನ ಕೊನೆ ಚುನಾವಣೆ; ಆದರೆ ಉಸಿರಿರೋವರೆಗೆ ಜನಸೇವೆ, ಸಕ್ರಿಯ ರಾಜಕಾರಣದಲ್ಲಿರ್ತಿನಿ

ಮೈಸೂರು, ಜೂ.10(ಎಂಟಿವೈ)–ಇದು ನನ್ನ ಕೊನೆ ಚುನಾವಣೆ. ಆದರೆ, ಉಸಿರಿರೋವರೆಗೂ ಜನರ ಸೇವೆ ಮಾಡಲು ಸಕ್ರಿಯ ರಾಜಕಾರಣದಲ್ಲಿರುತ್ತೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಪಾದಿಸಿದ್ದಾರೆ. ನಾನು ಮೊದಲೇ ಹೇಳಿದ್ದೆ, ಇದು ನನಗೆ ಕೊನೆ ಚುನಾವಣೆ. ಅದಕ್ಕಾಗಿ ನನ್ನ ಸ್ವಗ್ರಾಮ ಇರುವ ತವರು ಕ್ಷೇತ್ರ ವರುಣದಿಂದಲೇ ಸ್ಪರ್ಧಿಸುತ್ತೇನೆ ಎಂದಿದ್ದೆ. ನಾನು ಕೊಟ್ಟ ಮಾತಿಗೆ ಈಗಲೂ ಬದ್ಧ. ಮಾತು ಉಳಿಸಿಕೊಳ್ಳುತ್ತೇನೆ. ಮುಂದೆ ನಾನು ಚುನಾವಣೆಯಲ್ಲಿ ●6ನೇ ಪುಟಕ್ಕೆ

ವರುಣ ಕ್ಷೇತ್ರದ ಮತದಾರರೇ ನನ್ನ ರಾಜಕೀಯ ಏಳಿಗೆಗೆ ಕಾರಣ

ಮೈಸೂರು, ಜೂ.10(ಎಂಟಿವೈ)– ಎರಡು ಬಾರಿ ಮುಖ್ಯಮಂತ್ರಿ, ವಿರೋಧ ಪಕ್ಷದ ನಾಯಕ ಸ್ಥಾನ ಸಿಗಲು ವರುಣ ಕ್ಷೇತ್ರದ ಜನತೆ ನೀಡಿದ ಕೊಡುಗೆ ಅಪಾರ. ಕ್ಷೇತ್ರದ ಜನತೆಗೆ ಸದಾ ಆಭಾರಿಯಾಗಿರುತ್ತೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕೃತಜ್ಞತೆ ಸಲ್ಲಿಸಿದ್ದಾರೆ.

ವರುಣ ಕ್ಷೇತ್ರದ ಕಾರ್ಯಕರ್ತರ ಅಭಿನಂದನಾ ಸಭೆಯಲ್ಲಿ ಮಾತನಾಡಿದ ಅವರು, ಈ ಬಾರಿ ಚುನಾವಣೆಯಲ್ಲಿ ನನ್ನನ್ನು ಗೆಲ್ಲಿಸಲೇಬೇಕೆಂದು ಪಕ್ಷದ ಕಾರ್ಯಕರ್ತರು, ಕ್ಷೇತ್ರದ ಜನರು ಹಗಲಿರುಳು ಹೋರಾಟ ಮಾಡಿ ಐತಿಹಾಸಿಕ ಜಯ ತಂದುಕೊಟ್ಟಿದ್ದೀರಿ. ನಾನು ಮೊದಲ ಅವಧಿಯಲ್ಲಿ ಮುಖ್ಯಮಂತ್ರಿಯಾಗಿದ್ದಾಗ ಜನಪರ, ಬಡವರ ಪರ ಕೆಲಸ ಮಾಡಿದ್ದೇನೆ. ಕೊಟ್ಟ ಭರವಸೆಯನ್ನೆಲ್ಲಾ ಈಡೇರಿಸಿದ್ದೇನೆ. ಆ ಮೂಲಕ ನಮ್ಮದು ನುಡಿದಂತೆ ನಡೆದ ಸರ್ಕಾರ ಎಂದು ಹೆಸರು ಉಳಿಸಿಕೊಂಡಿದ್ದೇವೆ. ನೀವು (ವರುಣ ಜನತೆ) ನನ್ನನ್ನು ಶಾಸಕನಾಗಿ ಆಯ್ಕೆ ಮಾಡದೇ ಇದ್ದರೆ, ನಾನು ಸಿಎಂ ಆಗುತ್ತಿರಲಿಲ್ಲ. 2013ರಲ್ಲಿ ಬಸವ ಜಯಂತಿ ದಿನವೇ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿ, ಬಡವರ ಹಸಿವು ನೀಗಿಸಲು ಅನ್ನಭಾಗ್ಯ ಯೋಜನೆ ಜಾರಿಗೊಳಿಸಿದೆ. ಇದೇ ನಮಗೂ ಬಿಜೆಪಿಗೂ ಇರುವ ವ್ಯತ್ಯಾಸ ಎಂದರು.

ರಾಜಕೀಯ ಅನುಭವ: ಕಳೆದ ಮೂರು ತಿಂಗಳಿಂದ ನಾನು ಎಲ್ಲಾ ಸಂದರ್ಶನದಲ್ಲೂ ಹೇಳುತ್ತಾ ಬಂದಿದ್ದೆ. ಈ ಬಾರಿ ಕಾಂಗ್ರೆಸ್‌ಗೆ 130 ರಿಂದ 140 ಸ್ಥಾನ ಬರುತ್ತದೆ ಎಂದಿದ್ದೆ. ಕೆಲವು ಮಾಧ್ಯಮಗಳು ಸಮೀಕ್ಷಾ ವರದಿ ಪ್ರಕಟಿಸಿ, 98 ರಿಂದ 108 ಸ್ಥಾನ ಬರುತ್ತದೆ ಎಂದಿದ್ದವು. ಆದರೂ ನಾನು 130 ಕ್ಕಿಂತ ಹೆಚ್ಚು ಸ್ಥಾನ ಲಭಿಸುತ್ತದೆ ಎನ್ನುತ್ತಲೇ ಇದ್ದೆ. ಹೇಗೆ ಇಷ್ಟು ನಿಖರವಾಗಿ ಹೇಳುತ್ತೀರಿ ಎಂದು ಕೆಲವರು ಪ್ರಶ್ನಿಸಿದ್ದರು. ನನ್ನ ನಾಲ್ಕು ದಶಕಗಳ ರಾಜಕೀಯ ಜೀವನದ ಅನುಭವದಲ್ಲಿ ಹೇಳಿದ್ದೇನೆ ಎಂದಿದ್ದೆ. ಈಗ ನಾವು 135+1 ಸ್ಥಾನ ಪಡೆದಿದ್ದೇವೆ ಎಂದರು.

ಬಿಜೆಪಿ ಭ್ರಷ್ಟಾಚಾರ: ರಾಜ್ಯದಲ್ಲಿದ್ದ ಬಿಜೆಪಿ ಸರ್ಕಾರ ಕಡು ಭ್ರಷ್ಟ ಸರ್ಕಾರವಾಗಿತ್ತು. ಅಕ್ರಮ ನೇಮಕಾತಿ, ಕಮಿಷನ್ ದಂಧೆ, ವರ್ಗಾವಣೆ ದಂಧೆ ಸೇರಿದಂತೆ ಹಲವು ಹಗರಣ ನಡೆಸಿತ್ತು. ಇದರ ನಡುವೆ ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರಿತ್ತು. ಈ ಎಲ್ಲಾ ಅಂಶಗಳಿಂದ ರಾಜ್ಯದ ಜನತೆ ಬೇಸತ್ತಿದ್ದರು. ಈ ಹಿಂದಿನ ಕಾಂಗ್ರೆಸ್ ಸರ್ಕಾರ ಯೋಜನೆ, ಕಾರ್ಯಕ್ರಮಗಳನ್ನು ಕಂಡು ಈ ಬಾರಿಯೂ ಜನಪರ, ಬಡವರ ಪರವಾದ ಸರ್ಕಾರ ಬೇಕೆಂದು ಕಾಂಗ್ರೆಸ್‌ಗೆ ಬೆಂಬಲ ●6ನೇ ಪುಟಕ್ಕೆ

ಕಾಂಗ್ರೆಸ್‌ನ ಐದು ಗ್ಯಾರಂಟಿಗಳಲ್ಲಿ ಶಕ್ತಿಗೆ ಚಾಲನೆ

ಇಂದಿನಿಂದ ಸಾರಿಗೆ ಬಸ್‌ಗಳಲ್ಲಿ ಮಹಿಳೆಯರು, ವಿದ್ಯಾರ್ಥಿನಿಯರಿಗೆ

ಉಚಿತ ಪ್ರಯಾಣ

● ಬೆಂಗಳೂರು ವಿಧಾನಸೌಧದ ಮುಂದೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ● ಸದ್ಯಕ್ಕೆ ಕೇಂದ್ರ, ರಾಜ್ಯದ ಯಾವುದೇ ಗುರುತಿನ ಚೀಟಿ ನೀಡಿ ಪ್ರಯಾಣಿಸಬಹುದು ● ಅಂತರ ರಾಜ್ಯ ಸಾರಿಗೆ ಬಸ್‌ನಲ್ಲಿ ಅವಕಾಶವಿಲ್ಲ: ಶೇ.50 ಸೀಟು ಗಂಡಸರಿಗೆ ಮೀಸಲು ● ಸದ್ಯದಲ್ಲೇ ಸ್ಮಾರ್ಟ್ ಕಾರ್ಡ್ ವಿತರಣೆ

ಬೆಂಗಳೂರು, ಜೂ.10(ಕೆಎಂಶಿ)– ವಿಧಾನಸಭಾ ಚುನಾವಣಾ ಪೂರ್ವದಲ್ಲಿ ಕಾಂಗ್ರೆಸ್ ನೀಡಿದ್ದ ಐದು ಗ್ಯಾರಂಟಿಗಳಲ್ಲಿ ಮೊದಲನೆಯದಾಗಿ ಮಹಿಳೆಯರು ಮತ್ತು ವಿದ್ಯಾರ್ಥಿನಿಯರಿಗೆ ಭಾನುವಾರದಿಂದ ಸರ್ಕಾರಿ ಬಸ್ಸುಗಳಲ್ಲಿ ಉಚಿತ ಪ್ರಯಾಣ ಜಾರಿಗೆ ಬರಲಿದೆ. ನಗರ ಮತ್ತು ರಾಜ್ಯ ರಸ್ತೆ ಸಾರಿಗೆಯ ಸಾಮಾನ್ಯ ಬಸ್ಸುಗಳಲ್ಲಿ ರಾಜ್ಯದ ಯಾವುದೇ ಮೂಲೆಯಿಂದ ಇನ್ನೊಂದು ಮೂಲೆಗೆ ●6ನೇ ಪುಟಕ್ಕೆ



ಕೆಬಿಜಿಯವರ ಛೂಮಂತ್ರ... ಛೂಮಂತ್ರ...



ಮೈಸೂರು ಮಕ್ಕಾಜಿ ಚೌಕ ರಸ್ತೆಗೆ ಮುಕ್ತಿ!

ಪಕ್ಷಭೇದವಿಲ್ಲದೆ ಒಂದು ಇತಿಹಾಸ ಪ್ರಸಿದ್ಧ ರಸ್ತೆ ಮುಚ್ಚಲು ಸಮ್ಮತಿಸಿದ ಮೈಸೂರು ಮಹಾನಗರ ಪಾಲಿಕೆಯ ಸ್ವಾರ್ಥ ಸದಸ್ಯರು!

■ ಪುಟ–4

😂 ನಕ್ಕರೆ ಅದೇ ಸ್ವರ್ಗ

ಅತ್ತೆ : "ಹಾಲು ಉಕ್ಕಿ ಚೆಲ್ಲುತ್ತಿದ್ದರೂ ಸುಮ್ನೆ ನೋಡ್ತಿದ್ದೀಯಲ್ಲ?"

ಸೊಸೆ : "ಹಾಲು ಉಕ್ಕುತ್ತೆ, ನೋಡ್ತಾ ಇರು ಅಂತ ನೀವೇ ಹೇಳಿದ್ರಲ್ಲ ಅತ್ತೆ"

ಮೈಸೂರು ಮಿತ್ರ

ಭಾನುವಾರ, 11 ಜೂನ್ 2023

ಸತ್ಯೇನೋತ್ತಭಿತಾ ಭೂಮಿಃ!!
ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ:
ಎಂ.ಗೋವಿಂದೇಗೌಡ M.A.

ಅಮೃತವಾಹಿನಿ...

ಬೇಸರಿಸದ ಎಚ್ಚರದ ದುಡಿಮೆಯಿಂದ ಯಾವುದೇ ವೃತ್ತಿಯಲ್ಲಿ ಖಂಡಿತಾ ಯಶಸ್ಸು ಸಾಧ್ಯ. –ವೆಬ್ಸ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ನಡೀತಾ ಇದ್ರೆ ನಂಟು,
ಬೆಳಗ್ತಾ ಇದ್ರೆ ಕಂಚು

ನಿಮ್ಮ ಪತ್ರಗಳು

ಪ್ರಜಾಪ್ರಭುತ್ವದಲ್ಲಿ ಬಹುಮತದ ಅಧಿಕಾರ ಪಡೆದು ಪದವಿ ಏರಿದವರಿಗೆ ಸಮಷ್ಟಿ ಹಿತದ ಪ್ರಜ್ಞೆ ಇರಬೇಕು

ಮಾನ್ಯರೇ

ಮತದಾರನಿಗೂ ಮತ ಹಾಕುವ ಮುನ್ನ ತಾನು ನಾವೆಲ್ಲಾ ಒಪ್ಪಿಕೊಂಡು ಬಂದಿರುವ ಸಾಮೂಹಿಕ ಆಡಳಿತ ವ್ಯವಸ್ಥೆಯ ಪ್ರತಿನಿಧಿಯನ್ನು ಆರಿಸಲು ನನ್ನ ಕರ್ತವ್ಯ ಮಾಡುತ್ತಿದ್ದೇನೆ ಎಂಬ ಅರಿವಿರಬೇಕೆ ಹೊರತು ನಾನು ಮತ ಹಾಕುವುದರಿಂದ ನನಗೇನು ವೈಯಕ್ತಿಕ ಲಾಭ ಸಿಗುತ್ತದೆ ಎಂಬ ದುರಾಸೆ ಇರಬಾರದು.

ಸಾಮೂಹಿಕ ಹಿತಚಿಂತನೆಯ ವ್ಯಕ್ತಿಗೆ, ಪಕ್ಷಕ್ಕೆ ನನ್ನ ಮತ, ಆತನಿಂದ ಎಲ್ಲರಿಗೂ ಒಳಿತನ್ನು ನಿರೀಕ್ಷಿಸೋಣ, ಪಕ್ಷಪಾತವಿಲ್ಲದ ಸಂಪನ್ಮೂಲದ ಪ್ರಾಮಾಣಿಕ ಬಳಕೆಯ ಸ್ವಾತಂತ್ರ್ಯವನ್ನು ಯಾರ ಕೈಗೆ ಒಪ್ಪಿಸಿದರೆ ಆ ಉದ್ದೇಶ ನೆರವೇರೀತು ಎಂಬ ಸ್ಪಷ್ಟ ಕಲ್ಪನೆ ಇರಬೇಕು. ಯಾವುದೋ ಪ್ರಲೋಭನೆಗೆ ಒಳಗಾಗಿ ತನ್ನ ಮತವನ್ನು ಮಾರಿಕೊಳ್ಳುವ ಇಂತಹ ದುಡುಕಿನ ವಿವೇಚನಾರಹಿತ ನಿರ್ಧಾರಗಳು ತಾನು ಕುಳಿತ ಮರದ ಕೊಂಬೆಯನ್ನು ತಾನೇ ಕಡಿದುಕೊಳ್ಳುವ ಮೂರ್ಖತನಕ್ಕೆ ಸಮನಾದೀತು.

ಹೀಗೆ ಮೋಸ ಹೋಗುವವರು ಇರುತ್ತಾರೆ ಎಂಬ ನಂಬಿಕೆಯಿಂದಲೇ ಭಂಡ ವ್ಯಕ್ತಿಗಳು ನಮ್ಮನ್ನು ಆಳುತ್ತಾ ಯಾವ ನಾಚಿಕೆಯೂ ಇಲ್ಲದೇ ನಾವು ಹೇಗೆ ಇವರನ್ನು ಮೋಸಗೊಳಿಸಿದೆವು ಎಂದು ಬೀಗುತ್ತಾರೆ. ಇದು ಪ್ರಜಾಪ್ರಭುತ್ವ ವ್ಯವಸ್ಥೆಯ ಅಣಕವಷ್ಟೇ ಅಲ್ಲ ದುರಂತ ಕೂಡಾ.

ಮುಂದಿನ ಅವಕಾಶ ಸಿಗುವವರೆಗೂ ನಮ್ಮ ತಪ್ಪಿಗೆ ನಮ್ಮನ್ನೇ ಹಳಿದುಕೊಳ್ಳುತ್ತಾ ಮುಂದೆಯೂ ಪಾಠ ಕಲಿಯದೇ ಮರುಕಳಿಸುವ ತಪ್ಪನ್ನು ಮಾಡುತ್ತಾ ಇರುವುದೇ ವಿಪರ್ಯಾಸ ಅನ್ನಿಸುತ್ತದೆ. ಯಾವ ಮಾನದಂಡಗಳಲ್ಲಿ ಈಗ ನಾವು ಚುನಾಯಿಸಿರುವ ಸರ್ಕಾರ ಹಿಂದಿನಕ್ಕಿಂತ ಭಿನ್ನವಾಗಿ ನಮ್ಮ ಬದುಕನ್ನು ಹಸನುಗೊಳಿಸೀತು. ಅವರು ನಮಗೆ ನೀಡಲಾಗದ ಯಾವ ಸೌಲಭ್ಯವನ್ನು ಸಾಮೂಹಿಕವಾಗಿ ಜನತೆಗೆ ಇವರು ನೀಡಿಯಾರು ಎನ್ನುವುದನ್ನು ಒಂದರೆಕ್ಷಣ ಯೋಚಿಸಿ ನಮ್ಮ ಮತ ನಿರ್ಣಯ ಮಾಡಿದ್ದರೆ ಇಂತಹ ಪಾಪ ಪ್ರಜ್ಞೆಯಿಂದ ಬಚಾವ್ ಆಗಬಹುದಿತ್ತೇನೋ?


–ಶಿವಮೊಗ್ಗ ನಾ. ದಿನೇಶ್ ಅಡಿಗ, ಮೈಸೂರು

ವರನಟನ ಹೆಸರಿನ ರಸ್ತೆಗೆ ಈ ದುರವಸ್ಥೆಯೇ?

ಮಾನ್ಯರೆ,

ಮೈಸೂರಿನ ಕಲ್ಯಾಣಗಿರಿಯ ಡಾ. ರಾಜಕುಮಾರ್ ರಸ್ತೆಯಲ್ಲಿ (ಕೆಇಬಿ ಸರ್ಕಲ್‌ನಿಂದ ಟೆರೇಷಿಯನ್ ಕಾಲೇಜು ತನಕ) ಇತ್ತೀಚೆಗೆ ರಸ್ತೆ ವಿಭಜಕವಾದಾಗಿನಿಂದ ವಾಹನಗಳು ವೇಗದ ಪರಿಮಿತಿಯನ್ನೂ ಲೆಕ್ಕಿಸದೆ, ಅತಿಯಾದ ಸದ್ದಿನಿಂದ ಚಲಿಸುತ್ತವೆ. ಈ ರಸ್ತೆಯಲ್ಲಿ ಅಕ್ಕಪಕ್ಕ ಅನೇಕ ಮನೆಗಳಿವೆ. ಆದರೆ ಮನೆಗಳಲ್ಲಿ ಶಾಂತಿಯುತವಾದ ಜೀವನ ನಡೆಸಲಾಗುತ್ತಿಲ್ಲ. ಕಿವಿಗಡಚಿಕ್ಕುವ ಶಬ್ದದಿಂದ ವಾಹನಗಳ ರಭಸಕ್ಕೆ ಅನೇಕ ಸಲ ಬೆಚ್ಚಿ ಬೀಳುವಂತಾಗುತ್ತದೆ. ರಾತ್ರಿ 11 ರವರೆಗೆ ರಭಸದಿಂದ ಜೋರಾಗಿ, ಅತಿ ವೇಗವಾಗಿ ಬಹಳ ಸದ್ದು ಮಾಡುತ್ತಾ ನೆಮ್ಮದಿಯನ್ನೇ ಕೆಡಿಸುತ್ತವೆ. ಮಕ್ಕಳಾದಿಯಾಗಿ ವೃದ್ಧರು, ಅನಾರೋಗ್ಯವುಳ್ಳವರು ಆಗಾಗ ಬೆಚ್ಚಿ ಬೀಳುವಂತಾಗುತ್ತದೆ. ಒಮ್ಮೊಮ್ಮೆ ಎದೆಯೇ ಒಡೆದು ಹೋಗುವಂತೆ, ತಕ್ಷಣವೇ ಜೋರಾಗಿ ಬೆಚ್ಚಿ ಬೀಳುವಂತಾಗುತ್ತದೆ. ಹೃದಯ ಸ್ಥಂಬನವಾದರೂ ಸರಿಯೇ. ಸಂಬಂಧಪಟ್ಟ ಪೊಲೀಸ್ ಇಲಾಖೆಯವರು ತಕ್ಷಣವೇ ಈ ಸಮಸ್ಯೆಯನ್ನು ಪರಿಹಾರ ಮಾಡಲು ಸೂಕ್ತ ಕ್ರಮ ಕೈಗೊಳ್ಳಬೇಕಾಗಿ ಮನವಿ.

–ಜಯಂತಿ, ಕಲ್ಯಾಣಗಿರಿ, ಮೈಸೂರು.



ಕೆಬಿಜಿಯವರ

ಭೂಮಂತ್ರ... ಭೂಮಂತ್ರ... ಭೂಮಂತ್ರ...

ಮೈಸೂರು ಮಕ್ಕಾಜಿ ಚೌಕ ರಸ್ತೆಗೆ ಮುಕ್ತಿ!

ಪಕ್ಷಭೇದವಿಲ್ಲದೆ ಒಂದು ಇತಿಹಾಸ ಪ್ರಸಿದ್ಧ ರಸ್ತೆ ಮುಚ್ಚಲು ಸಮ್ಮತಿಸಿದ ಮೈಸೂರು ಮಹಾನಗರ ಪಾಲಿಕೆಯ ಸ್ವಾರ್ಥ ಸದಸ್ಯರು!

ಇದೇ ಜೂನ್ 9, 2023ರಂದು ಬಹುತೇಕ ಬೆಳಗಿನ ಪತ್ರಿಕೆಗಳಲ್ಲಿ ಒಂದು ಪ್ರಮುಖ ಸುದ್ದಿ ಪ್ರಕಟವಾಗಿತ್ತು. ಅದು ನಗರದ ಹೃದಯ ಭಾಗದಲ್ಲಿರುವ ಪುರಭವನಕ್ಕೆ ಹೊಂದಿಕೊಂಡಿರುವ ಮಕ್ಕಾಜಿ ಚೌಕ ಎಂಬ, ನಗರ ಪಾಲಿಕೆಗೆ ಸೇರಿದ ಒಂದೂಕಾಲು ಎಕರೆ ಪ್ರದೇಶಕ್ಕೆ ಸಂಬಂಧಿಸಿದ್ದಾಗಿತ್ತು.

ಮೈಸೂರು ನಗರದ ಎಲ್ಲಾ ಹಾಲಿ ಹಾಗೂ ಮಾಜಿ ಪಾಲಿಕೆ ಸದಸ್ಯರು ಈ ಸುದ್ದಿಯನ್ನು ಓದಿರಬಹುದು. ಅಧಿಕಾರಿಗಳೂ ಸಹ ಈ ಸುದ್ದಿಯನ್ನು ನೋಡಿರಲೂ ಬಹುದು. ಒಂದು ಪತ್ರಿಕೆ ಸ್ವಲ್ಪ ವಿವರವಾಗಿ ಕೊಟ್ಟ ಶೀರ್ಷಿಕೆ ಹೀಗಿತ್ತು: **'ಮಕ್ಕಾಜಿ ಚೌಕ ಹಾದು ಹೋಗುವ ವಿನೋಬಾ ರಸ್ತೆಗೆ ಮುಕ್ತಿ. ಕೋರ್ಟ್ ಆದೇಶದ ಹಿನ್ನೆಲೆಯಲ್ಲಿ ಅಡೆತಡೆ ತೆರವು. 16 ವರ್ಷದಿಂದ ಸಂಚಾರಕ್ಕೆ ರಸ್ತೆ ಬಂದ್ ಆಗಿತ್ತು. ಈಗ ಸಯ್ಯಾಜಿ ರಾವ್ ರಸ್ತೆಯಿಂದ ಮಕ್ಕಾಜಿ ಚೌಕದ ಮೂಲಕ ಗಾಂಧಿ ವೃತ್ತ ತಲುಪುವುದು ಸರಾಗ'**.

ಏನಿದು ಪ್ರಸಂಗ?: ಪ್ರಜಾಪ್ರಭುತ್ವದಲ್ಲಿ ಈ ರೀತಿಯ ಪ್ರಕರಣ ಅಥವಾ ಜನ ವಿರೋಧಿ ಕೆಲಸ ಜನಪ್ರತಿನಿಧಿಗಳ ನಿರ್ಣಯದಿಂದ ಆಗಲು ಸಾಧ್ಯವೇ? ಹಾಗಾದರೆ ನಗರದ ಲಕ್ಷಾಂತರ ಜನರು, ಮಹಾರಾಜರ ಕಾಲದಿಂದಲೂ ಉಪಯೋಗಿಸಿಕೊಂಡು ಬಂದ ರಸ್ತೆಯನ್ನು ದಿಢೀರ್ ಸಾರ್ವಜನಿಕರ ಸಂಚಾರ ನಿರ್ಬಂಧಿಸಿ, ಬಂದ್ ಮಾಡಿದ ಆಗಿನ (2006) ನಗರ ಪಾಲಿಕೆ ಚುನಾಯಿತ ಜನ ವಿರೋಧಿ ಸದಸ್ಯರ ಒಮ್ಮತದ ನಿರ್ಣಯಕ್ಕೆ ಏನು ಹೇಳಬೇಕು? ಈ ರೀತಿ ರಸ್ತೆ ಬಂದ್ ಮಾಡುವುದರಲ್ಲಿ ಜನರ ಹಿತಾಸಕ್ತಿ ಅಡಗಿದೆಯೇ?

ವಿವಿಧ ಪಕ್ಷಕ್ಕೆ ಅಂದರೆ ಕಾಂಗ್ರೆಸ್, ಬಿಜೆಪಿ ಹಾಗೂ ಜೆಡಿಎಸ್ ಜೊತೆಗೆ ಸ್ವತಂತ್ರ ಅಭ್ಯರ್ಥಿಗಳು ಸೇರಿದಂತೆ ಪಾಲಿಕೆಯ 65 ಸದಸ್ಯರು ಒಮ್ಮತದಿಂದ, ಒಬ್ಬಿಬ್ಬರನ್ನು ಬಿಟ್ಟರೆ, 2006ರಲ್ಲಿ ಮಕ್ಕಾಜಿ ಚೌಕಕ್ಕೆ ಸಂಬಂಧಿಸಿದಂತೆ ಒಂದು ಕಾಲು ಎಕರೆ ($1^1/_4$) ಜಾಗವನ್ನು (ರಸ್ತೆ ಸೇರಿ) ಮೇವರಿಕ್ ಹೋಲ್ಡಿಂಗ್ಸ್ ಅಂಡ್ ಇನ್ವೆಸ್ಟ್‌ಮೆಂಟ್ ಪ್ರೈವೇಟ್ ಲಿಮಿಟೆಡ್‌ನವರಿಗೆ "ಬೂಟ್" (Boot) ಆಧಾರದ ಮೇರೆಗೆ ಶಾಪಿಂಗ್ ಅಂಡ್ ಎಂಟರ್‌ಟೈನ್‌ಮೆಂಟ್ ಮಾಲ್ (ವಾಣಿಜ್ಯ ಸಂಕೀರ್ಣ) ನಿರ್ಮಿಸಲು 25 ವರ್ಷಗಳ ಅವಧಿಗೆ ಗುತ್ತಿಗೆ ನೀಡಿದ್ದರು. ಇದರ ವರದಿ ಸವಿವರವಾಗಿ ಈಗಾಗಲೇ ಪತ್ರಿಕೆಗಳಲ್ಲಿ ಅನೇಕ ಬಾರಿ ಪ್ರಕಟವಾಗಿದೆ. ಅದರ ಪುನರಾವರ್ತನೆ ಈಗ ಇಲ್ಲಿ ಅನವಶ್ಯಕ. **ಆದರೆ ತೆರಿಗೆ ಕೊಡುವ ನಗರದ ಜನರಿಗೆ ಹಾಗೂ ಇಲ್ಲಿಗೆ ಬರುವ ಲಕ್ಷಾಂತರ ವ್ಯಾಪಾರ–ವಹಿವಾಟು ಮಾಡುವ ಜನರಿಗೆ ಆಪತ್ತು ಬಂದೊದಗಿದ್ದು 2007ರಲ್ಲಿ ಮೇವರಿಕ್ ಸಂಸ್ಥೆಯವರು ಈ '50x274' ಅಡಿ ರಸ್ತೆಯನ್ನು ಬಂದ್ ಮಾಡಿದ್ದಲ್ಲಿಂದ.**

ಈ ರಸ್ತೆಗೆ ಮುಕ್ತಿ ದೊರೆತ ಸುವಾರ್ತೆ ಬಂದ ನಂತರ ಈ ರಸ್ತೆಗೆ 'ಬಿಡುಗಡೆ ಭಾಗ್ಯ' ತಂದು ಕೊಟ್ಟ ಆ ಮಹಾ ಸಾಧಕರು, ಧೀರರನ್ನು ನೋಡಬೇಕು, ಮಾತನಾಡಿಸಬೇಕು, ಅವರನ್ನು ಅಭಿನಂದಿಸಬೇಕು ಎಂದೆನಿಸಿತು ನನಗೆ. ಅವರೇ **ಮೈಸೂರು ರಕ್ಷಣಾ ವೇದಿಕೆ ಅಧ್ಯಕ್ಷ ಮೈಕಾ ಪ್ರೇಮ್‌ಕುಮಾರ್, ವೇದಿಕೆಯ ಸಲಹೆಗಾರ ಎಂ.ಎ. ಮೋಹನ**. ಇವರಲ್ಲಿ ನನ್ನ ಭೇಟಿಗೆ ಲಭ್ಯವಾಗಿದ್ದು **ಪ್ರೇಮ್ ಕುಮಾರ್ ಮಾತ್ರ**. ಒಬ್ಬ ಮಧ್ಯ ವಯಸ್ಸಿನ, ಚುರುಕು ನಡೆ–ನುಡಿಯ, ಛಲ ಬಿಡದ ಹೋರಾಟಗಾರ. ಬಿಜೆಪಿ ಸಂಬಂಧವಿದ್ದ, ವೃತ್ತಿಯಲ್ಲಿ ಒಬ್ಬ ಎಲೆಕ್ಟ್ರಿಕಲ್ ಮೆಕ್ಯಾನಿಕ್ (ITI) ಆಗಿರುವ ಸರಳ ವ್ಯಕ್ತಿ ಇವರು. ದೇವರಾಜ ಅರಸು ರಸ್ತೆಗೆ ಹೊಂದಿಕೊಂಡಿರುವ ಗಲ್ಲಿಯಲ್ಲಿರುವ ಅವರ ಅತೀ ಚಿಕ್ಕ ಕಚೇರಿಯಲ್ಲಿ ಅವರನ್ನು ಭೇಟಿಯಾದೆ.

ನಿಮ್ಮ ಕಚೇರಿಗೆ ನಾನೇ ಬರುತ್ತೇನೆ. ನೀವಿಲ್ಲಿಗೆ ಬರೋದು ಬೇಡ ಎಂದು ಅವರು ಕೇಳಿಕೊಂಡರೂ ನಾನು ಒಪ್ಪಲಿಲ್ಲ. ಈ ರೀತಿಯ ಅಸಾಧ್ಯವಾದ ಸಾರ್ವಜನಿಕರ ಸೇವೆಯನ್ನು, ಅದೂ ಪ್ರಭಾವಿ ರಾಜಕಾರಣಿಗಳನ್ನು ಹಾಗೂ ಪ್ರಭಾವಿ ವಾಣಿಜ್ಯೋದ್ಯಮಿಗಳನ್ನು ಎದುರಾಕಿಕೊಂಡು, ಯಾವ ಒಂದು ಆಮಿಷಕ್ಕೂ ಒಳಗಾಗದೆ, ಇಲ್ಲಿವರೆಗೆ ಹೋರಾಟ ನಡೆಸಿ, ಗೆದ್ದು ಬಂದು ನಮ್ಮ ಮುಂದೆ ಎದ್ದು ನಿಂತ ವ್ಯಕ್ತಿ. ಇವರ ಸಾಹಸ ಬೈಬಲ್ಲಿನಲ್ಲಿ ಬರುವ ಡೇವಿಡ್ ಅಂಡ್ ಗೋಲಿಯತ್ ನೀತಿ ಕಥೆಯಂತೆ ಅಂದುಕೊಂಡೆ.


ಇವರನ್ನು ಮಾತನಾಡಿಸಿದ ಮೇಲೆ ನನಗನಿಸಿದ್ದು: ನಮ್ಮ ಸಮಾಜದಲ್ಲಿರುವ ತುಂಬಾ ಇಂಗ್ಲೀಷ್ ಮಾತನಾಡುವ, ಭಾರೀ ವಿದ್ಯಾವಂತರಾದ, ಐಡಿಯಾಲಜಿ ಬಗ್ಗೆ ಮಾತನಾಡುವ, ಬಡವರ ಬಗ್ಗೆ ಪುಂಖಾನುಪುಂಖವಾಗಿ ಮಾತನಾಡುವ, ದೊಡ್ಡ ದೊಡ್ಡ ಹುದ್ದೆಯಲ್ಲಿದ್ದು, ನಿವೃತ್ತರಾಗಿ ಎನ್‌ಜಿಓ ಎಂಬ ಸಂಸ್ಥೆಗಳನ್ನು ಸ್ಥಾಪನೆ ಮಾಡಿ ನಗರ, ಜಿಲ್ಲೆ ರಾಜ್ಯದ ಹಿರಿಯ ಅಧಿಕಾರಿಗಳೊಂದಿಗೆ ನೇರವಾಗಿ ಫೋನಿನಲ್ಲೇ ಸಂಪರ್ಕದಲ್ಲಿರುವ ಸಾಮಾಜಿಕ ಕಾರ್ಯಕರ್ತರೆಲ್ಲಿ, ಮೈಸೂರಿನವರೇ ಆದ ಈ ಮೈ.ಕಾ. ಪ್ರೇಮ್‌ಕುಮಾರ್, ಅವರ ವೇದಿಕೆಯ ಸಲಹೆಗಾರ ಎಂ.ಎ. ಮೋಹನ್ ಎಲ್ಲಿ? ಇವರಿಬ್ಬರನ್ನು ಹೋಲಿಸಲು ಸಾಧ್ಯ ವಿಲ್ಲ ಬಿಡಿ. ಬೀದಿ ಹೋರಾಟದಿಂದ ಗೆಲ್ಲಲಾಗದ್ದನ್ನು ಇವರು ಹಾಗೂ ಇವರ ಕೆಲವು ಸಹಪಾಠಿಗಳು ನ್ಯಾಯಾ ಲಯವನ್ನು **'ದೇವಾಲಯ'** ಎಂದು ಪರಿಗಣಿಸಿ, ನ್ಯಾಯಾಲಯಗಳಿಗೆ ಸತತ 17 ವರ್ಷಗಳ ಕಾಲ ನಿರಂತರವಾಗಿ ಅಲೆದು ಈಗ ಸದ್ಯಕ್ಕೆ ಬಯಸಿದ ವರವನ್ನು ಪಡೆದಿದ್ದಾರೆ. ಈ ಪ್ರಕರಣದಲ್ಲಿ ಮೈಸೂರು ರಕ್ಷಣಾ ವೇದಿಕೆಯ ಅಧ್ಯಕ್ಷ ಮೈ.ಕಾ.ಪ್ರೇಮ್‌ಕುಮಾರ್, ವೇದಿಕೆಯ ಸಲಹೆಗಾರ ಎಂ.ಎ. ಮೋಹನ್ ಸೇರಿದಂತೆ ಒಟ್ಟು 64 ಮಂದಿ ಅರ್ಜಿದಾರರಾಗಿದ್ದರೂ, ಕೊನೆವರೆಗೆ ಛಲ ಬಿಡದೇ ತ್ರಿವಿಕ್ರಮರಂತೆ ಕಾನೂನು ಹೋರಾಟ ನಡೆಸಿ ವಿಜಯ ಪತಾಕೆ ಹಾರಿಸಿದವರು ಮೈ.ಕಾ.ಪ್ರೇಮ್ ಕುಮಾರ್ ಮತ್ತು ಎಂ.ಎ.ಮೋಹನ್ ಮಾತ್ರ. ಇವರಿಗೆ ಬೆನ್ನೆಲುಬಾಗಿ ನಿಂತವರು ವಕೀಲರಾದ ಸಿ.ವಿ.ಕೇಶವ ಮೂರ್ತಿ ಮತ್ತು ಪಿ.ಜೆ.ರಾಘವೇಂದ್ರ ಅವರು. ಬೇರೆ ಕೆಲವು ಸಮಾಜ ಸೇವಕರು ಮಳೆ–ಬಿಸಿಲಿಗೆ ಹೆದರುವವರು. ಕೋರ್ಟು, ಪೊಲೀಸ್ ಠಾಣೆಗೆ ಹೋಗಲು ಹಿಂದೇಟು ಹಾಕುವರು. ಹಾಗಾಗಿ ಯಾವ ಸಾಧನೆಯನ್ನು ಮಾಡದೆ, ಮಾಡಿದ ಅಲ್ಪ ಪ್ರಯತ್ನಕ್ಕೆ ಸಾಕಷ್ಟು ಪ್ರಚಾರ ಗಿಟ್ಟಿಸಿಕೊಂಡು ತೃಪ್ತಿಪಟ್ಟುಕೊಂಡರು ಅಂತಾ ಕಾಣುತ್ತೆ.



ನ್ಯಾಯಾಲಯದ ಆದೇಶದ ಮೇರೆಗೆ ತಡೆಬೇಲಿ ತೆರವುಗೊಂಡ ಸಯ್ಯಾಜಿರಾವ್ ರಸ್ತೆಯಿಂದ ಗಾಂಧಿವೃತ್ತಕ್ಕೆ ಸಂಪರ್ಕ ಕಲ್ಪಿಸುವ ವಿನೋಬಾ ರಸ್ತೆ.



ಮೈ.ಕಾ. ಪ್ರೇಮ್‌ಕುಮಾರ್



ಎಂ.ಎ.ಮೋಹನ್

ಅಂದ ಹಾಗೆ, ಮೈ.ಕಾ. ಪ್ರೇಮ್ ಕುಮಾರ್ ಅವರದು ಇನ್ನೂ ಮುಗಿಯದ ಕಥೆ. ನಗರ ಪಾಲಿಕೆಯವರು ಈಗ ಬಂದ ತೀರ್ಪಿನ ವಿರುದ್ಧ, ಬೇಲಿ ತೆರವು ಮಾಡಿದ್ದರ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಬಹುದು. ಕಾನೂನು ಸಮರಕ್ಕೆ ಇಳಿಯಬಹುದು.

ಈಗ ನನ್ನ ಹಾಗೂ ಮೈ.ಕಾ. ಪ್ರೇಮ್‌ಕುಮಾರ್ ಅವರ ಮಾತುಕತೆಗೆ ಬರುತ್ತೇನೆ:

ನಾನು ಪಾಲಿಕೆಯ ಮಕ್ಕಾಜಿ ಚೌಕಕ್ಕೆ ಸಂಬಂಧಪಟ್ಟ ವರದಿಯನ್ನು ಮೊದಲು ನೋಡಿದ್ದು 'ಮೈಸೂರು ಮಿತ್ರ' ಪತ್ರಿಕೆಯಲ್ಲಿ. 2006ರ ಕೊನೆ ತಿಂಗಳಿನಲ್ಲಿರಬೇಕು. ಆಗ ಡಾ. ಕೆ.ಎನ್. ಚಂದ್ರಶೇಖರ್ ಎಂಬುವರು ಪಾಲಿಕೆ ಆಯುಕ್ತರಾಗಿದ್ದರು.

ನಂತರ 2007ರಲ್ಲಿ ನಾನು ಆರ್‌ಟಿಐ ಕಾನೂನಿನಡಿಯಲ್ಲಿ ಮೈಸೂರು ನಗರ ಪಾಲಿಕೆ ಮೇವರಿಕ್ ಸಂಸ್ಥೆಯೊಂದಿಗೆ ಮಾಡಿಕೊಂಡಿದೆ ಎಂಬ ಒಡಂಬಡಿಕೆಯ ಬಗ್ಗೆ ಮಾಹಿತಿ ಕೇಳಿ ಅದರ ದಾಖಲಾತಿ, ಒಪ್ಪಂದ ಪತ್ರದ ಪ್ರತಿಯನ್ನು ಪಡೆದೆ. ಆಶ್ಚರ್ಯವೆಂದರೆ ಪಾಲಿಕೆಯ ಬಿಜೆಪಿ ಸದಸ್ಯರೂ ಈ ಒಪ್ಪಂದಕ್ಕೆ ಒಪ್ಪಿಗೆ ಕೊಟ್ಟಿದ್ದು. ಒಪ್ಪಂದದಲ್ಲಿನ ಒಂದು ಷರತ್ತು ನನ್ನ ಮತ್ತು ನನ್ನ ಮಿತ್ರರ ಗಮನ ಸೆಳೆಯಿತು. ಅದೇನೆಂದರೆ **"ಗಾಂಧಿ ಸ್ಕ್ವೇರ್ (ಚೌಕ) ನಿಂದ ಬರುವ ಎಲ್ಲಾ ವಾಹನಗಳು ಕಡ್ಡಾಯವಾಗಿ ಬಲಕ್ಕೆ ತಿರುಗಿ ಹನುಮಂತರಾವ್ ರಸ್ತೆ ಮೂಲಕ ಓಲ್ಡ್ ಬ್ಯಾಂಕ್ ರಸ್ತೆ ಹಾಯ್ದು ಸಯ್ಯಾಜಿ ರಾವ್ ರಸ್ತೆಗೆ ಸೇರುವುದು"**.

ಇದರ ಅರ್ಥವೇನೆಂದರೆ; ಗಾಂಧಿ ಚೌಕದಿಂದ ಸಯ್ಯಾಜಿರಾವ್ ರಸ್ತೆಗೆ ನೇರ ಸಂಪರ್ಕ ಕಲ್ಪಿಸುವ ವಿನೋಬಾ ರಸ್ತೆ ಬಂದ್. ಏಕೆಂದರೆ ಈ ರಸ್ತೆ ಮೇವರಿಕ್ ಅವರಿಗೆ ಕೊಟ್ಟ ಒಂದು ಕಾಲು ಎಕರೆ ಜಾಗಕ್ಕೆ ಸೇರಿದ್ದು. ಅಂದರೆ ಒಪ್ಪಂದದ ಪ್ರಕಾರ ಈ ರಸ್ತೆ ಮುಚ್ಚಲೇಬೇಕೆಂಬ ಷರತ್ತು ಅದರಲ್ಲಿತ್ತು.

ಈ ವಿಚಾರವನ್ನು ನಾನು ನನ್ನ ಸಹಪಾಠಿ ಮಿತ್ರರೊಂದಿಗೆ ಚರ್ಚಿಸಿದಾಗ ನಮಗೆ ಇದರಿಂದಾಗುವ ಅನಾನುಕೂಲ ಹಾಗೂ ಅನ್ಯಾಯದ ಅರಿವಾಯಿತು. ಸಾರ್ವಜನಿಕ ಹಿತಾಸಕ್ತಿಯನ್ನು ಬದಿಗೊತ್ತಿ ಈ ರಸ್ತೆಯನ್ನು ಬಂದ್ ಮಾಡುತ್ತಿದ್ದಾರೆ. ಅದಾಗಲೇ ರಾಜಮನೆತನದ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರು ಅರಮನೆ ಕೋಟೆ ಗೋಡೆಗೆ ಹೊಂದಿಕೊಂಡಿರುವ ನಗರ ಬಸ್ ನಿಲ್ದಾಣದ ಜಾಗ ಅವರಿಗೆ ಸೇರಿದ್ದೆಂದೂ, ಅದನ್ನು ಬಿಟ್ಟುಕೊಡಬೇಕೆಂದು ಕೇಳಿಕೊಂಡಿದ್ದಾರೆ. ಅದಾಗ್ಯೂ ಆಗ ಗಾಂಧಿ ಚೌಕದಲ್ಲಿ ಖಾಸಗಿ ಬಸ್ಸುಗಳು ನಿಲ್ಲುತ್ತಿದ್ದವು. ಆದುದರಿಂದ ನಾವು ಈ ಮಕ್ಕಾಜಿ ಚೌಕದ ಜಾಗ ಹೊಸ ನಗರ ಬಸ್ ನಿಲ್ದಾಣಕ್ಕೆ ಒಳ್ಳೆಯ ಸ್ಥಳ ಆಗಬಹುದೆಂದು ಯೋಚಿಸಿದ್ದೆವು. ಆದರೆ ಈ ಒಪ್ಪಂದ ನೋಡಿ ನಮಗೆ ದಿಗ್ಭ್ರಮೆಯಾಯಿತು.

ನಂತರ ನಾವು ಕೆಲವು ನಗರ ಪಾಲಿಕೆ ಸದಸ್ಯರನ್ನು ಭೇಟಿ ಮಾಡಿ ಮಾತಾಡಿದೆವು. ಆದರೆ ಅವರು ಹೇಳಿದರು : **'ನೋಡಿ ನಾವಾಗಲೇ ನಿರ್ಣಯ ಮಾಡಿದ್ದೇವೆ. ಬೇಕಾದರೆ ರಸ್ತೆ ಬಗ್ಗೆ ಮಾತಾಡಿ'** ಎಂದು ಉಡಾಫೆ ಉತ್ತರ ಕೊಟ್ಟರು. ಹಾಗಾಗಿ ನಾವು ಸುಮಾರು 60 ಜನ ಗೋವರ್ಧನ ಹೋಟೆಲ್‌ನಲ್ಲಿ ಸಭೆ ನಡೆಸಿದೆವು. ಇದು 2007ರಲ್ಲಿ. ಆ ಸಭೆಯಲ್ಲಿ ಕುಂಚಿಟಿಗರ ಸಂಘದ ಕಾರ್ಯದರ್ಶಿ ಅನಂತಕುಮಾರ್, ಬಣಜಿಗರ ಸಂಘದ ಕಾರ್ಯದರ್ಶಿ ಗುರುರಾಜ, ಬ್ರಾಹ್ಮಣ ಸಂಘದ ಕಾರ್ಯದರ್ಶಿ ರಾಕೇಶ್ ಭಟ್, ಕುಮಾರ್ ಗೌಡ ಕುಂಬಾರಕೊಪ್ಪಲು, ಒಕ್ಕಲಿಗರ ಸಂಘ ಹಾಗೂ ಸು.ಮುರಳಿ, ಟೆಂಪೋ ಸ್ಟ್ಯಾಂಡ್ ಅಧ್ಯಕ್ಷರು ಹಾಜರಿದ್ದರು. ಅಲ್ಲಿ ತೆಗೆದುಕೊಂಡ ನಿರ್ಣಯದ ಪ್ರಕಾರ ನಾವು ಚಳವಳಿ ಮಾಡಿದೆವು. ನನ್ನನ್ನು ಸೇರಿಸಿ ಕೆಲವರನ್ನು ಪೊಲೀಸರು ಅರೆಸ್ಟ್ ಮಾಡಿ ಅವರ ಸಿಆರ್ ಗ್ರೌಂಡ್‌ನಲ್ಲಿ ಸಾಯಂಕಾಲದವರೆಗೆ ಇರಿಸಿ, ನಂತರ ಬಿಟ್ಟರು.

ಆಮೇಲೆ ನಾನು ಒಂದು ಪತ್ರಿಕಾ ಗೋಷ್ಠಿ ಕರೆದು ಇದರ ಬಗ್ಗೆ ಮಾತನಾಡಿ, ಪಾಲಿಕೆಯ ಒಬ್ಬೊಬ್ಬ ಸದಸ್ಯನು ಮೂರು ಲಕ್ಷ ರೂಪಾಯಿ ತೆಗೆದುಕೊಂಡು ಈ ಒಪ್ಪಂದಕ್ಕೆ ಸಮ್ಮತಿಸಿದ್ದಾರೆ ಎಂದು ಹೇಳಿದೆ.

ಕೆಬಿಜಿ: ಅಧಿಕಾರಿಗಳಿಗೆ?

ಮೈ.ಕಾ.ಪ್ರೇಮ್‌ಕುಮಾರ್: ಅದು ತುಲಾಭಾರ. ಆಫೀಸರುಗಳ ತೂಕ, ಯೋಗ್ಯತೆಗೆ ಅನುಗುಣವಾಗಿ.

ಮತ್ತೆ ಮುಖ್ಯ ವಿಷಯಕ್ಕೆ ಬಂದ ಪ್ರೇಮ್‌ಕುಮಾರ್; ಪಾಲಿಕೆ ಸದಸ್ಯ ಟಿ.ಬಿ. ಚಿಕ್ಕಣ್ಣ ಪಾಲಿಕೆಯಲ್ಲಿ ಪತ್ರಿಕಾಗೋಷ್ಠಿ ಮಾಡಿ ನನ್ನ ಮೇಲೆ ಮಾನನಷ್ಟ ಮೊಕದ್ದಮೆ ಹಾಕುವುದಾಗಿ ಹೇಳಿದರು. ಅದಕ್ಕೆ ನಾವೇನು ಜಗ್ಗಲಿಲ್ಲ.

ಬಿಜೆಪಿಯಿಂದ ಮುಖ್ಯವಾಗಿ ನನ್ನನ್ನು ವಿರೋಧಿಸಿದವರಲ್ಲಿ ಬಿಜೆಪಿಯ ಎಂ.ಜಿ. ಮಹೇಶ್ (ಈಗ ಇವರು ಬಿಜೆಪಿ ರಾಜ್ಯ ವಕ್ತಾರರು) ಎಲ್. ನಾಗೇಂದ್ರ(ನಂತರ ಚಾಮರಾಜ ಕ್ಷೇತ್ರದ ಶಾಸಕರಾಗಿ ಆಯ್ಕೆಯಾಗಿದ್ದ ಇವರು ಈಗ ಮಾಜಿ ಶಾಸಕರು) ಹಾಗೂ ಎಂ.ಶಿವಕುಮಾರ್ (ನಂತರ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷರಾದವರು) ಪ್ರಮುಖರಾದವರಾಗಿದ್ದರು. ಆಗ ರಾಜ್ಯದಲ್ಲಿ ಸಮ್ಮಿಶ್ರ ಸರ್ಕಾರವಿತ್ತು. ಹೆಚ್.ಡಿ. ಕುಮಾರಸ್ವಾಮಿ ಮುಖ್ಯ ಮಂತ್ರಿಯಾಗಿದ್ದರು ಎಂದು ನೆನಪು.

ಇದರ ಮಧ್ಯೆ 2007ರಲ್ಲೇ ನಾವು ನ್ಯಾಯಾಲಯದಲ್ಲಿ ಅರ್ಜಿ ಹಾಕಿ ಮಕ್ಕಾಜಿ ಚೌಕದ ವಿನೋಬಾ ರಸ್ತೆಯನ್ನು ಮುಚ್ಚದ ಹಾಗೆ ತಡೆಯಾಜ್ಞೆ ತಂದೆವು. ಆದರೆ ನಮ್ಮ ದುರದೃಷ್ಟವೆಂಬಂತೆ ನಗರ ಪಾಲಿಕೆಗೆ ರಸ್ತೆ ಬಂದ್ ಮಾಡಲು ಒಂದು ಅವಕಾಶ ತಾನಾಗಿ ಬಂತು. ಸಯ್ಯಾಜಿರಾವ್ ರಸ್ತೆಯನ್ನು (ದಸರಾ ಮೆರವಣಿಗೆ ರಸ್ತೆ) ಕಾಂಕ್ರೀಟ್ ರಸ್ತೆ ಮಾಡುವ ಕಾಮಗಾರಿ ಆರಂಭವಾಯಿತು. ಅದಕ್ಕಾಗಿ ಈ ಭಾಗದ ರಸ್ತೆಯನ್ನು ಬಂದ್ ಮಾಡಿದರು.

ಇದೇ ಸಂದರ್ಭವನ್ನು ಉಪಯೋಗಿಸಿಕೊಂಡು ಮೇವರಿಕ್ ಕಂಪನಿಯವರು ಸಿನಿಮಾ ಥಿಯೇಟರ್ ಕಟ್ಟಲು "ಸ್ಥಳ ತೆರವು ಮಾಡಲು" (Location clearance) ಜಿಲ್ಲಾಧಿಕಾರಿಗೆ ಅರ್ಜಿ ಹಾಕಿದರು. ಆದರೆ ಅವರಿಗೆ ಅನುಮತಿ ಸಿಗಲಿಲ್ಲ. ಅವರು ಅಪೀಲ್ ಹೋದರೂ ತೀರ್ಮಾನ ಆಗುವ ಮೊದಲೇ ಕಟ್ಟಡ ನಿರ್ಮಾಣ ಶುರು ಮಾಡಿದರು. ನಾವು ವಿರೋಧಿಸಿದರೂ ಅದನ್ನು ಲೆಕ್ಕಕ್ಕೆ ತೆಗೆದುಕೊಳ್ಳಲಿಲ್ಲ. ಮುಂದೆ 2011 ರಲ್ಲಿ ಆ ಕಟ್ಟಡವನ್ನು (ಗರುಡ ಮಾಲ್), ಅಂದಿನ ರಾಜ್ಯಪಾಲರಾದ **ಹಂಸರಾಜ ಭಾರದ್ವಾಜ್** ಅವರು ಉದ್ಘಾಟಿಸಿದರು. ಇದರಿಂದ ಮೇವರಿಕ್ ಅವರ ಪ್ರಭಾವ ಎಷ್ಟೆಂಬುದನ್ನು ಅರಿಯಬಹುದು.

ಪಿ.ಎಸ್.ವಸ್ತ್ರದ್ ಅವರು 2011ರಲ್ಲಿ ಮೈಸೂರು ಜಿಲ್ಲಾಧಿಕಾರಿಯಾಗಿ ಬಂದರು. ಅವರೂ ಏನೂ ಮಾಡಲಿಲ್ಲ. ಆದರೆ ನಂತರ ಬಂದ **ಶ್ರೀಮತಿ ಶಿಖಾ** ಅವರು **ಎನ್‌ಓಸಿ** ಕೊಡಲಿಲ್ಲ. ಇದರ ಮೇಲೆ (ರೀಜ ನಲ್ ಕಮೀಷನರ್) ಆರ್‌ಸಿ ಅವರಲ್ಲಿ ಮೇಲ್ಮನವಿ ಮಾಡಿದರೂ ಅದು ತಿರಸ್ಕರಿಸಲ್ಪಟ್ಟಿತು.

ಆಗ ರಾಜ್ಯ ಮಟ್ಟದ ಕಾರ್ಯದರ್ಶಿಯವರ ಮೂಲಕ ಜಿಲ್ಲಾಧಿಕಾರಿಗೆ ಎನ್‌ಓಸಿ ಕೊಡಲು ನಿರ್ದೇಶನ ಬಂತು. **ರಣದೀಪ್** ಅವರು ಜಿಲ್ಲಾಧಿಕಾರಿಯಾಗಿದ್ದರು. ಅವರು ಎನ್‌ಓಸಿ ಕೊಟ್ಟರು. ಆಗ ಗರುಡ ಮಾಲ್ ಕಟ್ಟಡ ಅಧಿಕೃತವಾಯಿತು. ನಾವು ರೀಜನಲ್ ಕಮೀಷನರ್ ಸಾಹೇಬರಿಗೆ ಇದನ್ನು ವಿರೋಧಿಸಿ ಮೇಲ್ಮನವಿ ಸಲ್ಲಿಸಿದೆವು. ಆದರೆ ಅಲ್ಲಿ ನಾವು ಸೋತೆವು.

ನಮ್ಮ ಈ ಸೋಲು ಪಾಲಿಕೆಯವರು ಹಾಗೂ ಮೇವರಿಕ್ ಸಂಸ್ಥೆಯವರಿಗೆ ತುಂಬಾ ಧೈರ್ಯ ತಂದಿತು. ಪರಿಣಾಮವಾಗಿ ಅವರು ರಸ್ತೆಯನ್ನು ಗಾಂಧಿ ಚೌಕದ ಕಡೆಯಿಂದಲೂ ಮುಚ್ಚಿ ಬಿಡುತ್ತಾರೆ. ರಸ್ತೆ ಈಗ ಮೇವ ರಿಕ್ ಅವರಿಗೆ ಸೇರಿದಂತಾಗುತ್ತದೆ. ಆದೂ ಛಲ ಬಿಡದೆ ನಾವು ಪ್ರತಿಭಟನೆಗೆ ಕುಳಿತೆವು. ನಮ್ಮನ್ನು ಪೊಲೀಸರು ಬಂಧಿಸಿದರು.

ಅದೃಷ್ಟವಶಾತ್, **ನ್ಯಾಯಾಲಯದಲ್ಲಿ ರಸ್ತೆ ಬಂದ್ ಮಾಡದ ಹಾಗೆ ನಮಗೆ ಪರ್ಮನೆಂಟ್ ಸ್ಟೇ (ಆದೇಶ) ಸಿಕ್ಕಿತು. ಇದರ ಬಗ್ಗೆ ಪತ್ರಿಕೆಗಳಲ್ಲಿ ವರದಿ ಕೂಡ ಬಂದಿದೆ. ಆದರೆ ಪಾಲಿಕೆಯಾಗಲೀ, ಮೇವರಿಕ್ ಸಂಸ್ಥೆಯವರಾಗಲೀ ಬೇಲಿಗಳನ್ನು ತೆರವು ಮಾಡಲೇ ಇಲ್ಲ. ಆಗ ನಾವು ಕಂಟೆಂಪ್ಟ್ ಆಫ್ ಕೋರ್ಟ್ (ನ್ಯಾಯಾಲಯ ನಿಂದನೆ–Contempt of Court) ಕೇಸ್ ಹಾಕಿ ಪಾಲಿಕೆ ಮೇಲೆ ವಾರೆಂಟ್ ಕೂಡ ತಂದೆವು.**

ಅದರ ಫಲವಾಗಿ ಜೂ. 8 ರಂದು ತಡೆಬೇಲಿಯನ್ನು ತೆರವುಗೊಳಿಸಲಾಯಿತು. ಈ ತೆರವಿನ ಬಗ್ಗೆಯೂ ಅವರು ನಗರದ ನ್ಯಾಯಾಲಯದಲ್ಲಿ ಮನವಿ ಸಲ್ಲಿಸಿದ್ದಾರೆ. ಆದರೆ ಅದು ತಿರಸ್ಕರಿಸಲ್ಪಟ್ಟಿದೆ. ಮುಂದೆ ಏನೆಂದು ನೋಡಬೇಕು. ಬಹುಶಃ ಅವರು ಉಚ್ಚ ನ್ಯಾಯಾಲಯಕ್ಕೆ ಹೋಗಬಹುದು.

ಈ ಮಧ್ಯೆ ಪಾಲಿಕೆಯವರು ಗಾಂಧಿ ಚೌಕದಿಂದ ಸಯ್ಯಾಜಿ ರಾವ್ ರಸ್ತೆಗೆ ಸಂಪರ್ಕವಿದೆ ಎಂದು ತೋರಿಸಿಕೊಳ್ಳಲು ಒಂದು ಪರ್ಯಾಯ ರಸ್ತೆಯಾಗಿ ಅಲ್ಲಿದ್ದ ಒಂದೂವರೆ ಅಣೆ ಗಲ್ಲಿಯನ್ನು 15 ಅಡಿ ವಿಸ್ತೀರ್ಣದಲ್ಲಿ ರಸ್ತೆಯನ್ನಾಗಿ ಮಾಡಿ ಬೀದಿ ಬದಿ ಅಂಗಡಿಯವರಿಗೆ ವ್ಯಾಪಾರಕ್ಕೆ ಅವಕಾಶ ಮಾಡಿಕೊಟ್ಟು ಸಮಾಧಾನ ಮಾಡಿದ್ದಾರೆ. ಆದರೆ ಆ ಬಡವರಿಂದ ನಿತ್ಯವೂ ವಸೂಲಿ ದಂಧೆಯಂತೂ (ಎರಡು ಕಡೆಯಿಂದ) ನಡೆಯುತ್ತಲೇ ಇದೆ. ಏನ್ ಮಾಡೋದು ಸಾರ್? ನಮ್ಮ ವ್ಯವಸ್ಥೆಯೇ ಈ ರೀತಿಯಾಗಿದೆ.

ಮಾತುಕತೆ ಮುಗಿಸಿದೆ, ಪ್ರೇಮ್ ಕುಮಾರ್ ಅವರು ಅತೀ ಪ್ರೀತಿ ಹಾಗೂ ವಿನಯಪೂರ್ವಕವಾಗಿ ಕೊಟ್ಟ ಮೈಸೂರು ಮಲ್ಲಿಗೆ ಮೊಗ್ಗಿನ ಹಾರವನ್ನು ಕೈಲಿಡಿದು ಹೊರಟಾಗ ಅವರೊಂದು ಪ್ರಶ್ನೆ ಕೇಳಿದರು.

"ಸರ್, ದಯವಿಟ್ಟು ನೀವೇ ಹೇಳಿ, ಯಾರು ಹಿತವರು ನಿಮಗೆ? ಚುನಾಯಿತ ಜನಪ್ರತಿನಿಧಿಗಳೋ ಇಲ್ಲ ನಮ್ಮಂತಹ ಸಾಮಾಜಿಕ ಹೋರಾಟಗಾರರೋ?"

ನಾನು ಸುಮ್ಮನೆ ನಕ್ಕೆ. ಅವರ ಕಣ್ಣಲ್ಲಿ ಕಣ್ಣಿಟ್ಟು ಅರಳುವ ಹೂವಿನಂತೆ ಮುಗುಳ್ನಗೆ ಬೀರುತ್ತಾ, ಅವರ ಹೆಗಲ ಮೇಲೆ ಕೈ ಇಟ್ಟು ಹೇಳಿದೆ : **"ನಿನ್ನ ಪ್ರಶ್ನೆಗೆ ನನ್ನ ಒಂದು ಉತ್ತರ ನಾನಿಲ್ಲಿಗೆ ಬಂದಿರುವುದರಲ್ಲಿದೆ. ಇನ್ನು ಒಂದು ಉತ್ತರ ನನ್ನ ಬರವಣಿಗೆಯಲ್ಲಿರುತ್ತದೆ. ನೋಡಾ!"**

email:
voice @starofmysore.com

ಮೈಸೂರು ಮಿತ್ರ

ಕೃಷಿ ಇಲಾಖೆಯಲ್ಲಿ ಮಹತ್ವದ ಬದಲಾವಣೆ ತರುವುದೇ ನನ್ನ ಧ್ಯೇಯ

ಮಾಧ್ಯಮ ಸಂವಾದದಲ್ಲಿ ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ



ಮಂಡ್ಯ, ಜೂ.10– ಕೃಷಿ ಪ್ರಧಾನವಾದ ಮಂಡ್ಯ ಜಿಲ್ಲೆ ನಾಗಮಂಗಲ ಕ್ಷೇತ್ರ ಪ್ರತಿನಿಧಿಸುವ ನನಗೆ ರಾಜ್ಯ ಸರ್ಕಾರ ಕೃಷಿ ಖಾತೆ ನೀಡಿರುವುದು ನಿಜಕ್ಕೂ ಸಂತಸ ತಂದಿದೆ. ಕೃಷಿ ಇಲಾಖೆಯಲ್ಲಿ ರೈತರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಮಹತ್ವದ ಬದಲಾವಣೆ ತರುವುದೇ ನನ್ನ ಧ್ಯೇಯ ಎಂದು ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಶನಿವಾರ ನಡೆದ ಮಾಧ್ಯಮ ಸಂವಾದದಲ್ಲಿ ಮಾತನಾಡಿದ ಅವರು, ನೀರಾವರಿಗೆ ಹೆಸರಾಗಿರುವ ಮಂಡ್ಯ ಜಿಲ್ಲೆಯ ಯಾರಿಗೂ ಸಹ ಇದುವರೆಗೆ ಕೃಷಿ ಖಾತೆ ಸಿಕ್ಕಿರಲಿಲ್ಲ. ಆದರೆ ನನಗೆ ಆ ಭಾಗ್ಯ ಸಿಕ್ಕಿದೆ. ಜೊತೆಗೆ ಜವಾಬ್ದಾರಿಯೂ ಹೆಚ್ಚಿದೆ. ಇಲಾಖೆಯಲ್ಲಿ ಪ್ರಗತಿ ಸಾಧಿಸುವ ನಿಟ್ಟಿನಲ್ಲಿ ಅಧಿಕಾರಿಗಳೊಂದಿಗೆ ಉತ್ತಮ ರೀತಿ ಕಾರ್ಯ ನಿರ್ವಹಿಸಿಕೊಂಡು ಹೋಗುವೆ ಎಂದರು.

ಅನ್ಯ ರಾಜ್ಯಗಳಿಗೆ ಭೇಟಿ ನೀಡಿ ಅಲ್ಲಿನ ಕೃಷಿ ಪದ್ಧತಿ ಬಗ್ಗೆ ಅಧ್ಯಯನ ನಡೆಸಿ, ಕೇಂದ್ರ ಸರ್ಕಾರದ ಸಹಾಯ ಪಡೆದು ಇಲಾಖೆ ಮೂಲಕ ರೈತರಿಗೆ ಹೆಚ್ಚಿನ ಸೌಲಭ್ಯ ಸಿಗುವಂತೆ ಮಾಡುವುದೇ ನನ್ನ ಗುರಿ ಎಂದರು.

ಕೃಷಿ ಇಲಾಖೆಯಲ್ಲಿ ಕ್ರಾಂತಿಕಾರಿ ಕೆಲಸ ಮಾಡಬೇಕೆಂಬ ಹಂಬಲ ಹೊಂದಿದ್ದೇನೆ. ಈಗಾಗಲೇ ಮುಂಗಾರು ರಾಜ್ಯದ ಹಲವೆಡೆ ಆರಂಭವಾಗಿದ್ದು, ಔಷಧ, ರಸಗೊಬ್ಬರ, ಬಿತ್ತನೆ ಬೀಜಗಳ ಕೊರತೆಯಾಗದಂತೆ ಈಗಾಗಲೇ ಕ್ರಮ ವಹಿಸಿದ್ದೇನೆ. ರಾಜ್ಯಮಟ್ಟದ ವಿಡಿಯೋ ಕಾನ್ಫರೆನ್ಸ್ ಮೂಲಕ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಸಮಸ್ಯೆಯಾಗದಂತೆ ಸೂಕ್ತ ಕ್ರಮ ವಹಿಸಬೇಕೆಂದು ಸೂಚಿಸಿದ್ದು, ಎಲ್ಲೂ ಸಹ ರಸಗೊಬ್ಬರ ಹಾಗೂ ಬಿತ್ತನೆ ಬೀಜಗಳ ಸಮಸ್ಯೆ ಈ ಬಾರಿ ಉದ್ಭವಿಸುವುದಿಲ್ಲ ಎಂದು ಭರವಸೆ ನೀಡಿದರು.

ವಿ.ಸಿ.ಫಾರಂ ಮೇಲ್ದರ್ಜೆಗೆ: ಜಿಲ್ಲೆಯ ಪ್ರಮುಖ ಶಿಕ್ಷಣ ಸಂಸ್ಥೆಗಳ ಪೈಕಿ ಕೃಷಿ ಸಂಶೋಧನಾ ಶಿಕ್ಷಣ ಸಂಸ್ಥೆಯಾದ ವಿ.ಸಿ.ಫಾರಂ ಜಿಲ್ಲೆಯಲ್ಲೇ ಹೆಸರುವಾಸಿಯಾಗಿದ್ದು, ಪ್ರಸ್ತುತ ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯದ ಭಾಗವಾಗಿದೆ. ಇದನ್ನು ಮೇಲ್ದರ್ಜೆಗೇರಿಸಿ, ವಿಶೇಷ ರೀತಿ ಅಭಿವೃದ್ಧಿ ಪಡಿಸುವ ಬಗ್ಗೆ ಚಿಂತನೆ ಇದ್ದು, ಈ ಬಗ್ಗೆ ಶೀಘ್ರ ಸಂಬಂಧಿಸಿದ ಅಧಿಕಾರಿಗಳೊಂದಿಗೆ ಚರ್ಚಿಸಿ, ವಿ.ಸಿ.ಫಾರಂ ಮೇಲ್ದರ್ಜೆಗೇರಿಸುವ ಬಗ್ಗೆ ಗಂಭೀರ ಚಿಂತನೆ ನಡೆಸಲಾಗುವುದು ಎಂದರು.

ಆಲೆಮನೆಗಳಿಗೆ ಪ್ರೋತ್ಸಾಹ ಧನ: ಗ್ರಾಮೀಣ ಪ್ರದೇಶಗಳಲ್ಲಿರುವ ಆಲೆಮನೆಗಳ ಅಭಿವೃದ್ಧಿಗೆ ಒತ್ತು ನೀಡುವ ನಿಟ್ಟಿನಲ್ಲಿ ಆಲೆಮನೆ ನಡೆಸುವವರಿಗೆ ಪ್ರೋತ್ಸಾಹ ಧನ ನೀಡುವ ಬಗ್ಗೆ ಸಂಬಂಧಿಸಿದವರೊಂದಿಗೆ ಚರ್ಚಿಸಲಾಗುವುದು. ಅವುಗಳ ಅಭಿವೃದ್ಧಿಗೆ ಪ್ರೋತ್ಸಾಹ ಧನ ನೀಡಲು ಸರ್ಕಾರ ಬದ್ಧವಿದೆ ಎಂದರು.

ಮಹಿಳೆಯರಿಗೆ ಉಚಿತ ಬಸ್: ನಮ್ಮ ಸರ್ಕಾರದ ಮಹತ್ವದ ಯೋಜನೆಯಾದ ಮಹಿಳೆಯರಿಗೆ ಉಚಿತ ಬಸ್ ಸೌಲಭ್ಯಕ್ಕೆ ಭಾನುವಾರ ಚಾಲನೆ ಸಿಗಲಿದೆ. ಜಿಲ್ಲಾ ಕೇಂದ್ರ ಮಂಡ್ಯದಲ್ಲಿ ನಾನು ಯೋಜನೆಗೆ ಚಾಲನೆ ನೀಡಲಿದ್ದೇನೆ. ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಆಯಾ ಶಾಸಕರು ಯೋಜನೆಗೆ ಚಾಲನೆ ನೀಡಲಿದ್ದಾರೆ. ನಮ್ಮ ಸರ್ಕಾರ ನುಡಿದಂತೆ ನಡೆಯುತ್ತಿದ್ದು, ಬಸ್, ವಿದ್ಯುತ್, ಮಹಿಳೆಯರಿಗೆ 2 ಸಾವಿರ ಹಣ, ಅನ್ನಭಾಗ್ಯ ಎಲ್ಲಾ ಯೋಜನೆಗಳನ್ನು ಜನರಿಗೆ ಒದಗಿಸಲಿದೆ ಎಂದು ತಿಳಿಸಿದರು.

ಮಿಮ್ಸ್ ಆಸ್ಪತ್ರೆ ಅವ್ಯವಸ್ಥೆ ಬಗೆಹರಿಸಲು ಶೀಘ್ರ ಸಭೆ: ಮಂಡ್ಯ ಮಿಮ್ಸ್ ಆಸ್ಪತ್ರೆಯಲ್ಲಿ ಕ್ಯಾನ್ಸರ್ ಆಸ್ಪತ್ರೆ ಸ್ಥಗಿತಗೊಂಡಿರುವುದು, ವೈದ್ಯರು ಸಹ ಹಾಕಿ ಖಾಸಗಿ ಕ್ಲಿನಿಕ್‌ಗಳಿಗೆ ತೆರಳುವ ಬಗ್ಗೆ ಪ್ರತಿಕ್ರಿಯಿಸಿದ ಚಲುವರಾಯಸ್ವಾಮಿ, ಈ ಬಗ್ಗೆ ನನಗೂ ಅನೇಕ ಕಡೆಯಿಂದ ದೂರುಗಳು ಕೇಳಿ ಬಂದಿವೆ. ಬಜೆಟ್ ಅಧಿವೇಶನ ಮುಗಿದ ಬಳಿಕ ಒಂದು ದಿನ ಮಿಮ್ಸ್ ಆಸ್ಪತ್ರೆ ಅಧಿಕಾರಿಗಳು, ವೈದ್ಯರು, ಸಿಬ್ಬಂದಿಗಳೊಂದಿಗೆ ಸರಣಿ ಸಭೆ ನಡೆಸಿ, ಕ್ಯಾನ್ಸರ್ ಆಸ್ಪತ್ರೆ, ಮಿಮ್ಸ್‌ನಲ್ಲಿನ ಮೂಲ ಸೌಕರ್ಯ ಹಾಗೂ ಇನ್ನಿತರೆ ಸಮಸ್ಯೆಗಳನ್ನು ಬಗೆಹರಿಸುವ ಬಗ್ಗೆ ಚರ್ಚಿಸಲಾಗುವುದು. ವೈದ್ಯರು ಸಮರ್ಪಕವಾಗಿ ಕೆಲಸ ಮಾಡದಿದ್ದರೆ ಅಂತಹವರ ವಿರುದ್ಧ ಕಠಿಣ ಕ್ರಮಕೈಗೊಳ್ಳಲು ನಿರ್ಧಾರ ಕೈಗೊಳ್ಳಲಾಗುವುದು ಎಂದು ಸ್ಪಷ್ಟಪಡಿಸಿದರು.

ಹಾಲು–ನೀರು ಹಗರಣ ಶೀಘ್ರ ತನಿಖೆ: ಮಂಡ್ಯ ಜಿಲ್ಲಾ ಹಾಲು ಒಕ್ಕೂಟದಲ್ಲಿ ನಡೆದಿದೆ ಎನ್ನಲಾದ ಹಾಲು– ನೀರು ಹಗರಣವನ್ನು ಸಿಬಿಐ ತನಿಖೆ ನಡೆಸುವ ಬಗ್ಗೆ ಕಾಂಗ್ರೆಸ್ ಪಕ್ಷವು ಭರವಸೆ ನೀಡಿತ್ತು. ಇದೀಗ ನಮ್ಮ ಸರ್ಕಾರವೇ ಅಸ್ತಿತ್ವಕ್ಕೆ ಬಂದಿರುವುದರಿಂದ ಯಾವ ರೀತಿ ಕ್ರಮ ಕೈಗೊಳ್ಳಬೇಕೆಂಬ ಬಗ್ಗೆ ಚಿಂತನೆ ನಡೆಸಿದ್ದೇವೆ. ಇಡೀ ಬೋರ್ಡ್ ಅನ್ನು ಸೂಪರ್‌ಸೀಡ್ ಮಾಡಬೇಕೆ ಅಥವಾ ಹಾಗೆಯೇ ತನಿಖೆ ನಡೆಸಬೇಕೆಂಬ ಬಗ್ಗೆ ನಿರ್ಧರಿಸಿ, ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದರು.

ನಾಗಮಂಗಲ ಕೆರೆಗಳ ಅಭಿವೃದ್ಧಿಗೆ ಒತ್ತು: ನಾನು ಪ್ರತಿನಿಧಿಸುವ ನಾಗಮಂಗಲ ಕ್ಷೇತ್ರ ಬರ ಪೀಡಿತ ತಾಲೂಕಾಗಿರುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಈ ನಿಟ್ಟಿನಲ್ಲಿ ತಾಲೂಕಿಗೆ ನೀರಿನ ಸೌಲಭ್ಯ ಒದಗಿಸುವ ನಿಟ್ಟಿನಲ್ಲಿ ಕೆರೆಗಳ ಅಭಿವೃದ್ಧಿ, ಅಂತರ್ಜಲ ಅಭಿವೃದ್ಧಿಗೆ ವಿಶೇಷ ಆಸಕ್ತಿ ಕೊಡಲಾಗುವುದು ಎಂದರು.

ಜಿಲ್ಲಾ ಸಂಕೀರ್ಣ ಮಾಡಲು ಕ್ರಮ: ಮಂಡ್ಯದಲ್ಲಿ ಅನೇಕ ಇಲಾಖೆಗಳು ಬಾಡಿಗೆ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಎಲ್ಲಾ ಇಲಾಖೆಗಳು ಒಂದೇ ಕಡೆ ಕಾರ್ಯ ನಿರ್ವಹಿಸುವ ಮೂಲಕ ಜಿಲ್ಲೆಯ ಜನಕ್ಕೆ ಅನುಕೂಲವಾಗುವ ನಿಟ್ಟಿನಲ್ಲಿ ಈ ಹಿಂದೆಯೇ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಸಂದರ್ಭ ಜಿಲ್ಲಾ ಸಂಕೀರ್ಣ ತೆರೆಯಲು ಚಿಂತನೆ ನಡೆಸಿ, ಜಾಗ ಸಹ ಗುರುತಿಸಲು ಮುಂದಾಗಿದ್ದೆ. ಆದರೆ ಅದು ನನೆಗುದಿಗೆ ಬಿದ್ದಿತು. ಇದೀಗ ಜಿಲ್ಲಾ ಸಂಕೀರ್ಣ ತೆರೆಯಲು ಕ್ರಮ ವಹಿಸಲಾಗುವುದು ಎಂದು ತಿಳಿಸಿದರು.

ಸಂಪರ್ಕ ರಸ್ತೆಗಳ ನಿರ್ಮಾಣಕ್ಕೆ ಕ್ರಮ: ಜಿಲ್ಲಾ ಕೇಂದ್ರ ಮಂಡ್ಯದಿಂದ ನಾಗಮಂಗಲ, ಮೇಲುಕೋಟೆ, ಪಾಂಡವಪುರ ಸೇರಿದಂತೆ ತಾಲೂಕು ಹಾಗೂ ಹೋಬಳಿ ಕೇಂದ್ರಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳು ಸಮರ್ಪಕವಾಗಿಲ್ಲ. ಈ ನಿಟ್ಟಿನಲ್ಲಿ ಕೇಂದ್ರ ಸ್ಥಾನದಿಂದ ಸಂಪರ್ಕ ರಸ್ತೆಗಳ ನಿರ್ಮಾಣಕ್ಕೆ ಶೀಘ್ರವೇ ಕ್ರಮ ಕೈಗೊಳ್ಳಲಾಗುವುದು. ಜೊತೆಗೆ ಅಕ್ಕಪಕ್ಕದ ಜಿಲ್ಲಾ ಕೇಂದ್ರಗಳಿಗೂ ರಸ್ತೆ ಸಂಪರ್ಕ ಕಲ್ಪಿಸಲು ಕ್ರಮ ಕೈಗೊಳ್ಳಲಾಗುವುದು. ಜೊತೆಗೆ ಕಲವೆಡೆ ಬಸ್ ಸಮಸ್ಯೆಗಳು ಸಹ ಇದ್ದು, ಅವುಗಳನ್ನು ಬಗೆಹರಿಸಲಾಗುವುದು ಎಂದು ಹೇಳಿದರು.

ಒಂದು ವರ್ಷ ಸಮಯಾವಕಾಶ ನೀಡಿ: ಸರ್ಕಾರ ಅಸ್ತಿತ್ವಕ್ಕೆ ಬಂದು ಒಂದು ತಿಂಗಳೂ ಕಳೆದಿಲ್ಲ. ಹೀಗಾಗಿ ಸರ್ಕಾರ ಟೇಕಾಫ್ ಆಗಲು ಸಮಯ ಕೊಡಿ. ಒಂದು ವರ್ಷದಲ್ಲಿ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಂಡು ಮುಂದಿನ 4 ವರ್ಷದಲ್ಲಿ ಮಾದರಿ ಮಂಡ್ಯ ನಿರ್ಮಾಣಕ್ಕೆ ನಾನು ಸೇರಿದಂತೆ ಜಿಲ್ಲೆಯ ಎಲ್ಲಾ ಕಾಂಗ್ರೆಸ್ ಶಾಸಕರು ಮುಂದಾಗುತ್ತೇವೆ ಎಂದು ಭರವಸೆ ನೀಡಿದರು.

ಸಾಮೂಹಿಕ ಸೋಲಿನ ಭಯವಿದೆ: 2018ರ ಚುನಾವಣೆಯಲ್ಲಿ ಜೆಡಿಎಸ್‌ನ 7 ಶಾಸಕರನ್ನು ಜಿಲ್ಲೆಯ ಜನ ಭಾರೀ ಅಂತರದಿಂದ ಗೆಲ್ಲಿಸಿದ್ದರು. ಆದರೆ ಈ ಬಾರಿ ಆ 7 ಮಂದಿಯನ್ನು ಸೋಲಿಸಿದ್ದಾರೆ. ಅವರ ಸೋಲಿಗೆ ಅವರು ಏನು ಕೆಲಸ ಮಾಡದಿರುವುದೇ ಕಾರಣ. ಆದರೆ ನಮಗೆ ಜನ ಅವಕಾಶ ಕೊಟ್ಟಿದ್ದಾರೆ. ನಾವು ಸಹ ಕೆಲಸ ಮಾಡದೇ ಕೈ ಕಟ್ಟಿ ಕುಳಿತರೆ ನಮ್ಮನ್ನು ಮುಂದಿನ ಬಾರಿ ಸೋಲಿಸುತ್ತಾರೆ ಎಂಬ ಭಯವಿದೆ. ಆ ನಿಟ್ಟಿನಲ್ಲಿ ಅಭಿವೃದ್ಧಿಯೇ ನಮ್ಮ ಕೆಲಸ ಎಂದರು.

35 ವರ್ಷದ ಬಳಿಕ ಪೂರ್ಣ ಪ್ರಮಾಣದ ಉಸ್ತುವಾರಿ: ಜಿಲ್ಲೆಯ ಶಾಸಕರಿಗೆ ಜಿಲ್ಲಾ ಉಸ್ತುವಾರಿ ಎಂಬುದು ಕಳೆದ 35 ವರ್ಷಗಳಿಂದ ಮರೀಚಿಕೆಯಾಗಿತ್ತು. ಮಧ್ಯೆ ಕೆಲವು ವರ್ಷ ನಾನು, ಅಂಬರೀಷ್ ಬಿಟ್ಟರೆ ಜಿಲ್ಲೆಯವರಿಗೆ ಉಸ್ತುವಾರಿ ಸಿಕ್ಕೇ ಇರಲಿಲ್ಲ. ಆದರೆ ಈ ಬಾರಿ 5 ವರ್ಷ ನಮ್ಮ ಸರ್ಕಾರ ಸುಭದ್ರವಾಗಿರುವುದರಿಂದ ಜಿಲ್ಲೆಯವರಿಗೆ ಉಸ್ತುವಾರಿ ಸಿಕ್ಕಿದೆ ಇದರಿಂದ ಜಿಲ್ಲೆಯ ಅಭಿವೃದ್ಧಿ ಸಹ ಸಮರ್ಪಕವಾಗಿ ಆಗಲಿದೆ ಎಂಬ ವಿಶ್ವಾಸವಿದೆ ಎಂದರು.

6 ಸ್ಥಾನ ಗೆದ್ದು ಜವಾಬ್ದಾರಿ ಹೆಚ್ಚಾಗಿದೆ: ಜಿಲ್ಲೆಯ ಜನ ಕಾಂಗ್ರೆಸ್‌ಗೆ ಏಳು ಕ್ಷೇತ್ರಗಳ ಪೈಕಿ ಆರು ಕ್ಷೇತ್ರದಲ್ಲಿ ಆಶೀರ್ವಾದ ಮಾಡಿದ್ದಾರೆ. ಕೆಲವು ಗೌಪ್ಯ ವರದಿಗಳು ಕೇವಲ ಮಳವಳ್ಳಿಯಲ್ಲಿ ಮಾತ್ರ ಕಾಂಗ್ರೆಸ್ ಗೆಲ್ಲಲಿದೆ ಎಂದು ಹೇಳುತ್ತಿದ್ದವು. ಆದರೆ ಏಳರಲ್ಲಿ ಆರು ಕ್ಷೇತ್ರಗಳ ಗೆಲುವು ನಮ್ಮ ಆತ್ಮವಿಶ್ವಾಸ ಇಮ್ಮಡಿಗೊಳಿಸಿ, ಜವಾಬ್ದಾರಿ ಹೆಚ್ಚಿಸಿದೆ. ರಾಜ್ಯದಲ್ಲೂ ನಿರೀಕ್ಷೆಗೂ ಮೀರಿ 135 ಕ್ಷೇತ್ರಗಳಲ್ಲಿ ಗೆದ್ದಿದ್ದು, ರಾಜ್ಯದ ಸಮಗ್ರ ಅಭಿವೃದ್ಧಿಯೇ ನಮ್ಮ ಗುರಿ ಎಂದು ತಿಳಿಸಿದರು.

ವೇದಿಕೆಯಲ್ಲಿ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ಸಿ.ಮಂಜುನಾಥ, ಕೆಯುಡಬ್ಲ್ಯೂಜೆ ಕಾರ್ಯದರ್ಶಿಗಳಾದ ಮತ್ತೀಕೆರೆ ಜಯರಾಂ, ಸೋಮಶೇಖರ ಕೆರಗೋಡು, ಜಿಲ್ಲಾ ಉಪಾಧ್ಯಕ್ಷ ಬಿ.ಪಿ.ಪ್ರಕಾಶ್, ರಾಜ್ಯ ಸಮಿತಿ ಸದಸ್ಯ ಮಂಜುನಾಥ್ ಉಪಸ್ಥಿತರಿದ್ದರು.

ಮೈಷುಗರ್‌ಗೆ 50 ಕೋಟಿ ಬಿಡುಗಡೆ

ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ 15 ದಿನದಲ್ಲೇ ಮೈಷುಗರ್ ಪುನರಾರಂಭಕ್ಕೆ ಕ್ರಮ ವಹಿಸಲಾಗುವುದು ಎಂಬ ಭರವಸೆ ನೀಡಿದ್ದೆವು. ಆ ನಿಟ್ಟಿನಲ್ಲಿ ನಮ್ಮ ಸರ್ಕಾರ ಅಸ್ತಿತ್ವಕ್ಕೆ ಬಂದ ಮೊದಲ ಕ್ಯಾಬಿನೆಟ್‌ನಲ್ಲೇ ಮೈಷುಗರ್ ಅಭಿವೃದ್ಧಿಗಾಗಿ 50 ಕೋಟಿ ಹಣ ಬಿಡುಗಡೆ ಮಾಡಲಾಗಿದೆ. ಈ ಹಿಂದಿನ ಬಿಜೆಪಿ ಸರ್ಕಾರ ಕಾರ್ಖಾನೆಯನ್ನು ಖಾಸಗೀಕರಣ ಮಾಡಲು ಹೊರಟಿತ್ತು. ಜಿಲ್ಲೆಯ ಕಾಂಗ್ರೆಸ್ ಮುಖಂಡರು ಅಂದಿನ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ನೇತೃತ್ವದಲ್ಲಿ ಸರ್ಕಾರದೊಂದಿಗೆ ಮಾತುಕತೆ ನಡೆಸಿ, ಕಾರ್ಖಾನೆಯನ್ನು ಸರ್ಕಾರವೇ ನಡೆಸಬೇಕೆಂದು ಒತ್ತಡ ಹೇರಿದ್ದೆವು. ಆ ನಿಟ್ಟಿನಲ್ಲಿ ಕಾರ್ಖಾನೆ ಮುಂದುವರೆದು ಇದೀಗ ನಮ್ಮ ಸರ್ಕಾರದಲ್ಲಿ ಉತ್ತಮ ರೀತಿಯಲ್ಲಿ ನಡೆಯಲಿದೆ ಎಂದು ಭರವಸೆ ನೀಡಿದರು.

ಈ ಹಿಂದಿನ ಸಿದ್ದರಾಮಯ್ಯ ಸರ್ಕಾರದ ಅಂತ್ಯದ ವೇಳೆ ತಾಂತ್ರಿಕ ಕಾರಣದಿಂದ ಸ್ಥಗಿತಗೊಂಡ ಕಾರ್ಖಾನೆಯನ್ನು ಹೆಚ್.ಡಿ.ಕುಮಾರಸ್ವಾಮಿ ನೇತೃತ್ವದ ಸರ್ಕಾರದಲ್ಲಿ ಪುನರಾರಂಭಗೊಳಿಸಲು ಸಾಧ್ಯವಾಗಲಿಲ್ಲ. ಜಿಲ್ಲೆಯಲ್ಲಿ ಏಳಕ್ಕೆ ಏಳು ಜೆಡಿಎಸ್ ಶಾಸಕರಿದ್ದರೂ ಕಾರ್ಖಾನೆ ಆರಂಭವಾಗಲಿಲ್ಲ. ಬಿಜೆಪಿ ಸರ್ಕಾರ ಸಹ ಕಾರ್ಖಾನೆಯನ್ನು ಸಮರ್ಪಕ ರೀತಿ ಪುನರಾರಂಭಗೊಳಿಸಲಿಲ್ಲ. ಕಾರ್ಖಾನೆ ಮನಸ್ಪೂರ್ತವಾಗಿ ಕಾಂಗ್ರೆಸ್ ಸರ್ಕಾರದಲ್ಲಿ ಆಗಲಿದೆ ಎಂದು ಹೇಳಿದರು.

ಈ ಹಿಂದೆ ಮೈಷುಗರ್ ಅಭಿವೃದ್ಧಿಗೆ ಬಿಡುಗಡೆಯಾದ ಹಣ ವಿದ್ಯುತ್ ಬಾಕಿ ಬಿಲ್ ಹಾಗೂ ಇನ್ನಿತರ ಖರ್ಚಿಗೆ ಬಳಕೆಯಾಗಿದೆ. ಜೊತೆಗೆ ದುರುಪಯೋಗವಾಗಿರುವ ಬಗ್ಗೆಯೂ ಆರೋಪ ಕೇಳಿ ಬಂದಿದ್ದು, ಈ ಬಗ್ಗೆ ಸಮಗ್ರ ವಿಚಾರಣೆ ನಡೆಸಿ, ಒಂದು ವೇಳೆ ಸರ್ಕಾರದ ಹಣ ದುರುಪಯೋಗ ಆಗಿದ್ದರೆ ಅಂತಹವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳುತ್ತೇವೆ ಎಂದರು.

ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇ ಹಗರಣದ ಬಗ್ಗೆ ತನಿಖೆ

ಮಂಡ್ಯ: ಬೆಂಗಳೂರು– ಮೈಸೂರು ನೂತನ ರಾಷ್ಟ್ರೀಯ ಹೆದ್ದಾರಿಯಲ್ಲಿ ನಡೆದಿರುವ ಭೂಸ್ವಾಧೀನ ಹಾಗೂ ಕಳಪೆ ಕಾಮಗಾರಿ ಬಗ್ಗೆ ತನಿಖೆಗೆ ಆದೇಶಿಸಲು ಸರ್ಕಾರ ಗಂಭೀರ ಚಿಂತನೆ ನಡೆಸಿದೆ ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ಸಂವಾದದಲ್ಲಿ ಮಾತನಾಡಿದ ಅವರು, ಹೆದ್ದಾರಿ ನಿರ್ಮಾಣದಲ್ಲಿ ಅವೈಜ್ಞಾನಿಕವಾಗಿ ಭೂಸ್ವಾಧೀನ ನಡೆದಿದ್ದು, ಇದರಿಂದ ರೈತರಿಗೆ ಅನ್ಯಾಯವಾಗಿದೆ. ಈ ಬಗ್ಗೆ ದೂರುಗಳು ಸಹ ಬಂದಿವೆ. ಜೊತೆಗೆ ಹೆದ್ದಾರಿ ಪ್ರಾಧಿಕಾರ ಕಳಪೆ ಕಾಮಗಾರಿ ನಡೆಸಿದ್ದು, ಇದರಿಂದ ಭಾರೀ ಅಪಘಾತಗಳು ಸಂಭವಿಸುತ್ತಿವೆ. ಇದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ ಎಂದರು.

ನೂತನ ಹೈವೇಯಲ್ಲಿ ಶೌಚಾಲಯವಿಲ್ಲ. ಆಂಬುಲೆನ್ಸ್ ವ್ಯವಸ್ಥೆ ಇಲ್ಲ. ಪ್ರಥಮ ಚಿಕಿತ್ಸೆ ನೀಡಲು ಪ್ರಾಥಮಿಕ ಆರೋಗ್ಯ ಕೇಂದ್ರವಿಲ್ಲ. ಇಷ್ಟೊಂದು ಅಧ್ವಾನದ ಜೊತೆಗೆ ಅನೇಕ ಕಡೆ ಕಾಮಗಾರಿ ಪೂರ್ಣಗೊಂಡಿಲ್ಲ. ಹೀಗಿದ್ದರೂ ರಸ್ತೆ ಉದ್ಘಾಟನೆ ತರಾತುರಿಯಲ್ಲಿ ಏಕೆ ಬೇಕಿತ್ತು. ಎಂಟ್ರಿ, ಎಕ್ಸಿಟ್ ಸಹ ತರಾತುರಿಯಲ್ಲಿ ಮಾಡಲಾಗಿದೆ. ಅಂಡರ್‌ಪಾಸ್‌ನಲ್ಲಿ ಮಳೆ ನೀರು ಹೋಗಲು ಜಾಗವಿಲ್ಲ. ಇದರಿಂದ ಪ್ರಯಾಣಿಕರಿಗೆ ಬಹಳ ತೊಂದರೆಯಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಒಬ್ಬ ಮಂತ್ರಿಯಾಗಿ ನನಗೆ ಆ ರಸ್ತೆಯಲ್ಲಿ ಹೋಗಲು ಭಯವಿದೆ. ಹೀಗಿರುವಾಗ ಸಾಮಾನ್ಯ ಜನರ ಗತಿ ಏನು? ರಸ್ತೆ ಉದ್ಘಾಟನೆಯಾದ ಮೇಲೆ ಹಲವು ಅಪಘಾತ ಪ್ರಕರಣಗಳಾಗಿವೆ. ಇದಕ್ಕೆ ಜವಾಬ್ದಾರಿ ಯಾರು? ಶೀಘ್ರವೇ ನಾನು, ಜಿಲ್ಲಾಧಿಕಾರಿ ಹಾಗೂ ಪ್ರಾಧಿಕಾರದ ಅಧಿಕಾರಿಗಳು ಪರಿಶೀಲನೆ ನಡೆಸಲಿದ್ದೇವೆ. ಈ ಬಗ್ಗೆ ತನಿಖೆ ನಡೆಯುವುದು ಗ್ಯಾರಂಟಿ ಎಂದರು.

ಮೂರನೇ ಪುಟದಿಂದ

ಲೋಕಸಭಾ ಚುನಾವಣೆಯಲ್ಲಿ 20 ಸ್ಥಾನ ಗೆದ್ದೇ ಗೆಲ್ತೀವಿ

ಈಗಾಗಲೇ ಕೇಂದ್ರದ ಬಿಜೆಪಿ ನಾಯಕರಿಗೆ ಲೋಕಸಭಾ ಚುನಾವಣೆಯಲ್ಲಿ ಸೋಲುಂಟಾಗುವುದು ಗೊತ್ತಾಗಿದೆ. ರಾಜ್ಯದಲ್ಲೂ ಬಿಜೆಪಿಗೆ ಗಣನೀಯ ಪ್ರಮಾಣದ ಹಿನ್ನಡೆಯಾಗಲಿದೆ. ರಾಜ್ಯದ 28 ಲೋಕಸಭಾ ಕ್ಷೇತ್ರದಲ್ಲಿ 20 ಸ್ಥಾನಗಳಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಲಿದೆ. ವಿಧಾನಸಭಾ ಚುನಾವಣೆಯಲ್ಲಿ 8 ಜಿಲ್ಲೆಯಲ್ಲಿ ಬಿಜೆಪಿ ಒಂದೇ ಒಂದು ಸ್ಥಾನ ಗೆದ್ದಿಲ್ಲ. ಮುಂದಿನ ಲೋಕಸಭಾ ಚುನಾವಣೆಯಲ್ಲೂ ಭ್ರಷ್ಟ ಬಿಜೆಪಿಯನ್ನು ರಾಜ್ಯದ ಜನತೆ ಮಣಿಸಿ, ಜನಪರ, ಬಡವರ ಪರ ಆಡಳಿತ ನೀಡುವ ಕಾಂಗ್ರೆಸ್‌ಗೆ ಬೆಂಬಲ ನೀಡಲಿದ್ದಾರೆ ಎಂದು ತಿಳಿಸಿದರು.

ವಿಧಾನಸಭಾ ಚುನಾವಣೆ ವೇಳೆ ಬಿಜೆಪಿ ಅಭ್ಯರ್ಥಿ ಪರ ಪ್ರಚಾರ ಮಾಡಲು ಪ್ರಧಾನಿ ನರೇಂದ್ರ ಮೋದಿ, ಕೇಂದ್ರದ ಹಲವು ಸಚಿವರು, ರಾಷ್ಟ್ರಮಟ್ಟದ ನಾಯಕರು ಬಂದಿದ್ದರು. ಕಾಂಗ್ರೆಸ್ ಘೋಷಿಸಿದ್ದ ಗ್ಯಾರಂಟಿ ಯೋಜನೆ ಜಾರಿಗೊಳಿಸಲು ಸಾಧ್ಯವಿಲ್ಲ. ಇದರಿಂದ ರಾಜ್ಯ ದಿವಾಳಿಯಾಗುತ್ತದೆ ಎಂದು ಸುಳ್ಳು ಹೇಳಿದ್ದರು. ಕರ್ನಾಟಕದಲ್ಲಿ ಕಾಂಗ್ರೆಸ್ ಐದು ಗ್ಯಾರಂಟಿ ಕೊಟ್ಟಿದೆ. ಅದು ಜನಪರ ಹಾಗೂ ಬಡವರಿಗೆ ಶಕ್ತಿ ತುಂಬುವ ಯೋಜನೆಗಳಾಗಿವೆ. ಅದಕ್ಕೆ ನಾವು ಸಹಾಯ ಮಾಡುತ್ತೇವೆ ಎಂದು ದೇಶದ ಪ್ರಧಾನಿ ಹೇಳಬಹುದು ಎಂದು ನಿರೀಕ್ಷೆ ಮಾಡಿದ್ದೆವು. ಆದರೆ, ಪ್ರಧಾನಿಗಳು ರಾಜಕೀಯವಾಗಿ ಮಾತಾಡಿ, ಟೀಕೆ ಮಾಡಿ ಹೋದರು. ಅದರಂತೆ ರಾಜ್ಯ ಬಿಜೆಪಿ ನಾಯಕರು ಈಗಲೂ ಗ್ಯಾರಂಟಿ ಕಾರ್ಯಕ್ರಮಗಳ ಬಗ್ಗೆ ಟೀಕೆ ಮಾತಾಡುತ್ತಿದ್ದಾರೆ ಎಂದು ಅಸಮಾದಾನ ವ್ಯಕ್ತಪಡಿಸಿದರು.

ರಸಗೊಬ್ಬರದ ರೇಟ್ ಕಡಿಮೆ ಮಾಡಿ ಸಾರ್: ಮುಖ್ಯಮಂತ್ರಿ ಸಿದ್ದರಾಮಯ್ಯ ಕೃತಜ್ಞತಾ ಸಮಾರಂಭದಲ್ಲಿ ಮಾತನಾಡುತ್ತಿದ್ದಾಗ ವೇದಿಕೆ ಮುಂಭಾಗದಲ್ಲಿ ಕುಳಿತಿದ್ದ ವ್ಯಕ್ತಿಯೊಬ್ಬರು ಜೋರಾಗಿ ಕೂಗಿ 'ರಸಗೊಬ್ಬರ ರೇಟ್ ಕಡಿಮೆ ಮಾಡಿ ಸಾರ್' ಎಂದು ಮನವಿ ಮಾಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಿಎಂ ಸಿದ್ದರಾಮಯ್ಯ ರಸಗೊಬ್ಬರ ರೇಟ್ ಕಡಿಮೆ ಮಾಡಬೇಕಾಗಿರುವುದು ಕೇಂದ್ರ ಸರ್ಕಾರ. ಪ್ರಧಾನಿ ನರೇಂದ್ರ ಮೋದಿ ಎಂದು ಸ್ಪಷ್ಟನೆ ನೀಡಿದರಲ್ಲದೆ, 2024ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಿ, ಅಧಿಕಾರಕ್ಕೆ ಬರುವುದು ಖಚಿತ. ಆಗ, ರಸಗೊಬ್ಬರ, ಪೆಟ್ರೋಲ್, ಡೀಸೆಲ್, ಅಡುಗೆ ಗ್ಯಾಸ್ ಬೆಲೆಯನ್ನು ಕಡಿಮೆ ಮಾಡುತ್ತೇವೆ ಎಂದರು. ಇದಕ್ಕೆ ನೆರೆದಿದ್ದ ಭಾರೀ ಜನ ಸಮೂಹ ಜೋರಾಗಿ ಚಪ್ಪಾಳೆ ತಟ್ಟುತ್ತಾ ಜೈಕಾರ ಹಾಕಿತು.

ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಲು ಶ್ರಮ: ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಲು ಕಾಂಗ್ರೆಸ್‌ನ ರಾಷ್ಟ್ರ ನಾಯಕರು ಶ್ರಮ ಹೆಚ್ಚಾಗಿದೆ. ರಾಹುಲ್ ಗಾಂಧಿ ಅವರ 'ಭಾರತ್ ಜೊಡೋ ಯಾತ್ರೆ' ಮೂಲಕವೇ ಕರ್ನಾಟಕದಲ್ಲಿ ಪ್ರಚಾರ ಆರಂಭವಾಯಿತು. ಈ ಯಾತ್ರೆಯೂ ಪಕ್ಷದ ಕಾರ್ಯಕರ್ತರಲ್ಲಿ ಹುಮ್ಮಸ್ಸು, ಉತ್ಸಾಹ ತಂದಿತು. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರಲು ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ, ಸೋನಿಯಾ ಗಾಂಧಿ, ಪ್ರಿಯಾಂಕ ಗಾಂಧಿ, ಸುರ್ಜೇವಾಲ, ವೇಣುಗೋಪಾಲ್ ಶ್ರಮವೂ ಇದೆ. ಅವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು.

ನುಡಿದಂತೆ ನಡೆಯುವ ಸರ್ಕಾರ: 2013ರಲ್ಲಿ ಅಧಿಕಾರಕ್ಕೆ ಬಂದಾಗ ಕೊಟ್ಟ ಭರವಸೆಯನ್ನೆಲ್ಲಾ ಈಡೇರಿಸುವ ಮೂಲಕ ನುಡಿದಂತೆ ನಡೆಯುವ ಸರ್ಕಾರ ಎಂದು ಜನರ ವಿಶ್ವಾಸ ಗಳಿಸಿದ್ದೆವು. ಇದೀಗ ಚುನಾವಣಾ ಪೂರ್ವದಲ್ಲಿ ಕೊಟ್ಟಿದ್ದ ಭರವಸೆಗಳಲ್ಲಿ ಐದು ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸುವುದು ಗ್ಯಾರಂಟಿ ಎಂದು ಹಲವು ಬಾರಿ ಹೇಳಿದ್ದೇನೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದು ಕೇವಲ 20 ದಿನವಷ್ಟೇ ಆಗಿದೆ. ಎರಡನೇ ಕ್ಯಾಬಿನೆಟ್ ಸಭೆಯಲ್ಲಿ ಐದು ಗ್ಯಾರಂಟಿ ಈಡೇರಿಸುವುದಕ್ಕೆ ಅನುಮೋದನೆ ನೀಡಲಾಗಿದೆ. 5 ಗ್ಯಾರಂಟಿ ಜಾರಿಗೆ ತರಲು ವರ್ಷಕ್ಕೆ 59 ಸಾವಿರ ಕೋಟಿ ರೂ. ಖರ್ಚಾಗುತ್ತದೆ. ಈಗಾಗಲೇ ಆರ್ಥಿಕ ವರ್ಷದ ಮೂರು ತಿಂಗಳು ಕಳೆದುಹೋಗಿದೆ. ಉಳಿದ ಅವಧಿಗಾಗಿ ಗ್ಯಾರಂಟಿ ಯೋಜನೆಗೆ 41 ಸಾವಿರ ಕೋಟಿ ರೂ. ಬೇಕಾಗಿದೆ. ಆದರೂ, ಜನ ಹಿತಕಾಯಲು ನಾವು ಬದ್ಧವಾಗಿದ್ದೇವೆ ಎಂದು ತಿಳಿಸಿದರು.

ಗೃಹಜ್ಯೋತಿ, ದುರುಪಯೋಗಕ್ಕೆ ಬಿಜೆಪಿ ಪ್ರಚೋದನೆ: ನಾವು 200 ಯುನಿಟ್ ವಿದ್ಯುತ್ ಉಚಿತವಾಗಿ ನೀಡುತ್ತೇವೆಂದು ಭರವಸೆ ನೀಡಿದ್ದೇವೆ. ಕೆಲವು ಮನೆಗಳಲ್ಲಿ 50– 80 ಯುನಿಟ್, 100 ಯುನಿಟ್ ವಿದ್ಯುತ್ ಬಳಸುವವರಿದ್ದಾರೆ. ಆದ ಕಾರಣ ವಾರ್ಷಿಕ ಸರಾಸರಿ ಬಳಕೆ ಮಾಹಿತಿ ಪಡೆದು, ಬಳಕೆ ಮಾಡುತ್ತಿರುವ ವಿದ್ಯುತ್‌ಗಿಂತ ಶೇ.10ರಷ್ಟು ವಿದ್ಯುತ್ ಉಚಿತವಾಗಿ ನೀಡುತ್ತೇವೆ. ಆದರೆ, ಬಿಜೆಪಿಯವರು ವಿದ್ಯುತ್ ದುರುಪಯೋಗ ಮಾಡುವಂತೆ ಪ್ರಚೋದನೆ ನೀಡುತ್ತಿದ್ದಾರೆ. ಎಲ್ಲರಿಗೂ 200 ಯುನಿಟ್ ವಿದ್ಯುತ್ ಉಚಿತವಾಗಿ ನೀಡಿ ಎನ್ನುವುದು ತರ್ಕಬದ್ಧವಾಗಿಲ್ಲ. ಇತಿಹಾಸದಲ್ಲಿ ಯಾರಾದರೂ ಉಚಿತ ವಿದ್ಯುತ್ ನೀಡಿದ್ರಾ? ಎಂದು ಪ್ರಶ್ನಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಬಿಜೆಪಿಯವರು ತಾವು ಮಾಡಲು ಆಗದ ಕೆಲಸವನ್ನು ನಮ್ಮ ಕಾಂಗ್ರೆಸ್ ಸರ್ಕಾರ ಮಾಡುತ್ತಿರುವುದನ್ನು ಸಹಿಸುತ್ತಿಲ್ಲ. ಅದಕ್ಕಾಗಿ ಅಪಪ್ರಚಾರ ಮಾಡುತ್ತಿದ್ದಾರೆ ಎಂದು ಕಿಡಿಕಾರಿದರು.

ಅತ್ತೆಯೋ, ಸೊಸೆಯೋ ವಾದ ಮಾಧ್ಯಮದವರ ಸಂಚು: ಗೃಹಲಕ್ಷ್ಮಿ ಯೋಜನೆಯಲ್ಲಿ ಪ್ರತಿ ಮನೆಯ ಯಜಮಾನಿಗೆ ಮಾಸಿಕ 2 ಸಾವಿರ ರೂ. ನೀಡಲು ಕ್ರಮ ಕೈಗೊಳ್ಳಲಾಗಿದೆ. ರಾಜ್ಯದಲ್ಲಿ 1.28 ಕೋಟಿ ಕುಟುಂಬಗಳ ಯಜಮಾನಿಯರನ್ನು ಗುರುತಿಸುವ ಕೆಲಸ ಆಗುತ್ತಿದೆ. ನಾವು ಭರವಸೆ ನೀಡುವಾಗ ಕುಟುಂಬದ ಯಜಮಾನಿಗೆ ಎಂದೇ ಸ್ಪಷ್ಟವಾಗಿ ಹೇಳಿದ್ದೆವು. ಆದರೆ ಇದೀಗ ಅತ್ತೆನೋ, ಸೊಸೆನೋ ಎನ್ನುತ್ತಿದ್ದಾರೆ. ಕೆಲ ಮಾಧ್ಯಮಗಳು ವಿನಾಕಾರಣ ಅತ್ತೆಯೋ, ಸೊಸೆಯೋ ಎಂದು ಪ್ರತಿದಿನ ಚರ್ಚೆ ಮಾಡುತ್ತಿರುವುದರಲ್ಲಿ ಅರ್ಥವಿಲ್ಲ. ಯಾವ ಮನೆಯಲ್ಲಿ ಅತ್ತೆ ಯಜಮಾನಿಯಾಗಿದ್ದರೋ ಅಲ್ಲಿ ಅತ್ತೆಗೆ ನೀಡುತ್ತೇವೆ. ಸೊಸೆಯೇ ಯಜಮಾನಿ ಆಗಿದ್ದರೆ ಸೊಸೆಗೆ 2 ಸಾವಿರ ನೀಡುತ್ತೇವೆ. ಎಪಿಎಲ್, ಬಿಪಿಎಲ್ ಕಾರ್ಡ್‌ವುಳ್ಳವರಿಗೂ ಸೌಲಭ್ಯ ಸಿಗುತ್ತದೆ. ಆದರೆ, ತೆರಿಗೆ, ಜಿಎಸ್ಟಿ ಕಟ್ಟುವವರಿಗೆ ಸೌಲಭ್ಯ ಸಿಗುವುದಿಲ್ಲ. ವಿಧವಾ ಪಿಂಚಣಿ, ವೃದ್ಧಾಪ್ಯ, ವಿಕಲಚೇತನ ಪಿಂಚಣಿ ತೆಗೆದುಕೊಳ್ಳುವವರಿಗೂ 2 ಸಾವಿರ ಕೊಡುತ್ತೇವೆ. ಯಾರೂ ಸಂಶಯಪಡುವ ಅಗತ್ಯವಿಲ್ಲ. ಅರ್ಜಿ ಕರೆದಿದ್ದೇವೆ. ಜೂ.15ರಿಂದ ಜು.15 ಅರ್ಜಿ ಸಲ್ಲಿಸಬೇಕು. ಆ.15ರವರೆಗೆ ಪರಿಶೀಲನೆ ಮಾಡಿ ಆ.16ರಿಂದ ತಿಂಗಳಿಗೆ 2 ಸಾವಿರ ರೂ. ನೀಡುತ್ತೇವೆ ಎಂದರು.

ನನ್ ಹೆಂಡ್ತಿಗೂ ಫ್ರೀ ಅಂತ ಯಾಕೆ ಅಂದೆ ಗೊತ್ತಾ: 'ಶಕ್ತಿ' ಯೋಜನೆಯನ್ನು ಭಾನುವಾರ (ಜು.11) ಮಧ್ಯಾಹ್ನ 1 ಗಂಟೆಯಿಂದ ಸಾರಿಗೆ ಸಂಸ್ಥೆ ಬಸ್‌ಗಳಲ್ಲಿ ಪ್ರಯಾಣಿಸಲು ಉಚಿತ ಸೇವೆ ಆರಂಭಿಸಲಾಗುತ್ತಿದೆ. ಹವಾನಿಯಂತ್ರಿತ ಹಾಗೂ ಸ್ಲೀಪರ್ ಕೋಚ್ ಹೊರತುಪಡಿಸಿ, ಉಳಿದ ಸಾಮಾನ್ಯ ಬಸ್, ಎಕ್ಸ್‌ಪ್ರೆಸ್ ಬಸ್‌ಗಳಲ್ಲಿ ಕರ್ನಾಟಕದಲ್ಲಿ ಮಾತ್ರ ಉಚಿತವಾಗಿ ಪ್ರಯಾಣಿಸಬಹುದಾಗಿದೆ. ಈ ಯೋಜನೆ ಬಗ್ಗೆ ಕೆಲವು ಮಾಧ್ಯಮದವರು ಗೊಂದಲ ಉಂಟು ಮಾಡಲು ಪ್ರಯತ್ನಿಸಿದರು. ಆ ಕಾರಣದಿಂದ ಸುದ್ದಿಗೋಷ್ಠಿಯಲ್ಲೇ 'ನನ್ನ ಹೆಂಡ್ತಿಗೂ ಫ್ರೀ, ಚೀಫ್ ಸೆಕ್ರೆಟ್ರಿಗೂ ಫ್ರೀ' ಎಂದೆ. ಇದರ ಅರ್ಥ ಬಡವರು, ಶ್ರೀಮಂತರ, ನೌಕರ ವರ್ಗದ ಮಹಿಳೆಯರು ಉಚಿತವಾಗಿ ಸಾರಿಗೆ ಬಸ್‌ನಲ್ಲಿ ಪ್ರಯಾಣಿಸಬಹುದು ಎಂದರ್ಥ ಎಂದು ಸ್ಪಷ್ಟನೆ ನೀಡಿದರು.

ನಿರುದ್ಯೋಗಿಗಳಿಗೆ ಭತ್ಯೆ: 2022–23ನೇ ಸಾಲಿನಲ್ಲಿ ವಿವಿಧ ಪದವಿ ಹಾಗೂ ಡಿಪ್ಲೊಮಾ ಪದವಿ ಪಡೆದು ಕೆಲಸವಿಲ್ಲದೆ ಇರುವ ನಿರುದ್ಯೋಗಿಗಳಿಗೆ ಭತ್ಯೆ ನೀಡುವ ಕಾರ್ಯಕ್ರಮಕ್ಕೆ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ಈ ನಿರುದ್ಯೋಗಿಗಳಿಗೆ 24 ತಿಂಗಳು ಭತ್ಯೆ ನೀಡಲಾಗುತ್ತದೆ. ಪದವೀಧರರಿಗೆ ತಿಂಗಳಿಗೆ ಮೂರು ಸಾವಿರ ರೂ, ಡಿಪ್ಲೊಮಾ ಮಾಡಿದವರಿಗೆ ತಿಂಗಳಿಗೆ 1500 ಕೊಡುತ್ತೇವೆ. ಆದರೆ, ಭತ್ಯೆ ಪಡೆಯುತ್ತಿರುವವರು ಖಾಸಗಿ ಅಥವಾ ಸರ್ಕಾರಿ ಕ್ಷೇತ್ರದಲ್ಲಿ ಕೆಲಸ ಪಡೆದರೆ ನಿರುದ್ಯೋಗ ಭತ್ಯೆ ಸ್ಥಗಿತಗೊಳಿಸಲಾಗುತ್ತದೆ. ಒಟ್ಟಾರೆ. ನಾವು ನೀಡಿದ್ದ 5 ಗ್ಯಾರಂಟಿ ಜಾರಿಗೊಳಿಸಲು ತೀರ್ಮಾನ, ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಜನಸೇವೆ, ಸಕ್ರಿಯ ರಾಜಕಾರಣದಲ್ಲಿರ್ತಿನಿ

ಸ್ಪರ್ಧಿಸಲ್ಲ. ಆದರೆ ಸಕ್ರಿಯ ರಾಜಕಾರಣದಲ್ಲಿರುತ್ತೇನೆ. ನನ್ನ ಉಸಿರು ಇರೋವರೆಗೂ ಜನರ ಸೇವೆ ಮಾಡಲು ಸದಾ ಸಿದ್ಧನಿರುತ್ತೇನೆ. ನಾನು ನುಡಿದಂತೆ ನಡೆಯುತ್ತೇನೆ ಎಂದರು.

ಇದಕ್ಕೆ ಸಮಾವೇಶದಲ್ಲಿ ಪಾಲ್ಗೊಂಡಿದ್ದ ಜನರೆಲ್ಲರೂ 'ನೀವು ಚುನಾವಣಾ ರಾಜಕೀಯದಲ್ಲಿರಬೇಕು, ಪ್ರಧಾನಿಯಾಗಬೇಕು' ಎಂದು ಕೂಗುತ್ತಲೇ ಇದ್ದರು. ಒಂದೇ ಸಮನೆ ಜನ ಕೂಗುತ್ತಲೇ ಇದ್ದರು. ಜೊತೆಗೆ ಗದರಿಸಿದ ಸಿದ್ದರಾಮಯ್ಯ, ನಿಮ್ಮ ಸೇವೆ ಮಾಡಲು ಸದಾ ಸಿದ್ಧನಿರುತ್ತೇನೆ ಎಂದು ಸಮಾಧಾನಿಸಿದರು.

ಮತದಾರರೇ ನನ್ನ ರಾಜಕೀಯ ಏಳಿಗೆಗೆ ಕಾರಣ

ನೀಡಿದ್ದಾರೆ ಎಂದು ತಿಳಿಸಿದರು. ಕಾಂಗ್ರೆಸ್ ಘೋಷಣೆ ಮಾಡಿದ್ದ 5 ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕೆ ನಾನು ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಸಹಿ ಮಾಡಿದ್ದ ಗ್ಯಾರಂಟಿ ಕಾರ್ಡ್ ಅನ್ನು ಕಾರ್ಯಕರ್ತರ ಮನೆ ಮನೆಗೆ ತಲುಪಿಸಲಾಗಿದೆ. ಅಲ್ಲದೇ, ನಾನು ಮುಖ್ಯಮಂತ್ರಿಯಾಗಬೇಕೆಂದು ಜನ ಬಯಸಿದ್ದರಿಂದ ಕಾಂಗ್ರೆಸ್‌ಗೆ ಹೆಚ್ಚಿನ ಬೆಂಬಲ ನೀಡಿದ್ದಾರೆ ಎಂದು ತಿಳಿಸಿದರು.

ಬಿಜೆಪಿ ವೈಫಲ್ಯ ಮನವರಿಕೆ: ಇದಕ್ಕೂ ಮುನ್ನ ಮಾಜಿ ಶಾಸಕ ಡಾ. ಯತೀಂದ್ರ ಸಿದ್ದರಾಮಯ್ಯ ಮಾತನಾಡಿ, ಚುನಾವಣೆ ವೇಳೆ ನಮ್ಮ ಸರ್ಕಾರದ ಸಾಧನೆ, ಬಿಜೆಪಿಯ ವೈಫಲ್ಯ, ಸಾಮರಸ್ಯ ಹಾಳಾಗಿರುವುದನ್ನು ಕ್ಷೇತ್ರದ ಕಾರ್ಯಕರ್ತರು ಮನೆ ಮನೆಗೆ ಹೋಗಿ ತಿಳಿಸಿದ್ದಾರೆ. ಜನಶಕ್ತಿಯ ಮುಂದೆ ಯಾವುದೇ ಶಕ್ತಿ ಇಲ್ಲ ಎಂಬುದು ಈ ಚುನಾವಣೆ ತೋರಿಸಿದೆ ಎಂದರು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹಾದೇವಪ್ಪ ಮಾತನಾಡಿ, ವರುಣ ಕ್ಷೇತ್ರ ವ್ಯಾಪ್ತಿಯ ಮೂರು ತಾಲೂಕು ಜನರು ಕ್ಷೇತ್ರದ ಇತಿಹಾಸ ಬರೆದಿದ್ದೀರಿ. ಸಿದ್ದರಾಮಯ್ಯರನ್ನು ಒಮ್ಮೆ ವಿರೋಧ ಪಕ್ಷದ ನಾಯಕನಾಗಿ ಹಾಗೂ ಈಗ ಎರಡನೇ ಬಾರಿ ಸಿಎಂ ಆಗಿ ಆಯ್ಕೆ ಮಾಡಿದ ಕೀರ್ತಿ ವರುಣ ಕ್ಷೇತ್ರದ ಜನತೆಗೆ ಸಲ್ಲುತ್ತದೆ. ವಿಧಾನಸೌಧದ ಹೊರಗೆ ಹಾಗೂ ಒಳಗೆ ಸಿದ್ದರಾಮಯ್ಯ ನಡೆಸಿದ ಹೋರಾಟವೇ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರಲು ಕಾರಣವಾಗಿದೆ. ಸಿದ್ದರಾಮಯ್ಯ ಭರವಸೆಗಳನ್ನು ಈಡೇರಿಸುವುದಲ್ಲದೇ ಈ ಬಾರಿಯ ಸರಕಾರದಲ್ಲಿಯೂ ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಕ್ಕೆ ತರುವ ಮೂಲಕ ಒಬ್ಬ ನಂಬಿಕಸ್ಥ ನಾಯಕ ಎನಿಸಿಕೊಂಡಿದ್ದಾರೆ. ಜನರ ಭಾವನೆ ಗೌರವಿಸುವ ಸಿದ್ದರಾಮಯ್ಯ ಮೈಸೂರಿನ ಹೆಮ್ಮೆಯಾಗಿದೆ. ಸಿದ್ದರಾಮಯ್ಯ ಅವರ ಈ ವರ್ಚಸ್ಸಿನಿಂದಲೇ ಮುಂಬರುವ ಎಲ್ಲಾ ಚುನಾವಣೆಯಲ್ಲಿ ಗೆಲ್ಲುತ್ತೇವೆ ಎಂದರು.

ಪಶು ಸಂಗೋಪನೆ ಮತ್ತು ರೇಷ್ಮೆ ಖಾತೆ ಸಚಿವ ಕೆ.ವೆಂಕಟೇಶ್ ಮಾತನಾಡಿ, ಕಳೆದ ಚುನಾವಣೆಯು ಮೋದಿ ಹಾಗೂ ಸಿದ್ದರಾಮಯ್ಯ ನಡುವಿನ ಹೋರಾಟವಾಗಿತ್ತು. ಈ ಯುದ್ಧದಲ್ಲಿ ಸಿದ್ದರಾಮಯ್ಯ ಗೆದ್ದಿದ್ದಾರೆ. ಘಟಾನುಘಟಿ ನಾಯಕರನ್ನು ನಿಲ್ಲಿಸಿದ್ದಾರೆ. ಹೀಗಾಗಿ ಸಿದ್ದರಾಮಯ್ಯ ಅವರ ಗೆಲುವು ಕಷ್ಟವಾಗುತ್ತದೆ ಎಂದು ಕೆಲವರು ಮಾತನಾಡಿಕೊಳ್ಳುತ್ತಿದ್ದರು. ಆದರೆ ನಮ್ಮ ಹಾಗೂ ಜನರ ನಂಬಿಕೆಯಂತೆ ಕ್ಷೇತ್ರದ ಜನತೆ ಮತ ನೀಡಿದ್ದಾರೆ. ಒಬ್ಬ ಒಳ್ಳೆಯ ನಾಯಕನನ್ನು ಕ್ಷೇತ್ರದಲ್ಲಿ ಉಳಿಸಿಕೊಂಡಿದ್ದಾರೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಶಾಸಕರಾದ ದರ್ಶನ್ ಧ್ರುವನಾರಾಯಣ್, ಅನಿಲ್ ಚಿಕ್ಕಮಾದು, ಡಿ.ರವಿಶಂಕರ್, ಕೆ.ಹರೀಶ್‌ಗೌಡ, ಪುಟ್ಟರಂಗಶೆಟ್ಟಿ, ಎ.ಆರ್.ಕೃಷ್ಣಮೂರ್ತಿ, ಗಣೇಶ್‌ಪ್ರಸಾದ್, ಮಾಜಿ ಶಾಸಕರಾದ ಕಳಲೆ ಕೇಶವಮೂರ್ತಿ, ಸೋಮಶೇಖರ್, ಸುನೀತ ವೀರಪ್ಪಗೌಡ, ಮಾಜಿ ಸಂಸದ ಕಾಗಲವಾಡಿ ಶಿವಣ್ಣ, ವಿಧಾನಪರಿಷತ್ ಸದಸ್ಯರಾದ ಡಾ.ತಿಮ್ಮಯ್ಯ, ಮಾಜಿ ಸದಸ್ಯ ಆರ್.ಧರ್ಮಸೇನ, ಜಿಪಂ ಮಾಜಿ ಸದಸ್ಯ ಬಿ.ಎಂ.ರಾಮು, ವಾಲ್ಮೀಕಿ ನಿಗಮ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜು, ಮುಖಂಡರಾದ ಹದಿನಾರು ಗುರುಪಾದಸ್ವಾಮಿ, ನಂದಕುಮಾರ್, ವರುಣಾ ಮಹೇಶ್, ಸುತ್ತೂರು ಜಗದೀಶ್, ತಾಪಂ ಮಾಜಿ ಅಧ್ಯಕ್ಷ ತಮ್ಮಣ್ಣೇಗೌಡ, ತಾಲೂಕು ಕುರುಬರ ಸಂಘದ ಅಧ್ಯಕ್ಷ ಕೆಂಪಣ್ಣ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹಾಡ್ಯ ರಂಗಸ್ವಾಮಿ, ಮೈಸೂರು ಕಾಂಗ್ರೆಸ್ ಜಿಲ್ಲಾಧ್ಯಕ್ಷ ಬಿ.ಜೆ. ವಿಜಯಕುಮಾರ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಉಚಿತ ಪ್ರಯಾಣ

ನಾಳೆ ಮಧ್ಯಾಹ್ನದಿಂದ ಉಚಿತವಾಗಿ ಪ್ರಯಾಣಿಸುವ (ಶಕ್ತಿ) ಯೋಜನೆ ಅನುಷ್ಠಾನಗೊಳ್ಳಲಿದೆ. ರಾಜ್ಯದೊಳಗೆ ಸೀಮಿತವಾಗಿ ಉಚಿತ ಪ್ರಯಾಣ ಸೌಲಭ್ಯವಿದ್ದು, ಕರ್ನಾಟಕದ ಮಹಿಳೆಯರಲ್ಲದವರಿಗೆ ಇದರ ಸವಲತ್ತು ದೊರೆಯುವುದಿಲ್ಲ. ಈ ಶಕ್ತಿ ಯೋಜನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು, ವಿಧಾನಸೌಧದ ಮುಂಭಾಗ ನಡೆಯುವ ಸರಳ ಸಮಾರಂಭದಲ್ಲಿ ಚಾಲನೆ ನೀಡಲಿದ್ದಾರೆ. ಚುನಾವಣಾ ಪೂರ್ವದಲ್ಲಿ ನೀಡಿದ್ದ ಐದು ಗ್ಯಾರಂಟಿಗಳ ಪೈಕಿ ಮಹಿಳೆಯರಿಗೆ ಉಚಿತ ಪ್ರಯಾಣದ ಭರವಸೆ ಈಡೇರಿಸುತ್ತಿದ್ದು, ಉಳಿದ ನಾಲ್ಕು ಗ್ಯಾರಂಟಿ ಭರವಸೆಗಳು ಬರುವ ನವೆಂಬರ್ ತಿಂಗಳೊಳಗೆ ಅನುಷ್ಠಾನಗೊಳ್ಳಲಿವೆ. ಶಕ್ತಿ ಯೋಜನೆಗೆ ಮುಖ್ಯಮಂತ್ರಿಗಳು ಹಸಿರು ನಿಶಾನೆ ತೋರುತ್ತಿದ್ದಂತೆ ಮಹಿಳಾ ಪ್ರಯಾಣಿಕರು ರಾಜ್ಯದೊಳಗೆ ಪ್ರಯಾಣಿಸಲು ದೂರದ ಮಿತಿ ಇರುವುದಿಲ್ಲ. ಆದರೆ, ಪ್ರತಿ ಬಸ್ಸಿನಲ್ಲಿ ಶೇ.50ರಷ್ಟು ಸ್ಥಾನಗಳನ್ನು ಗಂಡಸರಿಗೆ ಮೀಸಲಿರಿಸಿದ್ದು, ಇನ್ನೂ ಉಳಿದ ಆಸನಗಳಷ್ಟೇ ಮಹಿಳೆಯರು ಪ್ರಯಾಣಿಸಬೇಕಾಗುತ್ತದೆ.

ಪ್ರಯಾಣಿಸುವ ಸಂದರ್ಭದಲ್ಲಿ ತಾವು ಕರ್ನಾಟಕದವರೇ ಎಂಬುದನ್ನು ದೃಢಪಡಿಸಲು ಕೇಂದ್ರ ಇಲ್ಲವೇ ರಾಜ್ಯ ಸರ್ಕಾರದ ಗುರುತಿನ ಚೀಟಿಯನ್ನು ನಿರ್ವಾಹಕರ ಬಳಿ ಹಾಜರುಪಡಿಸಬೇಕು. ಅಂತರರಾಜ್ಯ ಸಾರಿಗೆಗಳಲ್ಲಿ ಮಹಿಳೆಯರು ಉಚಿತವಾಗಿ ಪ್ರಯಾಣಿಸಲು ಅವಕಾಶವಿರುವುದಿಲ್ಲ. ಮುಂದಿನ ಮೂರು ತಿಂಗಳೊಳಗಾಗಿ ಮಹಿಳಾ ಪ್ರಯಾಣಿಕರು 'ಶಕ್ತಿ' ಸ್ಮಾರ್ಟ್ ಕಾರ್ಡಿಗಾಗಿ ಸೇವಾಸಿಂಧು ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಿ ಪಡೆಯಬೇಕು. ಅಲ್ಲಿಯವರೆಗೂ ಸರ್ಕಾರದ ಗುರುತಿನ ಚೀಟಿ ತೋರಿಸಿ ಪ್ರಯಾಣಿಸಬಹುದಾಗಿದೆ. ಈಗಾಗಲೇ ಸರ್ಕಾರ ಪ್ರಕಟಿಸಿರುವಂತೆ ಜುಲೈ ಒಂದರಿಂದ 200 ಯುನಿಟ್‌ಗಿಂತ ಕಡಿಮೆ ಬಳಕೆ ಮಾಡುವವರಿಗೆ ವಿದ್ಯುತ್ ಉಚಿತ ಯೋಜನೆ ಜಾರಿಗೊಳ್ಳಲಿದೆ. ಆಗಸ್ಟ್ 17ರಿಂದ ಮನೆಯೊಡತಿಗೆ ಮಾಸಿಕ 2000 ರೂ. ನೀಡುವ ಗೃಹ ಲಕ್ಷ್ಮೀ ಯೋಜನೆ ಜಾರಿಗೊಳ್ಳಲಿದೆ. ಈಗಾಗಲೇ ಪ್ರಕಟಗೊಂಡಿರುವಂತೆ ಜುಲೈ ತಿಂಗಳಲ್ಲಿ ಬಡತನರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಪ್ರತಿ ಯುನಿಟ್‌ಗೆ ಮಾಸಿಕ 5 ಕೆ.ಜಿ. ಅಕ್ಕಿ ಬದಲು 10 ಕೆ.ಜಿ. ಆಹಾರ ಧಾನ್ಯವನ್ನು ಬಿಪಿಎಲ್ ಪಡಿತರ ಚೀಟಿದಾರರು ಪಡೆದುಕೊಳ್ಳಬಹುದಾಗಿದೆ.

ನಾಲ್ಕು ಸ್ಥಾನೀಕರಿಗೆ ವಾರ್ಷಿಕ ಸರದಿಯಂತೆ ಜಿಲ್ಲಾ ಖಜಾನೆಯಿಂದ ತಿರುವಾಭರಣ ಪೆಟ್ಟಿಗೆ ತರುವ ಅವಕಾಶ

- ಮೇಲುಕೋಟೆ ಶ್ರೀ ಚೆಲುವನಾರಾಯಣಸ್ವಾಮಿ ದೇವಾಲಯದ ನಾಲ್ಕು ದಶಕದ ವಿವಾದಕ್ಕೆ ತೆರೆ ಎಳೆದ ಡಿಸಿ ನ್ಯಾಯಾಲಯ
- ಖಜಾನೆಯಿಂದ ಕಿರೀಟ ತರುವ ಹಕ್ಕು ತಮಗೆ ಮಾತ್ರ ಎಂದು ಹಕ್ಕು ಸ್ಥಾಪಿಸಿದ್ದ ಪ್ರಥಮ ಸ್ಥಾನೀಕರಿಗೆ ಮುಖಭಂಗ



ಮೇಲುಕೋಟೆ, ಜೂ.10– ಶ್ರೀ ಚೆಲುವನಾರಾಯಣಸ್ವಾಮಿ ಬ್ರಹ್ಮೋತ್ಸವಗಳಲ್ಲಿ ನಾಲ್ಕೂ ಸ್ಥಾನೀಕರು ಜಿಲ್ಲಾ ಖಜಾನೆಯಿಂದ ವಾರ್ಷಿಕ ಸರದಿ ಮೇಲೆ ತಿರುವಾಭರಣ ಪೆಟ್ಟಿಗೆ ತರುವ ಕರ್ತವ್ಯ ನಿರ್ವಹಿಸಬೇಕೆಂದು ಮಂಡ್ಯ ಜಿಲ್ಲಾಧಿಕಾರಿಗಳ ನ್ಯಾಯಾಲಯ ತೀರ್ಪು ನೀಡಿದೆ. ಇದರೊಂದಿಗೆ ನಾಲ್ಕು ದಶಕಗಳ ವಿವಾದಕ್ಕೆ ತೆರೆ ಬಿದ್ದಿದೆ.

ಇದುವರೆಗೆ ವೈರಮುಡಿ–ರಾಜಮುಡಿ–ಕೃಷ್ಣರಾಜಮುಡಿ ಬ್ರಹ್ಮೋತ್ಸವ ವೇಳೆ ಖಜಾನೆಯಿಂದ ಕಿರೀಟ ತರುವ ಹಕ್ಕು ತಮಗೊಬ್ಬರಿಗೆ ಸೇರಿದ್ದು ಎಂದು ಉತ್ಸವದ ವೇಳೆ ಗೊಂದಲ ಸೃಷ್ಟಿಸಿ, ಲಾಬಿ ಮಾಡಿ ದೇಗುಲದ ಕಚೇರಿಯಿಂದಲೂ ಜ್ಞಾಪನ ಪಡೆಯದೆ(ಒಎಂ) ತಾವೊಬ್ಬರೇ ಕಿರೀಟ ತರುತ್ತಿದ್ದ ಪ್ರಥಮ ಸ್ಥಾನೀಕರಿಗೆ ಹಿನ್ನಡೆಯಾಗಿದೆ.

ಮಂಡ್ಯ ಜಿಲ್ಲಾಧಿಕಾರಿ ಡಾ.ಹೆಚ್.ಎನ್. ಗೋಪಾಲಕೃಷ್ಣ ನೀಡಿರುವ 20 ಪುಟಗಳ ಸುದೀರ್ಘ ಆದೇಶದಲ್ಲಿ ಕೈಪಿಡಿ ನಿಯಮಾವಳಿಗಳು, ದಾಖಲೆಗಳು ಹಾಗೂ ಉಚ್ಛ ನ್ಯಾಯಾಲಯಗಳು ನೀಡಿರುವ ತೀರ್ಪುಗಳನ್ನು ಅವಲೋಕಿಸಿ ಮೂಲಪದ್ಧತಿ ಜಾರಿಗೊಳಿಸಿದ್ದಾರೆ. ಧಾರ್ಮಿಕ ದತ್ತಿ ಕಾಯ್ದೆ ನಿಯಮಾವಳಿಯಂತೆ ಜಿಲ್ಲಾಧಿಕಾರಿಗಳ ನ್ಯಾಯಾಲಯಕ್ಕೆ ಹಕ್ಕಿನ ತೀರ್ಮಾನ ಮಾಡಲು ಅವಕಾಶವಿತ್ತಾದರೂ ಯಾವೊಬ್ಬ ಜಿಲ್ಲಾಧಿಕಾರಿಗಳೂ ಈ ಬಗ್ಗೆ ಕಾಳಜಿ ವಹಿಸದ ಕಾರಣ ಪ್ರಕರಣ ವಿವಾದವಾಗಿಯೇ ಉಳಿದಿತ್ತು.

ನಾಲ್ಕನೇ ಸ್ಥಾನೀಕ ಶ್ರೀನಿವಾಸನರಸಿಂಹನ್ ಗುರೂಜಿಯವರ ಹೋರಾಟದ ಫಲವಾಗಿ ದೇವಾಲಯದ ನಾಲ್ಕೂ ಸ್ಥಾನೀಕರಿಗೆ ಇದೀಗ ನ್ಯಾಯ ದೊರೆತಿದೆ ದೇವಾಲಯದಲ್ಲಿ ನಾಲ್ಕು ಮಂದಿ ಸ್ಥಾನೀಕರಿದ್ದರೂ 4ನೇ ಸ್ಥಾನೀಕರ ಹೊರತಾಗಿ ಯಾರೂ ಸಹ ತಿರುವಾಭರಣ ಪೆಟ್ಟಿಗೆ ತರುವ ಹಕ್ಕಿನ ಬಗ್ಗೆ ಹೋರಾಟ ಮಾಡಿರಲಿಲ್ಲ. ಮಾಧ್ಯಮಗಳಲ್ಲೂ ಸೇವೆಯಲ್ಲಿ ತೊಡಗಿಸಿಕೊಂಡಿದ್ದ ದಿವಂಗತ ಸ್ಥಾನೀಕಂ ನಾಗರಾಜಯ್ಯಂಗಾರ್ ಹೋರಾಟ ಮಾಡಿ ಜಿಲ್ಲಾಧಿಕಾರಿಗಳಿಂದ 3 ಸಲ, ಹೈಕೋರ್ಟ್‌ನಿಂದ 2 ಸಲ ಆದೇಶ ಪಡೆದಿದ್ದರೂ ಪ್ರಥಮ ಸ್ಥಾನೀಕರ ಲಾಬಿ ಮುಂದೆ ಕಿರೀಟ ತರುವ ಕರ್ತವ್ಯ ನಿರ್ವಹಿಸಲು ಸಾಧ್ಯವಾಗಿರಲಿಲ್ಲ. ಅವರ ಪುತ್ರ ಶ್ರೀನಿವಾಸನ್ ಗುರೂಜಿ ಡಿಸಿ ನ್ಯಾಯಾಲಯದಲ್ಲಿ ಹೋರಾಟ ಮುಂದುವರೆಸಿ ಸಮಗ್ರ ದಾಖಲೆಗಳನ್ನು ಜಿಲ್ಲಾಧಿಕಾರಿಗಳ ಮುಂದೆ ಸಲ್ಲಿಸಿದ ಪರಿಣಾಮ ಮಂಡ್ಯ ಜಿಲ್ಲಾಧಿಕಾರಿಗಳು ನ್ಯಾಯಾಲಯದಲ್ಲಿ ವಿಚಾರಣೆ ನಡೆಸಿ ಆದೇಶ ಹೊರಡಿಸಿದ್ದಾರೆ.

2023ರ ವೈರಮುಡಿಯಿಂದಲೇ ಪೂರ್ವಾನ್ವಯವಾಗುವಂತೆ ಜಿಲ್ಲಾಧಿಕಾರಿಗಳ ನ್ಯಾಯಾಲಯದ ಆದೇಶ ಜಾರಿಗೊಂಡಿದ್ದು, ಸರದಿಯಂತೆ ಸ್ಥಾನೀಕರು ತಿರುವಾಭರಣ ಪೆಟ್ಟಿಗೆ ತರುವ ಕರ್ತವ್ಯ ಮಾಡಲು ಆದೇಶಿಸಲಾಗಿದೆ. ಇನ್ನು ಮುಂದೆ ಮೇಲುಕೋಟೆ ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿಗಳು ಪ್ರತಿ ಬ್ರಹ್ಮೋತ್ಸವದ ವೇಳೆಯೂ ಸಂಬಂಧಿಸಿದ ಸ್ಥಾನೀಕರಿಗೆ ಕಚೇರಿ ಜ್ಞಾಪನ ನೀಡುವ ಮೂಲಕ ನ್ಯಾಯಾಲಯದ ಆದೇಶ ಅನುಷ್ಠಾನಗೊಳಿಸಬೇಕಿದೆ.

ಕೃತಜ್ಞತೆ: ಜಿಲ್ಲಾಧಿಕಾರಿಗಳ ನ್ಯಾಯಾಲಯ ನೀಡಿರುವ ಆದೇಶವನ್ನು ನಾಲ್ಕನೇ ಸ್ಥಾನೀಕ ಶ್ರೀನಿವಾಸ ನರಸಿಂಹನ್ ಗುರೂಜಿ ಸ್ವಾಗತಿಸಿದ್ದು, ಈ ಆದೇಶ ನೀಡಿದ ಮಂಡ್ಯ ಜಿಲ್ಲಾಧಿಕಾರಿ ಡಾ.ಹೆಚ್.ಎನ್.ಗೋಪಾಲಕೃಷ್ಣ ಮತ್ತು ಅಪರ ಜಿಲ್ಲಾಧಿಕಾರಿ ಡಾ. ನಾಗರಾಜುಗೆ ಕೃತಜ್ಞತೆ ಸಲ್ಲಿಸಿದ್ದಾರೆ.

ಅರ್ಜಿ ಆಹ್ವಾನ

ಮಂಡ್ಯ, ಜೂ. 10– 2023–24ನೇ ಶೈಕ್ಷಣಿಕ ಸಾಲಿನಲ್ಲಿ ಪರಿಶಿಷ್ಟ ಜಾತಿ ಕಾನೂನು ಪದವೀಧರರಿಗೆ ಆಡಳಿತ ನ್ಯಾಯಾಧೀಕರಣದಲ್ಲಿ ತರಬೇತಿ ನೀಡಲು ಸಮಾಜ ಕಲ್ಯಾಣ ಇಲಾಖೆ ವೆಬ್‌ಸೈಟ್: www.sw.kar.nic.in ತಂತ್ರಾಂಶದ ಮೂಲಕ ಜೂ.15 ರಿಂದ ಜು.15ರವರೆಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ದೂ: 08232–220772 ಅನ್ನು ಸಂಪರ್ಕಿಸಿ ಎಂದು ಪ್ರಕಟಣೆ ತಿಳಿಸಿದೆ.

ಹಿಂದಿನ ಬಿಜೆಪಿ ಸರ್ಕಾರದಲ್ಲಿ ನಡೆದಿದ್ದ ಕಾಮಗಾರಿಗಳಿಗೆ
ಎಲ್‌ಒಸಿ ನೀಡಲು ಪರ್ಸೆಂಟೇಜ್ ಫಿಕ್ಸ್

●ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಗಂಭೀರ ಆರೋಪ ●ಇದು 45 ಪರ್ಸೆಂಟ್ ಸರ್ಕಾರ ಎಂದಾಯಿತಲ್ವಾ!

ಬೆಂಗಳೂರು, ಜೂ. 10(ಕೆಎಂಶಿ)– ಹಿಂದಿನ ಬಿಜೆಪಿ ಸರಕಾರದಲ್ಲಿ ನಡೆದಿದ್ದ ಕಾಮಗಾರಿಗಳಿಗೆ ಎಲ್‌ಒಸಿ (LOC) ಕೊಡಲು ರಾಜ್ಯ ಕಾಂಗ್ರೆಸ್ ಸರಕಾರ ಪರ್ಸೆಂಟೇಜ್ ಫಿಕ್ಸ್ ಮಾಡಿದೆ ಎಂದು ಮಾಜಿ ಮುಖ್ಯಮಂತ್ರಿಗಳಾದ ಹೆಚ್.ಡಿ.ಕುಮಾರಸ್ವಾಮಿ ಅವರು ನೇರ ಆರೋಪ ಮಾಡಿದರು.

ಪಕ್ಷದ ರಾಜ್ಯ ಕಚೇರಿ ಜೆಪಿ ಭವನದಲ್ಲಿ ಬೆಂಗಳೂರು ನಗರದ ಮುಖಂಡರ ಆತ್ಮಾವಲೋಕನ ಸಭೆಯಲ್ಲಿ ಭಾಗಿಯಾಗುವ ಮುನ್ನ ಅವರು ಮಾಧ್ಯಮಗಳ ಜತೆ ಮಾತನಾಡಿದರು.

ಹಿಂದಿನ ಬಿಜೆಪಿ ಸರಕಾರವನ್ನು 40 ಪರ್ಸೆಂಟ್ ಸರಕಾರ ಎಂದು ಟೀಕಿಸುತ್ತಿದ್ದ ಕಾಂಗ್ರೆಸ್, ಈಗ ಅಧಿಕಾರಕ್ಕೆ ಬಂದ ಮೇಲೆ ಪ್ರತಿಯೊಂದಕ್ಕೂ ರೇಟ್ ಫಿಕ್ಸ್ ಮಾಡುತ್ತಿದೆ. ಹಿಂದಿನ ಸರಕಾರದಲ್ಲಿ ಕೈಗೊಳ್ಳಲಾಗಿದ್ದ ಕಾಮಗಾರಿಗಳಿಗೆ LOC ಕೊಡುವುದಕ್ಕೆ ಈ ಸರಕಾರದಲ್ಲಿ 5% ಫಿಕ್ಸ್ ಮಾಡಿದ್ದಾರೆ. ಇಂಥವರು ಭ್ರಷ್ಟಾಚಾರದ ಬಗ್ಗೆ ಮಾತನಾಡುತ್ತಾರೆ ಎಂದು ಮಾಜಿ ಮುಖ್ಯಮಂತ್ರಿ ಆಕ್ರೋಶ ವ್ಯಕ್ತಪಡಿಸಿದರು.

ಈ ಸರ್ಕಾರದಲ್ಲಿ ಪ್ರಾರಂಭಿಕ ಹಂತದಲ್ಲಿಯೇ ಅಧಿಕಾರಿಗಳ ಸಭೆ ನಡೆದಿದೆ. ಆ ಸಭೆಯಲ್ಲಿ ಅಧಿಕಾರಿಗಳಿಗೆ ಯಾವ ರೀತಿ ಪಾಠ ಮಾಡಿದ್ದಾರೆ ಇವರು ಎನ್ನುವ ಮಾಹಿತಿ ನನಗಿದೆ. ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಅವರು ಕೆಲವು ಸೂಚನೆಗಳನ್ನು ಕೊಟ್ಟಿದ್ದಾರೆ. ನಾವು ಹೇಳಿದಂತೆ ಮಾತ್ರ ಕೇಳಬೇಕು ಎಂದು ಫರ್ಮಾನು ಹೊರಡಿಸಿದ್ದಾರೆ. ಇದರ ಅರ್ಥ ಏನೆಂದರೆ, ನಮಗೆ ಬೇಕಾದ ಹಾಗೆ ಕೆಲಸ ಮಾಡಿ, ಇಲ್ಲವೇ ಹೊರಡಿ ಎನ್ನುವುದೇ ಈ ಫರ್ಮಾನಿನ ಒಳಾರ್ಥ ಎಂದು ಕುಮಾರಸ್ವಾಮಿ ದೂರಿದರು.



ಪ್ರಾರಂಭಿಕ ಹಂತದಲ್ಲಿ ಕಾಂಗ್ರೆಸ್ ಸರಕಾರ ಕೆಲವು ನಿರ್ಧಾರ ತೆಗೆದುಕೊಂಡಿದೆ. ಹಿಂದಿನ ಟೆಂಡರ್‌ಗಳು ಸೇರಿದಂತೆ ಅನೇಕ ಕಡೆ ಅನುದಾನ ತಡೆಹಿಡಿಯಲಾಗಿದೆ. ಬಿಜೆಪಿ ಸರಕಾರ 600 ಕೋಟಿ ರೂಪಾಯಿಗೂ ಹೆಚ್ಚು ಮೊತ್ತದ ಕಾಮಗಾರಿಗಳಿಗೆ ಕಾರ್ಯಾದೇಶ ನೀಡಿತ್ತು. ಕಳೆದ ಮೇ 6ರಂದು 675 ಕೋಟಿ ರೂಪಾಯಿ ಮೊತ್ತದ ಕಾಮಗಾರಿಗಳ ಗುತ್ತಿಗೆದಾರರಿಗೆ ಎಲ್ ಒಸಿ ರಿಲೀಸ್ ಆಯಿತು. ಆ ಸಂದರ್ಭದಲ್ಲಿ ಒಬ್ಬ ಕಾಂಗ್ರೆಸ್ ಎಂಪಿ ಹೇಳಿದ್ದರಂತೆ, ಯಾವುದೇ ಕಾರಣಕ್ಕೂ ಹಣ ಬಿಡುಗಡೆ ಮಾಡಬೇಡಿ, ನಮ್ಮ ಸರ್ಕಾರ ಬರುತ್ತದೆ ಅಂತ ಹೇಳಿದ್ದರಂತೆ ಅವರು. ಅವರು ಯಾಕೆ ಹೇಳಿದ್ದರು, ಆ ಎಂಪಿ ಯಾರು ಎಂದು ಮಾಜಿ ಮುಖ್ಯಮಂತ್ರಿ ಅವರು ಪ್ರಶ್ನಿಸಿದರು.

675 ಕೋಟಿ ಮೊತ್ತದ ಎಲ್‌ಒಸಿ ಹಣ ಯಾಕೆ ಬಿಡುಗಡೆ ಆಗಲಿಲ್ಲ ಎನ್ನುವುದು ಅನುಮಾನಕ್ಕೆ ಕಾರಣ. ಈಗ LOC ಬಿಡುಗಡೆ ಆಗಬೇಕು ಅಂದರೆ 5 ಪರ್ಸೆಂಟ್ ಕೊಡಲೇಬೇಕು ಎಂದು ಡಿಮ್ಯಾಂಡ್ ಇಟ್ಟಿದ್ದಾರೆ. 40 ಪರ್ಸೆಂಟ್ ಜತೆಗೆ ಹೆಚ್ಚುವರಿಯಾಗಿ 5 ಪರ್ಸೆಂಟ್ ಕೊಟ್ರೆ ಹಣ ಬಿಡುಗಡೆ ಮಾಡ್ತೀವಿ ಅಂತ ಹೇಳಿದ್ದಾರಂತೆ. ಅಲ್ಲಿಗೆ ಇದು 45 ಪರ್ಸೆಂಟ್ ಸರಕಾರ ಎಂದಾಯಿತಲ್ವೆ? ಆಗಿರುವ ಕಾಮಗಾರಿಗಳಿಗೆ ಪರ್ಸೆಂಟೇಜ್ ಕೇಳುತ್ತಿದ್ದಾರೆ, ಇವರು ಸತ್ಯ ಹರಿಶ್ಚಂದ್ರರು ಎಂದು ಕುಮಾರಸ್ವಾಮಿ ಕಿಡಿಕಾರಿದರು.

ಇದೇ ಸಂದರ್ಭದಲ್ಲಿ ಅಧಿಕಾರಿಗಳ ವರ್ಗಾವಣೆಗೂ ದರ ನಿಗದಿ ಮಾಡಿದೆ ಎಂದು ಆರೋಪಿಸಿದರು. ವಿದೇಶ ಪ್ರವಾಸದಲ್ಲಿರುವ ಸಚಿವರೊಬ್ಬರ ಇಲಾಖೆಗೆ ವರ್ಗ ಆಗಿರುವ ಹಿರಿಯ ಅಧಿಕಾರಿ ಒಬ್ಬರಿಗೆ ಅಧಿಕಾರ ವಹಿಸಿಕೊಳ್ಳಲು ಸ್ವತಃ ಸಚಿವರೇ ಅವಕಾಶ ನೀಡಿಲ್ಲ, ಯಾಕೆ ಎಂದು ನೇರವಾಗಿ ಪ್ರಶ್ನಿಸಿದರು. ವಿದೇಶಿ ಪ್ರವಾಸದಲ್ಲಿರುವ ಆ ಸಚಿವರು ಯಾರು ಆ ಸಚಿವರ ಗಮನಕ್ಕೆ ಬಾರದೆಯೇ ಅವರ ಇಲಾಖೆಗೆ ಪೋಸ್ಟಿಂಗ್ ಆದ ಆ ಅಧಿಕಾರಿ ಯಾರು ಎನ್ನುವುದನ್ನು ಬಹಿರಂಗ ಮಾಡಲಿ. ಮೊದಲು ಇವರು ನನ್ನ ಬಗ್ಗೆ ಲಘುವಾಗಿ ಮಾತನಾಡುವುದನ್ನು ನಿಲ್ಲಿಸಲಿ ಎಂದು ಕಿಡಿಕಾರಿದರು.

ಅದಕ್ಕೆ ಸಂಬಂಧಪಟ್ಟ ಮಂತ್ರಿ ವಿದೇಶದಲ್ಲಿ ಇದ್ದಾರೆ. ಸಿಎಂ ಆದೇಶ ಮಾಡಿದ್ದರೂ, ನಾನು ಬರುವವರೆಗೂ ಅಧಿಕಾರ ತೆಗೆದುಕೊಳ್ಳಬೇಡಿ ಅಂತ ತಾಕೀತು ಮಾಡಿದ್ದಾರಂತೆ. ಹಾಗಾದರೆ ಎಷ್ಟು ಹಣ ಕೊಟ್ಟು ಬಂದರು, ಈ ಅಧಿಕಾರಿ ಈಗ 'ವರ್ಗಾವಣೆ ಜ್ಯೋತಿ' ಕಾರ್ಯಕ್ರಮ ನಡೆಯುತ್ತಿದೆ. ಈ ದಂಧೆ ಬಗ್ಗೆ ಏನು ಹೇಳ್ತಾರೆ ಇವರು. ಎಸಿಬಿ ದಾಳಿಗೆ ಒಳಗಾಗಿದ್ದ ಇನ್ನೊಬ್ಬ ಅಧಿಕಾರಿಯನ್ನು ಮುಖ್ಯಮಂತ್ರಿ ಕಚೇರಿಯಲ್ಲಿಯೇ ಇಟ್ಟುಕೊಂಡಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ತೀವ್ರ ವಾಗ್ದಾಳಿ ನಡೆಸಿದರು.

ಬಿಜೆಪಿ ಸರಕಾರದ ಬಗ್ಗೆ 40 ಪರ್ಸೆಂಟ್ ಬಗ್ಗೆ ಮಾತಾಡಿದ್ದರು ಇವರು. ಹಾದಿಬೀದಿಯಲ್ಲಿ ಜಾಗಟೆ ಹೊಡೆದುಕೊಂಡು ಪ್ರಚಾರ ಮಾಡಿದರು. ಈಗ ನೋಡಿದರೆ ಅಧಿಕಾರಿಗಳ ವರ್ಗಾವಣೆಯಲ್ಲಿ ದಂಧೆ ಶುರು ಮಾಡಿಕೊಂಡಿದ್ದಾರೆ. 40 ಪರ್ಸೆಂಟ್ ಎಂದು ಪುಂಗಿ ಬಿಟ್ಟ ಇವರು ಆ ಆರೋಪವನ್ನು ಸಾಬೀತು ಮಾಡಿದ್ರಾ ಎಂದು ಅವರು ಪ್ರಶ್ನಿಸಿದರು.

ವಿದ್ಯುತ್ ದರ ಏರಿಕೆಯಾಗಿದ್ದು ಬಿಜೆಪಿ ಸರ್ಕಾರದ ಅವಧಿಯಲ್ಲಿ

ಮೈಸೂರು, ಜೂ.10(ಎಂಟಿವೈ)– ಬಿಜೆಪಿ ಸರ್ಕಾರದ ಅವಧಿಯಲ್ಲಿ ವಿದ್ಯುತ್ ದರ ಏರಿಕೆ ಮಾಡಲಾಗಿದ್ದು, ಇದೀಗ ಹೊಸ ದರ ಜಾರಿಗೊಳಿಸಲಾಗಿದೆ. ಆದರೆ, ಕೀಳುಮಟ್ಟದ ರಾಜಕೀಯಕ್ಕಾಗಿ ಕಾಂಗ್ರೆಸ್ ಸರ್ಕಾರದ ಮೇಲೆ ಬಿಜೆಪಿ ಗೂಬೆ ಕೂರಿಸುವ ಪ್ರಯತ್ನ ಮಾಡುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟನೆ ನೀಡಿದ್ದಾರೆ.



ಸುತ್ತೂರಿನ ಹೆಲಿಪ್ಯಾಡ್‌ನಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, 2023ರ ಮಾರ್ಚ್ ಅಥವಾ ಏಪ್ರಿಲ್‌ನಲ್ಲಿ ವಿದ್ಯುತ್ ದರ ಹೆಚ್ಚಳ ಮಾಡಲಾಗಿದೆ. ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿದ್ದ ಕಾರಣ ಹೊಸ ದರವನ್ನು ಪೆಂಡಿಂಗ್ ಇಡಲಾಗಿತ್ತು. ಮಾರ್ಚ್, ಏಪ್ರಿಲ್‌ನಲ್ಲಿ ರಾಜ್ಯದಲ್ಲಿ ಯಾವ ಸರ್ಕಾರವಿತ್ತು. ನಾವು ಅಧಿಕಾರಕ್ಕೆ ಬಂದು ಕೇವಲ 20 ದಿನ ಮಾತ್ರ ಆಗಿದೆ. ಹಾಗಿದ್ದರೆ ವಿದ್ಯುತ್ ದರ ಹೆಚ್ಚಳ ಮಾಡಿದವರು ಯಾರು ಎಂದು ಪ್ರಶ್ನಿಸಿದರು.

ಪ್ರತಿವರ್ಷ ವಿದ್ಯುತ್ ದರವನ್ನು ಕೆಇಆರ್‌ಸಿ ಪರಿಷ್ಕರಣೆ ಮಾಡುತ್ತದೆ. ನೂತನ ದರವನ್ನು ಜೂ.1ರಿಂದ ಜಾರಿಗೆ ತಂದಿದ್ದಾರೆ. ಮಾ.29ಕ್ಕೆ ಚುನಾವಣಾ ನೀತಿ ಸಂಹಿತೆ ಜಾರಿಯಾಗಿದ್ದರಿಂದ ಹೊಸ ದರ ಸಂಗ್ರಹ ತಡೆಹಿಡಿಯಲಾಗಿತ್ತು. ಆದರೆ, ಬಿಜೆಪಿಗರು ತಮ್ಮ ತಪ್ಪು ಮುಚ್ಚಿಕೊಳ್ಳಲು ಕಾಂಗ್ರೆಸ್ ವಿರುದ್ಧ ಆರೋಪ ಮಾಡುತ್ತಿದ್ದಾರೆ. ಬಿಜೆಪಿಗರ ಈ ಕಳ್ಳಾಟವನ್ನು ಜನ ನಂಬುವುದಿಲ್ಲ ಎಂದರು.

ತನಿಖೆ ನಡೆಯುತ್ತಿದೆ: ಪಿಎಸ್‌ಐ ಹಾಗೂ 40% ಕಮಿಷನ್ ಆರೋಪದ ಬಗ್ಗೆ ಸರ್ಕಾರ ತನಿಖೆ ಮಾಡಲಿ ಎಂದು ಮಾಜಿ ಸಚಿವ ಕೋಟಾ ಶ್ರೀನಿವಾಸ ಪೂಜಾರಿ ಹೇಳಿಕೆಗೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿಗಳು, ಬಿಜೆಪಿಗರನ್ನು ಕೇಳಿ ನಾವು ಕೆಲಸ ಮಾಡಬೇಕಾ? ಎಂದು ಪ್ರಶ್ನಿಸಿದರಲ್ಲದೆ, ಸಾಕ್ಷಿಗಳ ಆಧಾರದ ಮೇಲೆ ಖಂಡಿತವಾಗಿಯೂ ಮಾಡುತ್ತೇವೆ. ಪಿಎಸ್‌ಐ ಹಗರಣದ ತನಿಖೆ ಈಗಾಗಲೇ ನಡೆಯುತ್ತಿದ್ದು, ಎಡಿಜಿಪಿ ಪೌಲ್ ಈಗಾಗಲೇ ಜೈಲಿನಲ್ಲಿದ್ದಾರೆ. ಇನ್ನು ಹಲವರ ಮೇಲೆ ತನಿಖೆ ನಡೆಯುತ್ತಿದೆ ಎಂದರು.

ಮಾಹಿತಿ ಸಂಗ್ರಹ: ಬಿಜೆಪಿ ಅಧಿಕಾರದಲ್ಲಿದ್ದಾಗ ತಮಗೆ ಬೇಕಾದವರಿಗೆ ಭೂಮಿ ನೀಡಿರುವ ಬಗ್ಗೆ ಕಂದಾಯ ಸಚಿವ ಕೃಷ್ಣ ಬೈರೇಗೌಡರಿಗೆ ಮಾಹಿತಿ ಸಂಗ್ರಹಿಸಲು ತಿಳಿಸಲಾಗಿದೆ ಎಂದರು. ಕೇಂದ್ರದಿಂದ ರಾಜ್ಯಕ್ಕೆ ಬರಬೇಕಿರುವ ಅನುದಾನವನ್ನು ಪಡೆಯಲು ಒತ್ತಾಯಿಸುತ್ತೇವೆ. ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ನ್ಯಾಯಯುತವಾಗಿ ಬರಬೇಕಿರುವ ಎಲ್ಲವನ್ನೂ ಪಡೆದುಕೊಳ್ಳಲು ಪ್ರಯತ್ನಿಸಲಾಗುವುದು ಎಂದರು.

ದೇವರಾಜ ಅರಸ್ ಬಿಟ್ಟರೆ ನಿಮ್ಮ ಸಿದ್ದರಾಮಯ್ಯ ಮಾತ್ರ 5 ವರ್ಷ, 2 ಬಾರಿ ಸಿಎಂ ಆಗಿದ್ದು

ರಾಜ್ಯದ ಮುಖ್ಯಮಂತ್ರಿಯಾಗಿ 5 ವರ್ಷ ಪೂರ್ಣಾವಧಿ ಮುಖ್ಯಮಂತ್ರಿಯಾಗಿ ದೇವರಾಜ ಅರಸ್ ಅವರು ಅಧಿಕಾರ ನಡೆಸಿದ್ದರು. ಅವರನ್ನು ಹೊರತುಪಡಿಸಿದರೆ, 5 ವರ್ಷ ಮುಖ್ಯಮಂತ್ರಿಯಾಗಿ ಅಧಿಕಾರ ನಡೆಸಿದ್ದು ನಿಮ್ಮ ಸಿದ್ದರಾಮಯ್ಯ ಅಲ್ಲದೆ, ಮೈಸೂರು ಜಿಲ್ಲೆಯಿಂದ ದೇವರಾಜ ಅರಸ್ ಅವರು ಎರಡು ಬಾರಿ ಮುಖ್ಯಮಂತ್ರಿಯಾಗಿ ಆಡಳಿತ ನಡೆಸಿದ್ದರು. ನಿಮ್ಮ ಸಿದ್ದರಾಮಯ್ಯ ಕೂಡ ಈಗ 2ನೇ ಬಾರಿ ಮುಖ್ಯಮಂತ್ರಿಯಾಗಿದ್ದಾರೆ.
–ಸಿದ್ದರಾಮಯ್ಯ, ಮುಖ್ಯಮಂತ್ರಿ

ವಿದ್ಯುತ್ ದರ ಏರಿಕೆ ಹಿಂಪಡೆಯಲು ಒತ್ತಾಯ

ಬೆಂಗಳೂರು, ಜೂ.10– ವಿದ್ಯುತ್ ದರ ಏರಿಕೆಯನ್ನು ಹಿಂಪಡೆಯುವಂತೆ ಕರ್ನಾಟಕ ಚೇಂಬರ್ ಆಫ್ ಕಾಮರ್ಸ್ ಹಾಗೂ ಇಂಡಸ್ಟ್ರಿ ಕಾಂಗ್ರೆಸ್ ಸರ್ಕಾರಕ್ಕೆ ಒಂದು ವಾರ ಗಳ ಗಡುವು ವಿಧಿಸಿದೆ. ಒಂದು ವೇಳೆ ದರ ಏರಿಕೆಯನ್ನು ಹಿಂಪಡೆಯದೇ ಇದ್ದಲ್ಲಿ ಎಲ್ಲಾ ಕೈಗಾರಿಕೆಗಳನ್ನೂ ಬಂದ್ ಮಾಡಿ ಪ್ರತಿಭಟನೆಯ ಎಚ್ಚರಿಕೆಯನ್ನು ಕೆಸಿಸಿಐ ನೀಡಿದೆ.

ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕಳೆದ ಬಜೆಟ್‌ನಲ್ಲಿ ರೈತರಿಗೆ ಬೆಂಬಲ ಬೆಲೆ ನೀಡಲು ಘೋಷಿಸಿದ್ದ 1,500 ಕೋಟಿ ರೂ. ಅನುದಾನವನ್ನು ಈ ಕಾಂಗ್ರೆಸ್ ಸರ್ಕಾರ ವಾಪಸ್ ಪಡೆಯುತ್ತದೆ ಎಂಬ ಆತಂಕ ವ್ಯಕ್ತಪಡಿಸಿದ್ದಾರೆ. ಇದಷ್ಟೇ ಅಲ್ಲದೇ ರಾಜ್ಯಾದ್ಯಂತ 9,556 ಶಾಲಾ ಕಟ್ಟಡಗಳನ್ನು ನಿರ್ಮಿಸುವುದಕ್ಕಾಗಿ ನೀಡಲಾಗಿದ್ದ ಅನುದಾನವನ್ನು ಬೇರೆ ಉದ್ದೇಶಗಳಿಗೆ ಬಳಕೆ ಮಾಡಲಾಗುತ್ತದೆ ಎಂಬ ಅನುಮಾನವನ್ನೂ ಬಸವರಾಜ ಬೊಮ್ಮಾಯಿ ಹೊರಹಾಕಿದ್ದಾರೆ.



ಮೈಸೂರು ಜಿಲ್ಲಾ ಪಂಚಾಯಿತಿ ಆವರಣದಲ್ಲಿ ವರುಣ ವಿಧಾನಸಭಾ ಕ್ಷೇತ್ರದ ಶಾಸಕರ ಕಚೇರಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಶನಿವಾರ ಉದ್ಘಾಟಿಸಿದರು. ಈ ವೇಳೆ ಸಚಿವರಾದ ಡಾ.ಹೆಚ್.ಸಿ.ಮಹದೇವಪ್ಪ, ಕೆ.ವೆಂಕಟೇಶ್, ವಿಧಾನಪರಿಷತ್ ಸದಸ್ಯ ಡಾ.ತಿಮ್ಮಯ್ಯ, ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಮತ್ತಿತರರು ಉಪಸ್ಥಿತರಿದ್ದಾರೆ.

ಸಂಸ್ಕೃತ ಪಾಠಶಾಲೆ ವೃತ್ತದಿಂದ ವಿದ್ಯುತ್ ಕಂಬ, ದೀಪ ಅಳವಡಿಕೆ ಕಾಮಗಾರಿ ಆರಂಭ

ಮೈಸೂರು, ಜೂ.10(ಎಸ್‌ಪಿಎನ್)– ಮೈಸೂರು ನಗರಪಾಲಿಕೆ ವ್ಯಾಪ್ತಿಯ ಅಗ್ರಹಾರದ (ವಾರ್ಡ್ ನಂ.51) ಬಸವೇಶ್ವರ ವೃತ್ತ (ಸಂಸ್ಕೃತ ಪಾಠಶಾಲೆ ವೃತ್ತ)ದಿಂದ ಜಯಚಾಮರಾಜೇಂದ್ರ ಒಡೆಯರ್ ವೃತ್ತ (ಹಾರ್ಡಿಂಜ್ ಸರ್ಕಲ್)ವರೆಗೆ ಹೊಸದಾಗಿ ವಿದ್ಯುತ್ ಕಂಬ ಮತ್ತು ವಿದ್ಯುತ್ ದೀಪಗಳನ್ನು ಅಳವಡಿಸುವ ಕಾಮಗಾರಿಗೆ ಶಾಸಕ ಟಿ.ಎಸ್.ಶ್ರೀವತ್ಸ ಗುದ್ದಲಿಪೂಜೆ ನೆರವೇರಿಸಿದರು.



ಈ ಕಾಮಗಾರಿಯ ಅಂದಾಜು ವೆಚ್ಚ 20 ಲಕ್ಷ ರೂಪಾಯಿಗಳಾಗಿದ್ದು, ಹೊಸದಾಗಿ ಕಾಂಕ್ರೀಟ್ ರಸ್ತೆ ಮಾಡಿದ ಸಂದರ್ಭದಲ್ಲಿ ಮಧ್ಯದಲ್ಲಿ ರಸ್ತೆ ವಿಭಜಕವನ್ನು ಸಹ ಮಾಡಲಾಗಿತ್ತು. ಆದರೆ ಬಹಳ ವರ್ಷಗಳಿಂದ ವಿದ್ಯುತ್ ದೀಪಗಳಿಲ್ಲದೆ ರಾತ್ರಿ ವೇಳೆ ವಾಹನ ಸಂಚಾರಕ್ಕೆ ಹಾಗೂ ಪಾದಚಾರಿಗಳ ಓಡಾಟಕ್ಕೆ ತೀವ್ರ ಸಮಸ್ಯೆಯಾಗಿತ್ತು. ಹಾಗಾಗಿ ನಗರ ಪಾಲಿಕೆಯ 14 ನೇ ಹಣಕಾಸಿನ ಉಳಿಕೆ ಹಣದಲ್ಲಿ ಈ ಕಾಮಗಾರಿ ಮಾಡಲಾಗುತ್ತಿದೆ. ಈ ಕಾಮಗಾರಿಯನ್ನು ಒಂದು ತಿಂಗಳ ಒಳಗೆ ಮುಗಿಸುವಂತೆ ಗುತ್ತಿಗೆದಾರರಿಗೆ ಶಾಸಕರು ಸೂಚನೆ ನೀಡಿದರು. ಈ ಸಂದರ್ಭದಲ್ಲಿ ಮೇಯರ್ ಶಿವಕುಮಾರ್, ಪಾಲಿಕೆ ಸದಸ್ಯ ಬಿ.ವಿ.ಮಂಜುನಾಥ್, ವಾರ್ಡ್ ಅಧ್ಯಕ್ಷ ಆಟೋ ಮಂಜು, ಬಾಲಕೃಷ್ಣ, ಕಾವೇರಿ, ರಾಜ್ ಕುಮಾರ್, ಶಾಂತ, ನಿಶಾಂತ್, ಶಿವಪ್ರೇರಣ, ಲಕ್ಷ್ಮೀ ನಾರಾಯಣ, ವಸಂತಕುಮಾರಯ್ಯ, ವಾಟರ್ ಚಂದ್ರು, ನಗರಪಾಲಿಕೆ ಎಲೆಕ್ಟ್ರಿಕಲ್ ಇಂಜಿನಿಯರ್ ವಿನಯ್, ಗುತ್ತಿಗೆದಾರರು ಮುಂತಾದವರು ಉಪಸ್ಥಿತರಿದ್ದರು.

ಜೂ.17ರಂದು ಬೃಹತ್ ಉದ್ಯೋಗ ಮೇಳ



ಮೈಸೂರು, ಜೂ.10 (ಪಿಎಂ)– ಮೈಸೂರ್ ಕಾಲೇಜ್ ಆಫ್ ಇಂಜಿನಿಯರಿಂಗ್ ಅಂಡ್ ಮ್ಯಾನೇಜ್‌ಮೆಂಟ್ ಹಾಗೂ ಲೀಡ್ ಟ್ರೇನಿಂಗ್ ಅಂಡ್ ಕಾರ್ಪೋರೇಟ್ ಸಲ್ಯೂಷನ್ ಜಂಟಿ ಆಶ್ರಯದಲ್ಲಿ ಜೂ.17ರಂದು ಬೃಹತ್ ಉದ್ಯೋಗ ಮೇಳ ಆಯೋಜಿಸಲಾಗಿದೆ ಎಂದು ಕಾಲೇಜಿನ ಪ್ರಾಂಶುಪಾಲ ಡಾ. ಎಂ.ಎಸ್.ಪ್ರಭುಸ್ವಾಮಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ತಿ.ನರಸೀಪುರ ರಸ್ತೆಯ ದೊಡ್ಡ ಆಲದಮರದ ಸಮೀಪ ಇರುವ ಕಾಲೇಜಿನ ಆವರಣದಲ್ಲಿ ಅಂದು ಬೆಳಗ್ಗೆ 9.30ರಿಂದ ಸಂಜೆ 5.30ರವರೆಗೆ ಉದ್ಯೋಗ ಮೇಳ ನಡೆಯಲಿದೆ. ಅಭ್ಯರ್ಥಿಗಳಿಗೆ ಪ್ರವೇಶ ಉಚಿತವಿದೆ ಎಂದರು.

ಎಸ್‌ಎಸ್‌ಎಲ್‌ಸಿ, ಪಿಯುಸಿ, ಬಿ.ಕಾಂ, ಬಿಬಿಎಂ, ಬಿಎ, ಐಟಿಐ, ಡಿಪ್ಲೊಮಾ ಸೇರಿದಂತೆ ಇನ್ನಿತರ ಯಾವುದೇ ಪದವಿ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳು ಇದರಲ್ಲಿ ಪಾಲ್ಗೊಳ್ಳಲು ಅವಕಾಶವಿದೆ. 35ಕ್ಕೂ ಹೆಚ್ಚು ಕಂಪನಿಗಳು ಭಾಗವಹಿಸುತ್ತಿದ್ದು, 600ಕ್ಕೂ ಹೆಚ್ಚು ಉದ್ಯೋಗಾವಕಾಶಗಳಿವೆ ಎಂದು ತಿಳಿಸಿದರು.

ಲೀಡ್ ಟ್ರೇನಿಂಗ್ ಅಂಡ್ ಕಾರ್ಪೋರೇಟ್ ಸಲ್ಯೂಷನ್‌ನ ಸಿಇಓ ಎಂ.ಆರ್. ಶ್ರೀವಿದ್ಯಾ ಮಾತನಾಡಿ, ಉದ್ಯೋಗ ಮೇಳದಲ್ಲಿ ಭಾಗವಹಿಸಲು ಅಭ್ಯರ್ಥಿಗಳು 18 ವರ್ಷ ಪೂರೈಸಿರಬೇಕು. ಮಾಹಿತಿಗೆ ಮೊ. 9731434074, 9742472777 ಸಂಪರ್ಕಿಸಬಹುದು ಎಂದರು. ಕಾಲೇಜಿನ ಪ್ಲೇಸ್‌ಮೆಂಟ್ ಅಧಿಕಾರಿ ಪ್ರಭು, ಪ್ರಾಧ್ಯಾಪಕರಾದ ಡಾ.ರವಿ, ಶಾಲಿನಿ ಗೋಷ್ಠಿಯಲ್ಲಿದ್ದರು.



ಚಾಮರಾಜ ವಿಧಾನಸಭಾ ಕ್ಷೇತ್ರದ ನೂತನ ಶಾಸಕ ಕೆ.ಹರೀಶ್‌ಗೌಡ ಅವರನ್ನು ಕೆ.ಜಿ.ಕೊಪ್ಪಲಿನ ಮಾರಮ್ಮ ದೇವಸ್ಥಾನ ಟ್ರಸ್ಟ್ ವತಿಯಿಂದ ಆತ್ಮೀಯವಾಗಿ ಅಭಿನಂದಿಸಲಾಯಿತು. ಈ ವೇಳೆ ಟ್ರಸ್ಟ್‌ನ ಗೌರವಾಧ್ಯಕ್ಷರಾದ ಬಸಪ್ಪ, ಚಿಕ್ಕಣ್ಣ, ಸೋಮಣ್ಣ, ಅಧ್ಯಕ್ಷ ರಾಮೇಗೌಡ, ಕಾರ್ಯದರ್ಶಿ ಬಸವರಾಜು, ಸಹ ಕಾರ್ಯದರ್ಶಿಗಳಾದ ಗಣೇಶ್, ಶಿವಣ್ಣ, ಖಜಾಂಚಿ ಶಿವಕುಮಾರ್ (ಫಾಲ್ಕನ್), ಪದಾಧಿಕಾರಿಗಳಾದ ಈಶ್ವರ, ಗೋಪಿ, ಕುಮಾರ್, ರಾಮಯ್ಯ, ದತ್ತುಕುಮಾರ್, ರಂಗಸ್ವಾಮಿ, ಇಂಡಿಯನ್ ಟಿವಿ ಮಾಲೀಕರಾದ ವೆಂಕಟೇಶ್, ಬಸವಣ್ಣ ಹಾಗೂ ಕೆ.ಜಿ.ಕೊಪ್ಪಲು ಗ್ರಾಮಸ್ಥರು, ಯಜಮಾನರು ಉಪಸ್ಥಿತರಿದ್ದರು.

ಲಕ್ಷ್ಮಣ್ ಸವದಿಗೆ ಸಚಿವ ಸ್ಥಾನ ನೀಡಲು ಒತ್ತಾಯ



ಮೈಸೂರು, ಜೂ. 10(ಸಿಎನ್)– ಅತಿ ಹಿಂದುಳಿದ ಗಾಣಿಗ ಸಮುದಾಯದ ವಿದ್ಯಾರ್ಥಿಗಳಿಗೆ, ಜಿಲ್ಲಾ ಗಾಣಿಗರ ಸಂಘದ ವತಿಯಿಂದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲಾಗುವುದು ಎಂದು ಜಿಲ್ಲಾ ಗಾಣಿಗರ ಸಂಘದ ಅಧ್ಯಕ್ಷ ಉಮೇಶ್ ಎನ್.ಸಿ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಮಾತನಾಡಿದ ಅವರು, ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಶೇ.85ಕ್ಕಿಂತ ಹೆಚ್ಚು ಅಂಕ ಪಡೆದವರಿಗೆ, ಪುರಸ್ಕರಿಸಲಿದ್ದೇವೆ. ನಮ್ಮ ಸಮುದಾಯದ ವಿದ್ಯಾರ್ಥಿಗಳು ಅರ್ಜಿಯ ಜೊತೆಗೆ ಅಂಕಪಟ್ಟಿ, ಜಾತಿ ದೃಢೀಕರಣವನ್ನು ಲಗತ್ತಿಸಬೇಕು. ಹೆಚ್ಚಿನ ಮಾಹಿತಿಗೆ ಸರಸ್ವತಿಪುರಂನಲ್ಲಿರುವ ಗಾಣಿಗರ ಸಂಘ ಅಥವಾ ದೂ. 9886028262 ಅನ್ನು ಸಂಪರ್ಕಿಸಬಹುದಾಗಿದೆ ಎಂದರು.

ನೂತನ ಶಾಸಕರಾದ ಲಕ್ಷ್ಮಣ್ ಸವದಿಗೆ ಸಚಿವ ಸ್ಥಾನ ನೀಡಬೇಕು ಅಲ್ಲದೇ ನಮ್ಮ ಸಮಾಜದ ಮಾಜಿ ಸಭಾಪತಿ ವಿ.ಆರ್. ಸುದರ್ಶನ್, ಮಾಜಿ ಮೇಯರ್ ಅನಂತು ಅವರಿಗೆ ಉನ್ನತ ಸ್ಥಾನಮಾನ ನೀಡಬೇಕು. ನಮ್ಮ ಸಮುದಾಯಕ್ಕೆ 100 ಕೋಟಿ ರೂ. ಬಿಡುಗಡೆ ಮಾಡಿ ಸಮಾಜದ ಏಳಿಗೆಗೆ ಸಹಾಯ ಮಾಡಬೇಕು ಎಂದು ಸರ್ಕಾರಕ್ಕೆ ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಉಪಾಧ್ಯಕ್ಷ ಕೃಷ್ಣಶೆಟ್ಟಿ, ನಿರ್ದೇಶಕರಾದ, ಶೈಲೇಶ್, ಪೈಲ್ವಾನ್ ರಾಮದಾಸ್, ವಿಜಯ್ ಕುಮಾರ್, ರವಿಕುಮಾರ್ ಇದ್ದರು.

ಮೈಸೂರಿನ ದಕ್ಷ ಕಾಲೇಜಿನಲ್ಲಿ ಪರಿಸರ ದಿನಾಚರಣೆ; ಚಿಟ್ಟೆ ಉದ್ಯಾನ ಉದ್ಘಾಟನೆ



ಮೈಸೂರು, ಜೂ. 10–ಮೈಸೂರಿನ ದಕ್ಷ ಕಾಲೇಜಿನಲ್ಲಿ ನಿರಂತರ ಪರಿಸರ ಮತ್ತು ಸುಸ್ಥಿರ ಅಭಿವೃದ್ಧಿ ಉಪಕ್ರಮಗಳ ಭಾಗವಾಗಿ ಚಿಟ್ಟೆ ಉದ್ಯಾನವನ್ನು ದಾವಣಗೆರೆಯ ಆಧುನಿಕ ಕೃಷಿಕ ಡಾ.ವೆಂಕಟರಾಮಾಂಜನೇಸ್ವಾಮಿ ಅವರು ಉದ್ಘಾಟಿಸಿದರು.

ನಿವೃತ್ತ ಪೊಲೀಸ್ ಮಹಾಧಿಕಾರಿ ಹಾಗೂ ಸಕ್ರಿಯ ಕೃಷಿಕರೂ ಆದ ಬಿ.ಪಿ.ಸುರೇಶ್, ಟಾಟಾ ಗ್ರೂಪ್‌ನ ಮಾರಾಟ ವಿಭಾಗದ ನಿವೃತ್ತ ಮುಖ್ಯಸ್ಥ ಮತ್ತು ಸಕ್ರಿಯ ಪರಿಸರವಾದಿ ಜಿ.ಎಸ್.ಆರ್.ಕೃಷ್ಣನ್ ಮತ್ತು ದಕ್ಷ ಕಾಲೇಜು ಅಧ್ಯಕ್ಷರಾದ ಜಯಚಂದ್ರ ರಾಜು ಈ ವೇಳೆ ಉಪಸ್ಥಿತರಿದ್ದರು.

ಡಾ. ಎನ್.ಎಸ್. ವೆಂಕಟರಾಮಾಂಜನೇಸ್ವಾಮಿಯವರು, ವಿದ್ಯಾರ್ಥಿಗಳು ನೈಸರ್ಗಿಕ ಪರಿಸರದೊಂದಿಗೆ ನಿಕಟ ಬಾಂಧವ್ಯವನ್ನು ಬೆಳೆಸಿಕೊಳ್ಳುವ ಅಗತ್ಯವನ್ನು ಒತ್ತಿ ಹೇಳಿದರು. ಆಹಾರ ಭದ್ರತೆಯು ಕೃಷಿಯ ಮೇಲೆ ಅವಲಂಬಿತವಾಗಿದೆ ಎಂಬುದನ್ನು ಗುರುತಿಸಲು ಮತ್ತು ಭವಿಷ್ಯದ ಪೀಳಿಗೆಗೆ ಆಹಾರದ ಸುರಕ್ಷತೆಯನ್ನು ಸಂರಕ್ಷಿಸಲು ಆದ್ಯತೆ ನೀಡಬೇಕು ಎಂದು ಅವರು ಒತ್ತಾಯಿಸಿದರು.

ನಿವೃತ್ತ ಪೊಲೀಸ್ ಅಧಿಕಾರಿ ಬಿ.ಪಿ. ಸುರೇಶ್ ತಮ್ಮ ಭಾಷಣದಲ್ಲಿ, ವಿದ್ಯಾರ್ಥಿ ಜೀವನದಲ್ಲಿ ಪರೀಕ್ಷೆಗಳು ಸಾಂಕೇತಿಕ ಮೈಲಿಗಲ್ಲುಗಳು. ಪಾಸ್ ಅಥವಾ ವಿಫಲವಾದರೆ, ಇವು ನೈಸರ್ಗಿಕ ಪ್ರಕ್ರಿಯೆಗಳು. ಎಡವಿ ಬಿದ್ದವರನ್ನು ಮೇಲಕ್ಕೆತ್ತುವ ಜವಾಬ್ದಾರಿಯನ್ನು ಸಮಾಜ ಮೈಗೂಡಿಸಿಕೊಳ್ಳಬೇಕು. ಯುವಕರು ಕಾನೂನು ಉಲ್ಲಂಘಿಸದಂತೆ ಸಲಹೆ ನೀಡಬೇಕು. ಸಮಾಜದ ಒಳಿತಿಗಾಗಿ ಜವಾಬ್ದಾರಿಯುತ ನಾಗರಿಕರಾಗಬೇಕು ಎಂದು ಆಶಿಸಿದರು.

ಪರಿಸರವಾದಿ ಜಿ.ಎಸ್.ಆರ್. ಕೃಷ್ಣನ್ ಮಾತನಾಡಿ, ಪರಿಸರ, ಆಹಾರ, ಮೌಲ್ಯಗಳು ಮತ್ತು ಪೋಷಕರು ಮತ್ತು ಹಿರಿಯರ ಬಗ್ಗೆ ಕಾಳಜಿಯ ಕರ್ತವ್ಯಕ್ಕೆ ಸಂಬಂಧಿಸಿದ ಪ್ರಶ್ನೆಗಳ ಮೂಲಕ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು.

ದಕ್ಷ ಕಾಲೇಜಿನ ಛೇರ್ಮನ್ ಪಿ.ಜಯಚಂದ್ರ ರಾಜು ಸಭೆಯನ್ನುದ್ದೇಶಿಸಿ ಮಾತನಾಡಿ, ಉತ್ತಮ ಸಾಧನೆಗೈದು, ಹೊಸ ಸಮಾಜಕ್ಕೆ ಕಾಲಿಡುತ್ತಿರುವ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು. ಅವರು ಇಷ್ಟಪಡುವ ವೃತ್ತಿಯನ್ನು ಆಯ್ಕೆ ಮಾಡಿಕೊಳ್ಳಬೇಕು ಮತ್ತು ಸಾಮರ್ಥ್ಯಕ್ಕೆ ತಕ್ಕಂತೆ ಉತ್ಕೃಷ್ಟರಾಗಬೇಕು ಎಂದು ಶುಭ ಕೋರಿದರು.

ಇದೇ ಸಂದರ್ಭದಲ್ಲಿ ಪಿಯು ಪರೀಕ್ಷೆಯಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಕಾಲೇಜಿನ ಕಾರ್ಯದರ್ಶಿ ಸೋನಿಯಾ ರಾಜು, ವ್ಯವಸ್ಥಾಪಕ ನಿರ್ದೇಶಕರಾದ ಗೌತಮ್ ರಾಜು, ದಕ್ಷ ಪದವಿ ಕಾಲೇಜಿನ ಪ್ರಾಂಶುಪಾಲರಾದ ಡಾ.ರಮ್ಯಾ ಆರ್., ಅಭಿವೃದ್ಧಿ ನಿರ್ದೇಶಕರಾದ ರತ್ನಾಕರ ಶಾನಭಾಗ್ ಇತರರು ಉಪಸ್ಥಿತರಿದ್ದರು.

ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್

ಭಾರತಕ್ಕೆ 444 ರನ್ ಬೃಹತ್ ಗೆಲುವಿನ ಗುರಿ

ಅಂತಿಮ ದಿನ ಟೀಂ ಇಂಡಿಯಾ 280 ರನ್ ಸವಾಲು

ಲಂಡನ್: ಇಲ್ಲಿನ ಕೆನ್ನಿಂಗ್‌ಟನ್ ಓವಲ್ ಮೈದಾನದಲ್ಲಿ ನಡೆಯುತ್ತಿರುವ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್ ಪಂದ್ಯದಲ್ಲಿ ಆಸ್ಟ್ರೇಲಿಯಾ, ಭಾರತಕ್ಕೆ 444 ರನ್‌ಗಳ ಬೃಹತ್ ಗೆಲುವಿನ ಗುರಿ ನೀಡಿದೆ.

4ನೇ ದಿನದಂತ್ಯಕ್ಕೆ ದ್ವಿತೀಯ ಇನ್ನಿಂಗ್ಸ್‌ನಲ್ಲಿ 3 ವಿಕೆಟ್ ನಷ್ಟಕ್ಕೆ 164 ರನ್ ಗಳಿಸಿರುವ ಟೀಂ ಇಂಡಿಯಾ ಅಂತಿಮ ದಿನದಾಟದಲ್ಲಿ 7 ವಿಕೆಟ್ ನಷ್ಟಕ್ಕೆ ಇನ್ನೂ 280 ರನ್ ಗಳಿಸಲು ಯಶಸ್ವಿಯಾದಲ್ಲಿ ತನ್ನ ಈವರೆಗಿನ ಸ್ಮರಣೀಯ ಟೆಸ್ಟ್ ಗೆಲುವು ದಾಖಲಿಸುವುದು ಮಾತ್ರವಲ್ಲದೇ, ವಿಶ್ವ ಟೆಸ್ಟ್ ಚಾಂಪಿಯನ್ ಷಿಪ್ ಕಿರೀಟ ಮುಡಿಗೇರಿಸಿಕೊಳ್ಳಲಿದೆ.

3ನೇ ದಿನದಂತ್ಯಕ್ಕೆ ದ್ವಿತೀಯ ಇನ್ನಿಂಗ್ಸ್‌ನಲ್ಲಿ 4 ವಿಕೆಟ್ ನಷ್ಟಕ್ಕೆ 123 ರನ್ ಗಳಿಸಿದ್ದ ಆಸ್ಟ್ರೇಲಿಯಾ ಶನಿವಾರ ಅಲೆಕ್ಸ್ ಕ್ಯಾರಿ ಅವರ ಅರ್ಧಶತಕದ ನೆರವಿನಿಂದ 8 ವಿಕೆಟ್‌ಗೆ 270ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತು. ಆ ಮೂಲಕ 444 ರನ್‌ಗಳ ಕಠಿಣ ಗೆಲುವಿನ ಗುರಿ ನೀಡಿತ್ತು. ತಂಡದ ಪರ ಸ್ಟೀವ್ ಸ್ಮಿತ್ 34, ಮಾರ್ನಸ್ ಲ್ಯಾಬುಶೇನ್ 41, ಅಲೆಕ್ಸ್ ಕ್ಯಾರಿ 66, ಗ್ರೀನ್ 25, ಮಿಚೆಲ್ ಸ್ಟಾರ್ಕ್ 41 ರನ್ ಗಳಿಸಿದರು. ಭಾರತದ ಪರ ರವೀಂದ್ರ ಜಡೇಜಾ 3, ಶಮಿ, ಉಮೇಶ್ ಯಾದವ್ ತಲಾ 2, ಸಿರಾಜ್ ಒಂದು ವಿಕೆಟ್ ಪಡೆದರು.



ಬೃಹತ್ ಗೆಲುವಿನ ಗುರಿ ಬೆನ್ನತ್ತಿದ ಭಾರತಕ್ಕೆ ರೋಹಿತ್ ಶರ್ಮಾ ಹಾಗೂ ಶುಭ್‌ಮನ್ ಗಿಲ್ ಮೊದಲ ವಿಕೆಟ್‌ಗೆ 41 ರನ್‌ಗಳ ಕಾಣಿಕೆ ನೀಡಿದರು. ಆದರೆ 18 ರನ್ ಗಳಿಸಿದ್ದ ವೇಳೆ ಗಿಲ್ ಸ್ಲಿಪ್‌ನಲ್ಲಿ ಕ್ಯಾಮರೂನ್ ಗ್ರೀನ್ ಹಿಡಿದ ಅನುಮಾನಾಸ್ಪದ ಕ್ಯಾಚ್‌ಗೆ ಬಲಿಯಾದರು.

ನಂತರ ಬಂದ ಚೇತೇಶ್ವರ ಪೂಜಾರ 27 ರನ್ ಗಳಿಸಿದರೇ ಇವರ ಹಿಂದೆಯೇ ನಾಯಕ ರೋಹಿತ್ ಶರ್ಮಾ 7 ಬೌಂಡರಿ, 1 ಸಿಕ್ಸರ್ ಒಳಗೊಂಡ 43 ರನ್ ಬಾರಿಸಿ ನಿರ್ಗಮಿಸಿದರು. ಬಳಿಕ ಜೊತೆಯಾದ ವಿರಾಟ್ ಕೊಹ್ಲಿ ಹಾಗೂ ಅಜಿಂಕ್ಯ ರಹಾನೆ 71 ರನ್ ಜೊತೆಯಾಟವಾಡುವ ತಂಡಕ್ಕೆ ಚೇತರಿಕೆ ನೀಡಿದರು. ಒಟ್ಟಾರೆ ವಿರಾಟ್ ಕೊಹ್ಲಿ 44, ಅಜಿಂಕ್ಯಾ ರಹಾನೆ 20 ರನ್ ಗಳಿಸಿ ಅಂತಿಮ ದಿನಕ್ಕೆ ಬ್ಯಾಟಿಂಗ್ ಕಾಯ್ದು ಕೊಂಡಿದ್ದು, ಭಾರತ ಗೆಲುವಿಗಾಗಿ 280 ರನ್‌ಗಳನ್ನು ಗಳಿಸಬೇಕಿದೆ.

ಕೀಳನಪುರ ಶಾಲೆಯಲ್ಲಿ ಕಲಿಸು ಪ್ಲೇಗೆ ನಾಳೆ ಚಾಲನೆ

ಮೈಸೂರು, ಜೂ.10(ಎಸ್‌ಪಿಎನ್)– 90ನೇ 'ಜ್ಞಾನಾಲಯ' ಹಾಗೂ ಶಾಲಾ ಮಕ್ಕಳಿಗಾಗಿ ಹೊರಾಂಗಣ ಆಟದ ಮೈದಾನ 'ಕಲಿಸು ಪ್ಲೇ' ಅನ್ನು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಕೀಳನಪುರ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಜೂ.12ರಂದು ಬೆಳಗ್ಗೆ 10.30ಕ್ಕೆ ಉದ್ಘಾಟಿಸಲಿದ್ದಾರೆ. ಗುಂಡ್ಲುಪೇಟೆ ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್, ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಡಿಡಿಪಿಐ ರಾಮಚಂದ್ರ ರಾಜೇಅರಸ್, ಮೈಸೂರು ಪ್ರಾದೇಶಿಕ ಕಚೇರಿಯ ಹೆಚ್ಚುವರಿ ಆಯುಕ್ತ ಶಿವರಾಜ್, ವಿಟೆಸ್ಕೋ ಟೆಕ್ನಾಲಜೀಸ್ ಇಂಡಿಯಾ ಪ್ರೈ. ಲಿಮಿಟೆಡ್‌ನ ಇಂಜಿನಿಯರಿಂಗ್ ಮುಖ್ಯಸ್ಥ ಗಿರೀಶ್ ರಾಮಸ್ವಾಮಿ ಇರಲಿದ್ದಾರೆ.

ಮೂಗೂರು ಕರ್ನಾಟಕ ಬ್ರಾಹ್ಮಣ ಸಂಘದಿಂದ ಶಾಸಕ ಶ್ರೀವತ್ಸರಿಗೆ ಅಭಿನಂದನೆ

ನನ್ನಿಂದ ಕೆಲಸ ಮಾಡಿಸಿಕೊಳ್ಳುವ ಮೂಲಕ ನಾನು ಆಕ್ಟೀವ್ ಆಗಿರುವಂತೆ ನೋಡಿಕೊಳ್ಳಿ: ಶಾಸಕರ ಸಲಹೆ

ಮೈಸೂರು, ಜೂ.10(ಎಂಕೆ)– ಮೂಗೂರು ಕರ್ನಾಟಕ ಬ್ರಾಹ್ಮಣ ಸಂಘದ ವತಿಯಿಂದ ಕೆ.ಆರ್.ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಅವರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು.

ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ಶ್ರೀ ಶಾರದಾನಿಕೇತನ ಭವನದಲ್ಲಿ ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ನೂತನ ಶಾಸಕರ ಜೊತೆಗೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಉಪಾಧ್ಯಕ್ಷರಾಗಿ ಆಯ್ಕೆಯಾದ ನಂ.ಶ್ರೀಕಂಠಕುಮಾರ್, ನಿರ್ದೇಶಕರಾಗಿ ಆಯ್ಕೆಯಾದ ಶಂಕರನಾರಾಯಣ, ಪಾಲಿಕೆ ಸದಸ್ಯ ಮಾ.ವಿ.ರಾಮ್‌ಪ್ರಸಾದ್ ಮತ್ತಿತರರನ್ನೂ ಸನ್ಮಾನಿಸಲಾಯಿತು.

ಅಭಿನಂದನೆ ಸ್ವೀಕರಿಸಿದ ಬಳಿಕ ಮಾತನಾಡಿದ ಶಾಸಕ ಟಿ.ಎಸ್.ಶ್ರೀವತ್ಸ, ಕ್ಷೇತ್ರದ ಎಲ್ಲಾ ಸಮುದಾಯ–ಸಂಘಟನೆಗಳಿಂದ ಅಭಿನಂದನೆ ನೀಡಲಾಗುತ್ತಿದೆ. ಅಭಿನಂದನೆ ಸಲ್ಲಿಸುವವರಲ್ಲಿ ಮನವಿ ಮಾಡುವುದೇನೆಂದರೆ, ಹಾರ, ಶಾಲು, ಪೇಟದ ಬದಲು ಪುಸ್ತಕಗಳನ್ನು ನೀಡಿದರೆ ಕ್ಷೇತ್ರದಲ್ಲಿನ ಬಡ ವಿದ್ಯಾರ್ಥಿಗಳಿಗೆ, ಸರ್ಕಾರಿ ಶಾಲಾ ಮಕ್ಕಳಿಗೆ ನೀಡಲು ಅನುಕೂಲವಾಗುತ್ತದೆ. ಮೈಸೂರು ನಗರದಲ್ಲಿ ಒಳ್ಳೆಯ ಅಧಿಕಾರಿಗಳ ತಂಡವಿದ್ದು, ಅವರೊಂದಿಗೆ ಕೆಲಸ ಮಾಡಬೇಕಾದರೆ ವೀಕ್ಷಕರ ಸ್ಥಾನದಲ್ಲಿರುವ ಸಾರ್ವಜನಿಕರು ನನ್ನಿಂದ ಕೆಲಸ ಮಾಡಿಸಿಕೊಳ್ಳಬೇಕು. ಕ್ಷೇತ್ರದಲ್ಲಿ 14–15 ಪ್ರಮುಖ ರಸ್ತೆಗಳ ದುರಸ್ತಿಗೆ ಪಟ್ಟಿ ಮಾಡಿಕೊಳ್ಳಲಾಗಿದೆ. ರಸ್ತೆ ಕಾಮಗಾರಿಯಲ್ಲಿ ಗುಣಮಟ್ಟವಿಲ್ಲದಿದ್ದರೆ ತಿಳಿಸಿ, ನೀವೇ ನನ್ನ ಕೆಲಸಕ್ಕೆ ಸರ್ಟಿಫಿಕೇಟ್ ಕೊಡಬೇಕು ಎಂದರು.



ನನ್ನನ್ನು ಆಕ್ಟೀವ್ ಮಾಡಿ: ನನಗೆ ಅಭಿನಂದನೆ ನೀಡಲು ಸಮುದಾಯದ ಎಲ್ಲರೂ ಒಂದೆಡೆ ಸೇರುವಂತೆ ಪ್ರತೀ 2–3 ತಿಂಗಳಿಗೊಮ್ಮೆ ಸಭೆ ಸೇರಿ ಮತ್ತೆ ಆಹ್ವಾನಿಸಬೇಕು. ಕ್ಷೇತ್ರದಲ್ಲಾಗಬೇಕಾದ ಅಭಿವೃದ್ಧಿ ಕಾರ್ಯಕ್ರಮಗಳ ಕುರಿತು ಚರ್ಚಿಸುವ ಜೊತೆಗೆ ಯಾವ್ಯಾವ ಕೆಲಸಗಳಾಗಬೇಕು ಎಂದು ಸೂಚನೆ ನೀಡಬೇಕು. ಸದಾ ನಿಮ್ಮ ಹದ್ದಿನ ಕಣ್ಣು ನನ್ನ ಮೇಲಿರಬೇಕು. ನನ್ನಿಂದ ಸಾಧ್ಯವಾದಷ್ಟು ಕೆಲಸಗಳನ್ನು ಮಾಡಿಸಿಕೊಳ್ಳುವ ಮೂಲಕ ಆಕ್ಟೀವ್ ಆಗಿರುವಂತೆ ಮಾಡಿ ಎಂದರು.

ಸಹಕಾರಕ್ಕೆ ಮುಕ್ತ ಅವಕಾಶ: ಕೆ.ಆರ್. ಕ್ಷೇತ್ರದ ಕುರುಬಾರಹಳ್ಳಿಯ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ 1200ಕ್ಕೂ ಹೆಚ್ಚು ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಆದರೆ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಕಲಿಕೆಗೆ ಕಂಪ್ಯೂಟರ್‌ಗಳಿಲ್ಲ. ಅದೇ ರೀತಿ ಹಲವಾರು ಸರ್ಕಾರಿ ಶಾಲೆಗಳಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳಿದ್ದಾರೆ. ಅವರ ವಿದ್ಯಾಭ್ಯಾಸಕ್ಕೆ ಸಹಕಾರ ನೀಡುವವರಿಗೆ ಹಾಗೆಯೇ ಕೆಲ ಮೂಲಸೌಕರ್ಯ ಸಮಸ್ಯೆಗಳ ಬಗೆಹರಿಸಲು ಕೈಜೋಡಿಸುವವರಿಗೆ ಮುಕ್ತ ಅವಕಾಶವಿದೆ. ಮಹನೀಯರ ಜಯಂತಿಗಳು ಹಾಗೂ ಹಬ್ಬ–ಹರಿದಿನಗಳನ್ನು ಸಾಂಕೇತಿಕವಾಗಿ ಆಚರಣೆ ಮಾಡದೆ ಸಾಮಾಜಿಕ ಕಾರ್ಯಗಳ ಮೂಲಕ ಎಲ್ಲರ ಮನಸ್ಸಿನಲ್ಲಿ ಉಳಿಯುವಂತೆ ಆಚರಿಸಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಮೂಗೂರು ಕರ್ನಾಟಕ ಬ್ರಾಹ್ಮಣ ಸಂಘದ ಅಧ್ಯಕ್ಷ ವಿಶ್ವನಾಥ್, ಸದಸ್ಯರಾದ ಸಿಂಧುವಳ್ಳಿ ನಾಗರಾಜ್, ಹೆಚ್.ಎಸ್.ಗಿರೀಶ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಮಿತ್ರ ಭಾನುವಾರ 11 ಜೂನ್ 2023

ಬೀಟೆ ಮರ ಸಾಗಿಸುತ್ತಿದ್ದ ವಾಹನ ಪಲ್ಟಿ

ಮರಗಳ್ಳರು ವಾಹನ, ಮರ ಬಿಟ್ಟು ಪರಾರಿ; ಪೊಲೀಸರಿಂದ ಪ್ರಕರಣ ದಾಖಲು

ಮರ ಕಡಿದು ವಾರವಾದರೂ ಡಿಪೋಗೆ ಸಾಗಿಸದ ಅರಣ್ಯ ಇಲಾಖೆ ವಿರುದ್ಧ ಆಕ್ರೋಶ



ಮಡಿಕೇರಿ, ಜೂ.10– ಕಾಫಿ ತೋಟದಲ್ಲಿದ್ದ ಬೀಟೆ ಮರವನ್ನು ಅಕ್ರಮವಾಗಿ ಕಡಿದು ಅದರ ನಾಟಾಗಳನ್ನು ಕದ್ದೊಯ್ಯುತ್ತಿದ್ದ ಸಂದರ್ಭದಲ್ಲಿ ವಾಹನ ಪಲ್ಟಿಯಾದ ಪರಿಣಾಮ ಮರಗಳ್ಳರು ವಾಹನ ಮತ್ತು ನಾಟಾಗಳನ್ನು ಅಲ್ಲೇ ಬಿಟ್ಟು ಸ್ಥಳದಿಂದ ಪರಾರಿಯಾಗಿರುವ ಘಟನೆ ಪೊನ್ನಂಪೇಟೆ ತಾಲೂಕಿನಲ್ಲಿ ನಡೆದಿದೆ.

ಈ ಕುರಿತು ಪೊನ್ನಂಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಬೀಟೆ ಮರದ 7 ನಾಟಾಗಳು ಮತ್ತು ಸಾಗಾಟಕ್ಕೆ ಬಳಸಿದ್ದ ಪಿಕ್ ಅಪ್ ವಾಹನವನ್ನು ಅರಣ್ಯ ಇಲಾಖೆ ವಶಕ್ಕೆ ಪಡೆದಿದೆ. ಈ ಘಟನೆ ಕುರಿತು ಅರಣ್ಯ ಇಲಾಖೆ ವಿರುದ್ಧ ರೈತ ಸಂಘ ತೀವ್ರ ಆಕ್ರೋಷ ವ್ಯಕ್ತಪಡಿಸಿದ್ದು, ಆರೋಪಿಗಳ ಬಂಧನಕ್ಕೆ ತಕ್ಷಣವೇ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದೆ.

ಪ್ರಕರಣ ಹಿನ್ನೆಲೆ: ಪೊನ್ನಂಪೇಟೆ ತಾಲೂಕಿನ ನಲ್ಲೂರು ಗ್ರಾಮದ ತೀತರಮಾಡ ಸುನೀಲ್ ಎಂಬವರ ಕಾಫಿ ತೋಟದಲ್ಲಿ ಬೀಟೆ ಮರಗಳಿದ್ದು, ಒಂದು ವಾರದ ಹಿಂದೆ ಮರಗಳ್ಳರು ಒಂದು ಮರವನ್ನು ಕಡಿದು ಹಾಕಿದ್ದರು. ಮಾತ್ರವಲ್ಲದೇ ಮರದ ಬುಡವನ್ನು 3 ನಾಟಾಗಳನ್ನಾಗಿ ಪರಿವರ್ತಿಸಿದ್ದರು. ಈ ಕುರಿತು ತೋಟದ ಮಾಲೀಕರು ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದರು. ವಿಷಯ ತಿಳಿದ ಪೊಲೀಸರು ಸ್ಥಳ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡಿದ್ದರು. ಬೀಟೆ ಮರ ಕಡಿದಿರುವ ಘಟನೆಯ ಕುರಿತು ಪೊಲೀಸ್ ಇಲಾಖೆ ಅರಣ್ಯ ಇಲಾಖೆಗೂ ವರದಿ ನೀಡಿತ್ತು. ಅರಣ್ಯ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಸ್ಥಳಕ್ಕಾಗಮಿಸಿ ಮಹಜರು ನಡೆಸಿ ಸ್ಥಳದಿಂದ ತೆರಳಿದ್ದು, ತೋಟದಲ್ಲೇ ಬೀಟೆ ಮರದ ನಾಟಾಗಳನ್ನು ಬಿಡಲಾಗಿತ್ತು.

ಉರುಳಿ ಬಿದ್ದ ವಾಹನ: ತೋಟದ ಮಾಲೀಕ ಬೆಂಗಳೂರಿಗೆ ತೆರಳಿದ್ದ ಸಂದರ್ಭ ಶುಕ್ರವಾರ ರಾತ್ರಿ ಮತ್ತೆ ಬೀಟೆ ಮರ ಕಡಿದ ತೋಟಕ್ಕೆ ಬಂದ ಮರಗಳ್ಳರು ಕಡಿದು ಉರುಳಿಸಿದ್ದ ಬೀಟೆ ಮರವನ್ನು ಮತ್ತೆ ಕಡಿದು ಹೆಚ್ಚುವರಿಯಾಗಿ 4 ನಾಟಾಗಳನ್ನಾಗಿ ಪರಿವರ್ತಿಸಿದ್ದರು. ಮಾತ್ರವಲ್ಲದೇ ಕೇರಳ ನೋಂದಣಿ ಸಂಖ್ಯೆ ಹೊಂದಿರುವ ಪಿಕ್ ಅಪ್(ಕೆಎಲ್.13.ಕೆ.2084) ವಾಹನದಲ್ಲಿ ಒಟ್ಟು 7 ನಾಟಾಗಳನ್ನು ತುಂಬಿಸಿ ಕದ್ದೊಯ್ಯುವ ಪ್ರಯತ್ನ ನಡೆಸಿದ್ದರು. ಈ ಸಂದರ್ಭ ತೋಟದ ಒಳಗೆ ಬೀಟೆ ಮರ ತುಂಬಿದ್ದ ಪಿಕ್ ಅಪ್ ವಾಹನ ಚಾಲಕನ ನಿಯಂತ್ರಣ ತಪ್ಪಿ ಉರುಳಿ ಬಿದ್ದಿದೆ. ಪರಿಣಾಮ ಮರಗಳ್ಳರು ವಾಹನ ಸಹಿತ ಬೀಟೆ ಮರದ ನಾಟಾಗಳನ್ನು ಸ್ಥಳದಲ್ಲೇ ಬಿಟ್ಟು ಪರಾರಿಯಾಗಿದ್ದಾರೆ.

ಮತ್ತೊಂದು ಮರಕ್ಕೆ 'ಕತ್ತರಿ': ಬೀಟೆ ಮರ ಕಳವಿಗೆ ಪ್ರಯತ್ನ ನಡೆಸಿರುವ ಘಟನೆ ಬೆಳಕಿಗೆ ಬಂದ ತಕ್ಷಣವೇ ಪೊಲೀಸ್ ಇಲಾಖೆ, ಅರಣ್ಯ ಇಲಾಖೆ ಮತ್ತು ರೈತ ಸಂಘದ ಪ್ರಮುಖರು ಸ್ಥಳಕ್ಕಾಗಮಿಸಿ ಪರಿಶೀಲನೆ ನಡೆಸಿದ್ದರೂ, ಸಹ ಶುಕ್ರವಾರ ತೋಟಕ್ಕೆ ಮತ್ತೆ ಮರಗಳ್ಳರು ಆಗಮಿಸಿರುವುದು ಕೂಡ ಬಂದಿದೆ ಮಾತ್ರವಲ್ಲದೇ ಮತ್ತೊಂದು ಬೀಟೆ ಮರದ ಬುಡವನ್ನು ಗರಗಸದ ಸಹಾಯದಿಂದ ಅರ್ಧ ಭಾಗ ಕತ್ತರಿಸಿರುವುದು ಕಂಡು ಬಂದಿದೆ. ಮರ ಬಿದ್ದ ಸ್ಥಳದಲ್ಲಿದ್ದ ಕಾಫಿ ಗಿಡಗಳು ಧ್ವಂಸವಾಗಿದ್ದು, ತೋಟದ ಮಾಲೀಕರಿಗೆ ನಷ್ಟ ಉಂಟಾಗಿದೆ.

ರೈತ ಸಂಘ ಆಕ್ರೋಶ: 1 ವಾರದ ಹಿಂದೆಯೇ ಬೀಟೆ ಮರ ಕಡಿದಿರುವ ಘಟನೆ ನಡೆದಿದೆ. ಪೊಲೀಸ್ ಇಲಾಖೆ ಮಹಜರು ನಡೆಸಿ ಬೀಟೆ ಮರದ ನಾಟಾಗಳನ್ನು ಅರಣ್ಯ ಇಲಾಖೆ ಅಧಿಕಾರಿಗಳ ವಶಕ್ಕೆ ಒಪ್ಪಿಸಿದ್ದರು. ಆದರೂ, ಅರಣ್ಯ ಇಲಾಖೆ ನಿರ್ಲಕ್ಷ್ಯವಹಿಸಿ ಸ್ಥಳದಲ್ಲಿದ್ದ



ಬೀಟೆ ಮರಗಳನ್ನು ಡಿಪೋಗೆ ಸ್ಥಳಾಂತರಿಸಿಲ್ಲ ಎಂದು ರೈತ ಸಂಘದ ಪ್ರಮುಖರು ಅರಣ್ಯ ಇಲಾಖೆ ಅಧಿಕಾರಿಗಳ ಬೇಜವಾಬ್ದಾರಿಗೆ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಅರಣ್ಯವನ್ನು ಸಂರಕ್ಷಿಸಬೇಕಾದ ಇಲಾಖೆ ಬೀಟೆ ಮರದ ನಾಟಾಗಳನ್ನು ಸ್ವಾಧೀನ ಪಡೆಯುವ ಬದಲು ಸ್ಥಳದಲ್ಲೇ ಬಿಟ್ಟಿದ್ದಾರೆ. ಘಟನೆ ನಡೆದು ಒಂದು ವಾರದ ಅವಧಿಯಲ್ಲಿ ಕಡಿದು ಹಾಕಿದ್ದ ಮರವನ್ನು ಯಾರಾದರೂ ಕಳವು ಮಾಡಿದ್ದರೆ, ತೋಟದ ಮಾಲೀಕರನ್ನೇ ಅರಣ್ಯ ಇಲಾಖೆ ಅಪರಾಧಿ ಮಾಡುತ್ತಿತ್ತು ಎಂದು ಇಲಾಖೆ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಅರಣ್ಯ ಇಲಾಖೆಯ ಬೇಜವಾಬ್ದಾರಿ ಪರಿಣಾಮ ಮತ್ತೆ ಮರ ಕಳ್ಳರು ಆಗಮಿಸಿ ಮರವನ್ನು ಹೊತ್ತೊಯ್ಯುವ ಪ್ರಯತ್ನ ನಡೆಸಿದ್ದಾರೆ. ಇದಕ್ಕೆ ಅರಣ್ಯ ಇಲಾಖೆಯೇ ಹೊಣೆ ಎಂದು ಸ್ಥಳದಲ್ಲಿದ್ದ ಎಸಿಎಫ್ ಸೀಮಾ ಅವರನ್ನು ತರಾಟೆಗೆ ತೆಗೆದುಕೊಂಡರು. ಕೇರಳ ನೋಂದಣಿ ಸಂಖ್ಯೆಯ ವಾಹನದಲ್ಲಿ ಮರ ಸಾಗಾಟ ನಡೆಸುವ ಪ್ರಯತ್ನ ನಡೆದಿದೆ. ತಕ್ಷಣವೇ ಆರೋಪಿಗಳ ಬಂಧಕ್ಕೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭ ಕರ್ನಾಟಕ ರಾಜ್ಯ ರೈತ ಸಂಘದ ಕೊಡಗು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಚಟ್ರುಮಾಡ ಸುಜಯ್ ಬೋಪ್ಪಯ್ಯ, ಪೊನ್ನಂಪೇಟೆ ತಾಲೂಕು ಅಧ್ಯಕ್ಷ ಅಲೇಮಾಡ ಮಂಜುನಾಥ್, ಪುಚ್ಚಿಮಾಡ ರಾಯ್ ಮಾದಪ್ಪ ಗೋಣಿಕೊಪ್ಪ ಪೊಲೀಸ್ ವೃತ್ತ ನಿರೀಕ್ಷಕ ಎಂ.ಗೋವಿಂದ ರಾಜ್ ಹಾಗೂ ಸಿಬ್ಬಂದಿಗಳು, ನಲ್ಲೂರಿನ ಗ್ರಾಮಸ್ಥರು ಹಾಜರಿದ್ದರು.

ಬುಡಕಟ್ಟು ಜನಾಂಗ ಕೊಡವರಿಗೆ ವಿಶೇಷ ಸ್ಥಾನಮಾನಕ್ಕಾಗಿ ಆಯೋಗ ರಚಿಸಿ

ಸಿಎಂ ಸಿದ್ದರಾಮಯ್ಯಗೆ ಪತ್ರ ಬರೆದ ಕೇಂದ್ರದ ಮಾಜಿ ಸಚಿವ ಡಾ.ಸುಬ್ರಮಣಿಯನ್ ಸ್ವಾಮಿ



ಮಡಿಕೇರಿ, ಜೂ.10– ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆಯ ಬೇಡಿಕೆಯಂತೆ ಕರ್ನಾಟಕ ರಾಜ್ಯದ ಅವಿಭಾಜ್ಯ ಅಂಗವಾಗಿರುವ ಕೊಡಗು ಜಿಲ್ಲೆಯ ಬುಡಕಟ್ಟು ಜನಾಂಗ ಕೊಡವರಿಗೆ ವಿಶೇಷ ಸ್ಥಾನಮಾನ ಕಲ್ಪಿಸಲು ಸರ್ಕಾರ ಆಯೋಗವೊಂದನ್ನು ರಚಿಸಬೇಕೆಂದು ಒತ್ತಾಯಿಸಿ ಅರ್ಥಶಾಸ್ತ್ರಜ್ಞ ಹಾಗೂ ಕೇಂದ್ರದ ಮಾಜಿ ಸಚಿವ ಡಾ.ಸುಬ್ರಮಣಿಯನ್ ಸ್ವಾಮಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದಾರೆ.

ಕೊಡವ ಸ್ವಾಯತ್ತ ನಾಡಿನ ಬೇಡಿಕೆ ಈಡೇರಿಸುವ ನಿಟ್ಟಿನಲ್ಲಿ ಈಗಾಗಲೇ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿರುವ ಅವರು ಇದೇ ಜೂ.14 ರಂದು ಅರ್ಜಿ ವಿಚಾರಣೆಯ ಸಂದರ್ಭ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಯಾಗುವ ಇಂಗಿತವನ್ನು ವ್ಯಕ್ತಪಡಿಸಿದ್ದಾರೆ.

ಪತ್ರದಲ್ಲಿ ಕೊಡವರ ಬೇಡಿಕೆಗಳ ಕುರಿತು ಉಲ್ಲೇಖಿಸಿರುವ ಡಾ.ಸುಬ್ರಮಣ್ಯನ್ ಸ್ವಾಮಿ ಕೊಡವರಿಗೆ ಕರ್ನಾಟಕ ರಾಜ್ಯದಲ್ಲಿ ವಿಶೇಷ ಸ್ಥಾನಮಾನ ಒದಗಿಸುವ ನಿಟ್ಟಿನಲ್ಲಿ ಸರ್ಕಾರಿ ಆಯೋಗವೊಂದನ್ನು ರಚಿಸುವ ತುರ್ತು ಅಗತ್ಯತೆ ಇದೆ ಎಂದು ತಿಳಿಸಿದ್ದಾರೆ.

ಕೂರ್ಗ್ ಪ್ರದೇಶವು 1950 ಮತ್ತು 1956ರ ನಡುವೆ ವಿಧಾನಸಭೆ, ಮುಖ್ಯಮಂತ್ರಿ, ಚುನಾಯಿತ ಲೋಕಸಭಾ ಸಂಸದ ಹಾಗೂ ರಾಜ್ಯಸಭಾ ಸಂಸದರನ್ನು ಹೊಂದಿರುವ ರಾಜ್ಯವಾಗಿತ್ತು. 1957ರಲ್ಲಿ ರಾಜ್ಯಗಳನ್ನು ಮರುಸಂಘಟಿಸಿದ ನಂತರ ಈ ಪ್ರದೇಶವನ್ನು ಕರ್ನಾಟಕದೊಂದಿಗೆ ವಿಲೀನಗೊಳಿಸಲಾಯಿತು. ಇದಾದ ನಂತರ ಕರ್ನಾಟಕದಲ್ಲಿ ಕೊಡವರ ಸ್ಥಿತಿ ಹೀನಾಯವಾಗಿದೆ.

ಹೈದರಾಬಾದ್ ಕರ್ನಾಟಕ ಭಾಗದ ಕೆಲವು ಪ್ರದೇಶಗಳಿಗೆ ವಿಶೇಷ ಸ್ಥಾನಮಾನವನ್ನು ನೀಡಲಾಗಿದೆ. ತಾರತಮ್ಯವನ್ನು ಅನುಭವಿಸಿದ ಕೊಡವರಿಗೆ ಅಂತಹ ಯಾವುದೇ ಸ್ಥಾನಮಾನ ನೀಡಿಲ್ಲ. ಪಿಐಎಲ್ ಸ್ವರೂಪದ ನನ್ನ ರಿಟ್ ಅರ್ಜಿಯ ವಿಚಾರಣೆ ಜೂ.14ರಂದು ನಡೆಯಲಿದೆ. ಈ ಸಂದರ್ಭ ನಾನು ಬೆಂಗಳೂರಿಗೆ ಆಗಮಿಸುತ್ತಿದ್ದು, ಮುಖ್ಯಮಂತ್ರಿ ಭೇಟಿ ಮಾಡಲು ಅವಕಾಶ ನೀಡಬೇಕೆಂದು ಡಾ.ಸುಬ್ರಮಣ್ಯನ್ ಸ್ವಾಮಿ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಂಡಿದ್ದಾರೆ.

ಸ್ವಾಮಿ ಕ್ರಮ ಸ್ವಾಗತಾರ್ಹ: ಕೊಡವಲ್ಯಾಂಡ್ ಜಿಯೋ–ರಾಜಕೀಯ ಸ್ವಾಯತ್ತೆ ಡಾ.ಸುಬ್ರಮಣಿಯನ್ ಸ್ವಾಮಿಯವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದು ಕೊಡವಲ್ಯಾಂಡ್ ಭೌಗೋಳಿಕ–ರಾಜಕೀಯ ಸ್ವಾಯತ್ತತೆಗೆ ಸಂಬಂಧಿಸಿದಂತೆ ಗಮನ ಸೆಳೆದಿರುವುದು ಸ್ವಾಗತಾರ್ಹವೆಂದು ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆಯ ಅಧ್ಯಕ್ಷ ಎನ್.ಯು.ನಾಚಪ್ಪ ತಿಳಿಸಿದ್ದಾರೆ. ಕೊಡವ ಜನಾಂಗದ ಅಭ್ಯುದಯಕ್ಕಾಗಿ ಸಿಎನ್‌ಸಿ ಪ್ರಸ್ತಾಪಿಸಿರುವ ಬೇಡಿಕೆಗಳ ಪರವಾಗಿ ಸ್ವಾಮಿ ಅವರು ಹೆಚ್ಚು ಕಾಳಜಿ ತೋರಿ ನ್ಯಾಯಕ್ಕಾಗಿ ಕಾನೂನು ಹೋರಾಟ ನಡೆಸುತ್ತಿದ್ದಾರೆ. ಮಾತ್ರವಲ್ಲದೆ ಇದೀಗ ಮುಖ್ಯಮಂತ್ರಿಗಳ ಮಟ್ಟದಲ್ಲಿ ವ್ಯವಹರಿಸಿ ಕೊಡವರಿಗೆ ನ್ಯಾಯ ದೊರಕಿಸಿಕೊಡಲು ಮುಂದಾಗಿರುವುದು ಶ್ಲಾಘನೀಯವೆಂದು ಹೇಳಿದ್ದಾರೆ.

ಶಾಸಕ ಪೊನ್ನಣ್ಣ, ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ರಾಣಿ ಮಾಚಯ್ಯಗೆ ಸನ್ಮಾನ

ಮಡಿಕೇರಿ, ಜೂ.10– ವಿರಾಜಪೇಟೆ ತಾಲೂಕು ಬಾಳುಗೋಡುವಿನಲ್ಲಿರುವ ಕೊಡವ ಸಮಾಜದ ಒಕ್ಕೂಟ ವತಿಯಿಂದ ನೂತನವಾಗಿ ವಿರಾಜಪೇಟೆ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾಗಿರುವ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ಮತ್ತು ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಐಮುಡಿಯಂಡ ರಾಣಿ ಮಾಚಯ್ಯ ಅವರನ್ನು ಸನ್ಮಾನಿಸಿ ಅಭಿನಂದಿಸಲಾಗುತ್ತಿದೆ. ಜೂ.22ರ ಗುರುವಾರ ಬೆಳಗ್ಗೆ 10.30ಕ್ಕೆ ಕೊಡವ ಸಮಾಜ ಒಕ್ಕೂಟದ ಸಭಾಂಗಣದಲ್ಲಿ ಕಾರ್ಯಕ್ರಮ ನಡೆಯಲಿದ್ದು, ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಂತೆ ಕೊಡವ ಸಮಾಜ ಒಕ್ಕೂಟದ ಕಾರ್ಯದರ್ಶಿ ಪತ್ರಿಕಾ ಹೇಳಿಕೆ ಮೂಲಕ ಮನವಿ ಮಾಡಿದ್ದಾರೆ.

ರಾಜು ನಿಧನ

ಗುಡ್ಡೆಹೊಸೂರು, ಜೂ.10– ಮಡಿಕೇರಿ ತಾಲೂಕು ಚೆಟ್ಟಿಮಾನಿ ಗ್ರಾಮದ ಕೆದಂಬಾಡಿ ದಿವಂಗತ ರಾಮಪ್ಪ ಅವರ ಪುತ್ರ ರಾಜು(82) ಅವರು ಶುಕ್ರವಾರ ನಿಧನರಾದರು. ಮೃತರ ಅಂತ್ಯಕ್ರಿಯೆ ಭಾನುವಾರ (ಜೂ.11) ಮಧ್ಯಾಹ್ನ ಕೆದಂಬಾಡಿ ಐನ್‌ಮನೆಯಲ್ಲಿ ನಡೆಯಲಿದೆ.



ಸಮಾಜಮುಖಿ ಕಾರ್ಯದಲ್ಲಿ ತೊಡಗಿ ಮಾದರಿಯಾಗಿ ಬದುಕಿ

ವಿರಾಜಪೇಟೆ, ಜೂ.10– ಕೊಡವ ಜನಾಂಗದವರಾದ ನಾವೆಲ್ಲರೂ ಪರಸ್ಪರ ಒಗ್ಗಟ್ಟು, ಹೊಂದಾಣಿಕೆಯೊಂದಿಗೆ ಜೀವನ ಸಾಗಿಸಬೇಕು ಹಾಗೂ ಜೀವಿತಾವಧಿಯಲ್ಲಿ ಆದಷ್ಟು ಸಮಾಜಮುಖಿ ಕಾರ್ಯದಲ್ಲಿ ನಮ್ಮನ್ನು ನಾವು ತೊಡಗಿಸಿಕೊಳ್ಳುವುದರ ಮೂಲಕ ಸಮಾಜಕ್ಕೆ ಮಾದರಿಯಾಗಿ ಬದುಕಬೇಕು ಎಂದು ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಐಮುಡಿಯಂಡ ರಾಣಿ ಮಾಚಯ್ಯ ಕರೆ ನೀಡಿದ್ದಾರೆ.

ವಿರಾಜಪೇಟೆ ಕೊಡವ ಪೊಮ್ಮಕ್ಕಡ ಒಕ್ಕೂಟದ ವತಿಯಿಂದ ಕೊಡವ ಸಮಾಜದ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನನ್ನ ಜೀವನದ ಕೊನೆಯ ಉಸಿರಿರುವ ತನಕ ಜಾನಪದ ಕಲಾ ಪ್ರಕಾರವಾದ ಉಮ್ಮತಾಟ್ ಕಲಾ ಪ್ರಕಾರವನ್ನು ವಿಶ್ವದೆಲ್ಲೆಡೆ ಪಸರಿಸುವ ಕೆಲಸವನ್ನು ನಿರಂತರವಾಗಿ ಮಾಡಲಿದ್ದೇನೆ ಎಂದರು.

ಕೊಡವ ಪೊಮ್ಮಕ್ಕಡ ಒಕ್ಕೂಟದ ಅಧ್ಯಕ್ಷೆ ಮನೆಯಪಂಡ ಕಾಂತಿ ಸತೀಶ್ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಮೊದಲಿಗೆ ಒಕ್ಕೂಟದ ಕಾರ್ಯದರ್ಶಿ ಬಯವಂಡ ಇಂದಿರ ಬೆಳಿಯಪ್ಪ ಅವರು ತಪ್ಪಡಕ ಕಟ್ಟುವುದರೊಂದಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಇದೇ ಸಂದರ್ಭ ಒಕ್ಕೂಟದ ಸದಸ್ಯೆಯರಿಗೆ ಕೊಡವ ಮದುವೆಯಲ್ಲಿ ಕೊಡವ ಹೆಣ್ಣುಮಕ್ಕಳ ವೇಷ ಭೂಷಣ ಹೇಗೆ ಇದ್ದರೆ ಚೆಂದ" ಎಂಬ ವಿಚಾರದ ಬಗ್ಗೆ ಚರ್ಚಾ ಸ್ಪರ್ಧೆ ನಡೆಯಿತು.

ಉದ್ದಪಂಡ ವಿಮಲಾ ಪ್ರಾರ್ಥಿಸಿದರೆ, ಬಯವಂಡ ಇಂದಿರಾ ಬೆಳ್ಳಿಯಪ್ಪ ಸ್ವಾಗತಿಸಿದರು. ವೇದಿಕೆಯಲ್ಲಿ ಅಮ್ಮಣಿಚಂಡ ಈಶ್ವರಿ ಗಂಗಮ್ಮ, ಮಾಳೇಟಿರ ಕವಿತಾ ಶ್ರೀನಿವಾಸ್, ತಾತಂಡ ಯಶು ಕಭೀರ್, ಬಿದ್ದಂಡ ರಾಣಿ ಉತ್ತಯ್ಯ, ನಾಯಕಂಡ ಬೇಬಿ ಚಿಣ್ಣಪ್ಪ ಉಪಸ್ಥಿತರಿದ್ದರು.

ಬಸವ ತತ್ವ ಪಾಲನೆಯಿಂದ ಸಮ ಸಮಾಜ ನಿರ್ಮಾಣ

ಶಾಸಕ ಗಣೇಶ ಪ್ರಸಾದ್



ಚಾಮರಾಜನಗರ, ಜೂ.10– 12ನೇ ಶತಮಾನದ ಬಸವಾದಿ ಶರಣರ ಚಿಂತನೆಗಳು ಇಂದಿಗೂ ಪ್ರಸ್ತುತವಾಗಿದ್ದು, ಬಸವ ತತ್ವ ಪಾಲನೆಯಿಂದ ಸಮ ಸಮಾಜ ನಿರ್ಮಾಣದ ಜೊತೆಗೆ ಅಭಿವೃದ್ಧಿಯತ್ತ ಸಾಗಲು ಸಾಧ್ಯವಿದೆ ಎಂದು ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ತಿಳಿಸಿದರು.

ನಗರದ ಮಹಾಮನೆಯಲ್ಲಿ ವೀರಶೈವ ಲಿಂಗಾಯತ ನೌಕರರ ಕ್ಷೇಮಾಭಿವೃದ್ಧಿ ಸಂಘ, ಶ್ರೀಬಸವೇಶ್ವರ ಪತ್ತಿನ ಸಹಕಾರ ಸಂಘ ಹಾಗೂ ಸಂಗಮ ಗೃಹ ನಿರ್ಮಾಣ ಸಹಕಾರ ಸಂಘದ ಸಹಯೋಗದಲ್ಲಿ ನಡೆದ ಶರಣ ಚಿಂತನ– ಸಿಂಚನ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ಜಿಲ್ಲಾ ಕೇಂದ್ರದಲ್ಲಿರುವ ಮಹಾಮನೆಯು ಕಳೆದ 24 ವರ್ಷಗಳಿಂದ ಬಸವವಾದಿ ಶರಣರ ಚಿಂತನೆಗಳು ಹಾಗೂ ಅವರ ವಚನಗಳನ್ನು ಪ್ರಚುರ ಪಡಿಸುವ ಜೊತೆಗೆ ಬಸವ ತತ್ವ ಪಾಲಿಸುತ್ತಿದೆ. ಇಂತಹ ಕಾರ್ಯಕ್ರಮಗಳು ಹೆಚ್ಚು ನಡೆದಾಗ ಮಾತ್ರ ಜನರಲ್ಲಿ ಧರ್ಮದ ಬಗ್ಗೆ ಜಾಗೃತಿ ಮೂಡುತ್ತದೆ. ಅಂದು ಬಸವಣ್ಣ ಹಾಗೂ ಅನೇಕ ಶರಣರು ವೀರಶೈವ ಲಿಂಗಾಯತ ಧರ್ಮ ಸ್ಥಾಪಿಸುವ ಜೊತೆಗೆ ವಚನಗಳ ಮೂಲಕ ಜನರಲ್ಲಿ ಜಾಗೃತಿ ಮೂಡಿಸುತ್ತಿದ್ದರು. ಮೌಢ್ಯ, ಜಾತಿ ಪದ್ಧತಿ ಸೇರಿದಂತೆ ಅನೇಕ ಅನಿಷ್ಟ ಆಚರಣೆ ಬಗ್ಗೆ ಅರಿವು ಮೂಡಿಸುವ ಜೊತೆಗೆ ಸಮ ಸಮಾಜ ನಿರ್ಮಾಣಕ್ಕೆ ಮುಂದಾಗಿದ್ದರು. 21ನೇ ಶತಮಾನದಲ್ಲಿ ಮಹಾಮನೆ ಸದಸ್ಯರು ಇಂತಹ ಕಾರ್ಯದಲ್ಲಿ ನಿರತರಾಗುವ ಮೂಲಕ ಯುವ ಪೀಳಿಗೆಗೆ ಧರ್ಮದ ಬಗ್ಗೆ ಜಾಗೃತಿ ಮೂಡಿಸುವ ಕೆಲಸ ಮಾಡುತ್ತಿದೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಸಿದ್ದಮಲ್ಲಪ್ಪ ಮಾತನಾಡಿ, ನೌಕರರ ಸಂಘ 24 ವರ್ಷ ಪೂರೈಸಿ ಬೆಳ್ಳಿ ಹಬ್ಬ ಆಚರಿಸಿಕೊಳ್ಳುವತ್ತ ಸಾಗುತ್ತಿದೆ. ಗಡಿ ಜಿಲ್ಲೆಯಲ್ಲಿ ಬಸವ ತತ್ವ ಪ್ರಚುರ ಪಡಿಸುವ ಜೊತೆಗೆ ನೌಕರರಲ್ಲಿ ಒಗ್ಗಟ್ಟು ಮೂಡಿಸುವ ಸಲುವಾಗಿ ಸಂಘ ಸ್ಥಾಪಿಸಲಾಯಿತು. ಪ್ರತಿಭಾ ಪುರಸ್ಕಾರ, ನೊಂದವರಿಗೆ ನೆರವು, ಆರೋಗ್ಯ ತಪಾಸಣೆ ಶಿಬಿರ, ಕಣ್ಣಿನ ತಪಾಸಣೆ ಶಿಬಿರ ಸೇರಿದಂತೆ ಅನೇಕ ಕಾರ್ಯಕ್ರಮ ಆಯೋಜಿಸುವ ಮೂಲಕ ಬಸವಾದಿ ಶರಣರ ತತ್ವ ಸಿದ್ಧಾಂತಗಳನ್ನು ಅಳವಡಿಸಿಕೊಂಡು ಸಮಾಜವನ್ನು ಅಭಿವೃದ್ಧಿಯತ್ತ ಕೊಂಡೊಯ್ಯುವ ನಿಟ್ಟಿನಲ್ಲಿ ಸಂಘ ಅವಿರತವಾಗಿ ಶ್ರಮಿಸುತ್ತಿದೆ ಎಂದರು.

ಚಾ.ನಗರ ವಿರಕ್ತ ಮಠಾಧೀಶ ಶ್ರೀಚನ್ನಬಸವ ಸ್ವಾಮೀಜಿ ಸಾನಿಧ್ಯ ವಹಿಸಿ ಮಾತನಾಡಿದರು. ಈ ವೇಳೆ ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಅವರನ್ನು ಸಂಘದ ಪದಾಧಿಕಾರಿಗಳು ಸನ್ಮಾನಿಸಿದರು. ಇದಕ್ಕೂ ಮುನ್ನಾ ಸಹಾಯಕ ಪ್ರಾಧ್ಯಾಪಕ ಡಾ.ಬಿ.ಆರ್.ಜಯಣ್ಣ ವಚನಗಳಲ್ಲಿ ಜೀವನ ಮೌಲ್ಯಗಳು ಎಂಬ ವಿಚಾರ ಕುರಿತು ಮಾತನಾಡಿದರು.

ಕಾರ್ಯಕ್ರಮದಲ್ಲಿ ಮುಖಂಡರಾದ ರಾಜಶೇಖರ್, ಆರ್.ಪುಟ್ಟಮಲ್ಲಪ್ಪ, ಬಿ.ಕೆ.ರವಿಕುಮಾರ್, ನವೀನ್, ಗುರುಸ್ವಾಮಿ, ಶ್ರೀಬಸವೇಶ್ವರ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಯೋಗ ಪ್ರಕಾಶ್, ನೌಕರರ ಸಂಘ ಉಪಾಧ್ಯಕ್ಷ ಮಹದೇವಸ್ವಾಮಿ, ಮಹೇಶ್, ಪೊಲೀಸ್ ಗಂಗಾಧರ್, ಮಾದಲಾಂಬಿಕೆ, ಕಾರ್ಯದರ್ಶಿ ಅರ್ಕಪ್ಪ, ಖಜಾಂಚಿ ಮಹದೇವಸ್ವಾಮಿ, ನಿರ್ಮಲ, ನಂಜುಂಡಸ್ವಾಮಿ, ಪೊಲೀಸ್ ಕುಮಾರ್, ಮಹದೇವಸ್ವಾಮಿ, ಶಿವಕುಮಾರ ಸ್ವಾಮಿ, ಕಿರಣ್ ರಾಜು, ಗುರುಸ್ವಾಮಿ, ಪರಶಿವಮೂರ್ತಿ, ಬಸವರಾಜಪ್ಪ, ಪೊಲೀಸ್ ಜಯಶಂಕರಮೂರ್ತಿ, ನಾಗಮಣಿ ಇತರರಿದ್ದರು.

ಸಮಾಜಸೇವೆ ಮೂಲಕ ಧರ್ಮಸ್ಥಳ ಸಂಸ್ಥೆ ಬಡವರಿಗೆ ಆಸರೆ

ಮೈಸೂರು ವಿಭಾಗದ ಪ್ರಾದೇಶಿಕ ನಿರ್ದೇಶಕ ಬಿ.ಜಯರಾಮು ನೆಲ್ಲಿತ್ತಾಯ ಅಭಿಪ್ರಾಯ



ಚಾಮರಾಜನಗರ, ಜೂ.10– ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಕೆರೆಗಳ ಪುನಶ್ಚೇತನ, ಗೃಹ ನಿರ್ಮಾಣ, ಹೈನುಗಾರಿಕೆ, ಕೃಷಿ, ಪ್ರಗತಿನಿಧಿ, ಮದ್ಯವರ್ಜನ ಶಿಬಿರಗಳ ಮೂಲಕ ಬಡಜನರಿಗೆ ಆಸರೆಯಾಗಿದೆ ಎಂದು ಮೈಸೂರು ವಿಭಾಗದ ಪ್ರಾದೇಶಿಕ ನಿರ್ದೇಶಕ ಬಿ.ಜಯರಾಮು ನೆಲ್ಲಿತ್ತಾಯ ಅಭಿಪ್ರಾಯಪಟ್ಟರು.

ನಗರದ ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2022–23ನೇ ಸಾಲಿನ ಜಿಲ್ಲಾ ಪ್ರಗತಿ ವರದಿಯನ್ನು ಮಂಡಿಸಿದರು.

ಗ್ರಾಮಾಭಿವೃದ್ಧಿ ಯೋಜನೆ 2012ರಲ್ಲಿ ಪ್ರಾರಂಭವಾಗಿದ್ದು, ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆಯವರ ಆಶಯದಂತೆ ಜಿಲ್ಲೆಯಲ್ಲಿ ಅನೇಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದೆ. ಜಿಲ್ಲೆಯಲ್ಲಿ ಯಶಸ್ವಿಯಾಗಿ 11 ವರ್ಷ ಪೂರೈಸಿದ್ದು, ಪ್ರಸಕ್ತ ವರ್ಷದಿಂದ ಜಿಲ್ಲೆಯಲ್ಲಿ 2 ನೂತನ ತಾಲೂಕು ಯೋಜನಾ ಕಚೇರಿಗಳು ಆರಂಭವಾಗಿದ್ದು, ಜಿಲ್ಲೆಯಲ್ಲಿ 6 ತಾಲೂಕು ಯೋಜನಾ ಕಚೇರಿಗಳು ಕಾರ್ಯ ನಿರ್ವಹಿಸುತ್ತಿವೆ ಎಂದರು.

ಧರ್ಮಸ್ಥಳ ಸಂಘ ಹಣಕಾಸು ವ್ಯವಹಾರ ಒಳಗೊಂಡಂತೆ ಸೇವಾ ಮನೋಭಾವದಿಂದ ಸ್ಥಾಪಿತವಾಗಿದೆ. ಜಿಲ್ಲೆಯಲ್ಲಿ ಒಟ್ಟು 1056 ಸಿಬ್ಬಂದಿ ಕಾರ್ಯ ನಿರ್ವಹಿಸುತ್ತಿದ್ದು, 15878 ಸಂಘಗಳನ್ನು ಸ್ಥಾಪನೆ ಮಾಡಲಾಗಿದೆ. ಜಿಲ್ಲೆಯಲ್ಲಿ ಸಂಘದ ವತಿಯಿಂದ 20 ಕೆರೆಗಳಲ್ಲಿ ಹೂಳೆತ್ತಲಾಗಿದೆ. ಅಂಗವಿಕಲರಿಗೆ ಸಾಧನ ಸಲಕರಣೆ ವಿತರಣೆ, ಸೂರಿಲ್ಲದವರಿಗೆ ವಾತ್ಸಲ್ಯ ಯೋಜನೆಯಡಿ ಮನೆ ನಿರ್ಮಾಣ, ಶ್ರದ್ಧಾಕೇಂದ್ರಗಳ ಸ್ವಚ್ಛತೆ, ದುಶ್ಚಟಗಳ ನಿರ್ಮೂಲನೆ ಸೇರಿದಂತೆ ಹಲವು ಸೇವಾ ಕಾರ್ಯಗಳನ್ನು ಕೈಗೊಳ್ಳಲಾಗಿದೆ ಎಂದರು.

ಜಿಲ್ಲೆಯಲ್ಲಿ ಸಂಘದಿಂದ 400 ಕೋಟಿ ರೂ. ಸಾಲ ನೀಡಲಾಗಿದೆ. ಬೀದಿ ಬದಿ ವ್ಯಾಪಾರಿಗಳ ಅಭಿವೃದ್ಧಿಗಾಗಿ ಧನಸಹಾಯ ಮಾಡಲಾಗುತ್ತಿದ್ದು, ಆರೋಗ್ಯ ಕಾರ್ಡ್ ಯೋಜನೆಯಡಿ 1.20 ಲಕ್ಷ ರೂ. ವರೆಗೆ ವಿಮೆ ನೀಡಲಾಗುತ್ತಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಯೋಜನೆ ಜಿಲ್ಲಾ ನಿರ್ದೇಶಕ ಲತಾ ಬಂಗೇರ, ಜಿಲ್ಲಾ ಎಂಐಎಸ್ ಎನ್.ಗಣಪತಿ, ಚಾಮರಾಜನಗರ ಕ್ಷೇತ್ರ ಯೋಜನಾಧಿಕಾರಿ ಹರೀಶ್‌ಕುಮಾರ್ ಶೆಟ್ಟಿ, ಪ್ರವೀಣ್, ಚಂದ್ರಶೇಖರ್, ದಿನೇಶ್, ಹನೂರು ಪ್ರವೀಣ್ ಇದ್ದರು.

ಚಿರತೆ ದಾಳಿ: ಜಾನುವಾರು ಬಲಿ

ಚಾಮರಾಜನಗರ, ಜೂ.10– ತಾಲೂಕಿನ ವಡ್ಗಲ್‌ಪುರ, ಅಮಚವಾಡಿಯಲ್ಲಿ ಚಿರತೆ



ದಾಳಿಗೆ ಜಾನುವಾರು ಬಲಿಯಾಗಿರುವ ಘಟನೆ ತಡವಾಗಿ ಬೆಳಕಿಗೆ ಬಂದಿದೆ.

ಗುರುವಾರ ಸಂಜೆ ವಡ್ಗಲ್‌ಪುರದ ನಿವಾಸಿ ನಾಗೇಂದ್ರಸ್ವಾಮಿ ಎಂಬುವರಿಗೆ ಸೇರಿದ ಹಸು ಹಾಗೂ ಶುಕ್ರವಾರ ಬೆಳಗ್ಗೆ ಅಮಚವಾಡಿ ಗ್ರಾಮದ ಬಂಗಾರಶೆಟ್ಟಿ ಎಂಬುವರ ಜಮೀನಿನಲ್ಲಿ ದಾಳಿ ನಡೆಸಿರುವ ಚಿರತೆ ಹಸುಗಳನ್ನು ಬಲಿ ಪಡೆದಿದೆ ಎಂದು ಅರಣ್ಯಾಧಿಕಾರಿಗಳು ತಿಳಿಸಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅರಣ್ಯಾಧಿ ಕಾರಿಗಳು ಪರಿಶೀಲನೆ ನಡೆಸಿ, ಚಿರತೆ ಸೆರೆಗೆ ಬೋನ್ ಇಟ್ಟು ಹಸು ಕಳೆದುಕೊಂಡ ರೈತರಿಗೆ ಪರಿಹಾರ ಕೊಡಿಸಲು ಕ್ರಮವಹಿಸಲಾಗಿದೆ ಎಂದು ತಿಳಿಸಿದರು.

ಈ ವೇಳೆ ಆರ್‌ಎಫ್‌ಓ ಉಮೇಶ್, ಡಿಆರ್‌ಎಫ್‌ಓ ಅಮರನಾಥ್, ಸಿಬ್ಬಂದಿಗಳಾದ ಗೌರಿಶಂಕರ್, ಮಂಜುನಾಥ್ ಉಪಸ್ಥಿತರಿದ್ದರು.

ಇಂದು ಉಸ್ತುವಾರಿ ಸಚಿವರ ಜಿಲ್ಲಾ ಪ್ರವಾಸ

ಚಾಮರಾಜನಗರ, ಜೂ.10– ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಜೂ.11ರಂದು ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ.

ಅಂದು ಮಧ್ಯಾಹ್ನ 12.30ಕ್ಕೆ ನಗರಕ್ಕೆ ಆಗಮಿಸುವ ಅವರು, ಶಕ್ತಿ ಯೋಜನೆ ಉದ್ಘಾಟಿಸುವರು. ಮಧ್ಯಾಹ್ನ 3 ಗಂಟೆಗೆ ಬೆಂಗಳೂರಿಗೆ ತೆರಳುವರು ಎಂದು ಪ್ರಕಟಣೆ ತಿಳಿಸಿದೆ.

ನಾಳೆ ಅಪ್ರೆಂಟಿಶಿಪ್ ಮೇಳ

ಚಾಮರಾಜನಗರ, ಜೂ.10– ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಯಿಂದ 2023ನೇ ಸಾಲಿನ ಪ್ರಧಾನಮಂತ್ರಿ ರಾಷ್ಟ್ರಮಟ್ಟದ ಶಿಶಿಕ್ಷು ಮೇಳವನ್ನು (ಅಪ್ರೆಂಟಿಶಿಪ್ ಮೇಳ) ಜೂ.12 ರಂದು ಬೆಳಗ್ಗೆ 9 ರಿಂದ ಸಂಜೆ 5 ರವರೆಗೆ ಚಾಮರಾಜನಗರ ಮರಿಯಾಲದ ಜೆಎಸ್‌ಎಸ್ ಐಟಿಐ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ. ಮೇಳದಲ್ಲಿ 15ಕ್ಕೂ ಹೆಚ್ಚು ಪ್ರತಿಷ್ಠಿತ ಕಂಪನಿಗಳು ಭಾಗವಹಿಸಲಿವೆ. 5 ರಿಂದ 12ನೇ ತರಗತಿ ತೇರ್ಗಡೆ ಹೊಂದಿದ್ದು, ಕೌಶಲ್ಯ ತರಬೇತಿ ಹೊಂದಿ ಪ್ರಮಾಣ ಪತ್ರ ಪಡೆದಿರುವ, ಐಟಿಐ ತೇರ್ಗಡೆಯಾದವರು, ಡಿಪ್ಲೋಮಾ, ಪದವೀಧರ ಅಭ್ಯರ್ಥಿಗಳು ಭಾಗವಹಿಸಬಹುದು ಎಂದು ನೋಡಲ್ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾಡಾನೆ ದಾಳಿ: ಬಾಳೆ ಫಸಲು ನಾಶ ಹಿನ್ನೆಲೆ

ಪರಿಶೀಲನೆಗೆ ಆಗಮಿಸಿದ್ದ ಸಿಬ್ಬಂದಿಗೆ ದಿಗ್ಬಂಧನ

ಯಳಂದೂರು, ಜೂ.10– ತಾಲೂಕಿನ ಯರಗಂಬಳ್ಳಿ ಗ್ರಾಮದಲ್ಲಿ ಕಾಡಾನೆ ದಾಳಿ ನಡೆಸಿ ಬಾಳೆ ಫಸಲನ್ನು ನಾಶಪಡಿಸಿದ್ದು, ಇದರಿಂದ ಆಕ್ರೋಶಗೊಂಡ ರೈತರು ಸ್ಥಳ ಪರಿಶೀಲನೆಗೆ ಆಗಮಿಸಿದ್ದ ಆರ್‌ಎಫ್‌ಓ ಹಾಗೂ ಅರಣ್ಯ ಇಲಾಖೆ ಸಿಬ್ಬಂದಿಗೆ ದಿಗ್ಬಂಧನ ಹಾಕಿದರು.

ಬಿಳಿಗಿರಿರಂಗನ ಬೆಟ್ಟದ ಹುಲಿ ರಕ್ಷಿತಾರಣ್ಯ ಪ್ರದೇಶದ ತಪ್ಪಲಿನಲ್ಲಿರುವ ಯರಗಂಬಳ್ಳಿ ಗ್ರಾಮದ ಜಮೀನುಗಳಿಗೆ ಪ್ರತಿನಿತ್ಯ ಕಾಡಾನೆ, ಕಾಡುಕುರಿ, ಕಾಡು ಹಂದಿ, ಜಿಂಕೆ, ಕಡವೆ ದಾಳಿ ನಡೆಸಿ ಫಸಲನ್ನು ನಾಶಪಡಿಸುತ್ತಿವೆ.

ಮಹದೇವಸ್ವಾಮಿ ಎಂಬ ರೈತನಿಗೆ ಸೇರಿದ ಒಂದೂವರೆ ಎಕರೆ ಜಮೀನಿಗೆ ಕಾಡಾನೆಗಳು ದಾಳಿ ಮಾಡಿ ನೇಂದ್ರ ತಳಿಯ ಬಾಳೆ ಗಿಡಗಳನ್ನು ತಿಂದು ನಾಶಪಡಿಸಿವೆ. ಈ ಹಿಂದೆ ಮಾರ್ಚ್‌ನಲ್ಲೂ ಇವರ ಜಮೀನಿಗೆ ಕಾಡಾನೆಗಳು ದಾಳಿ ನಡೆಸಿ 400ಕ್ಕೂ ಹೆಚ್ಚು ಗಿಡಗಳನ್ನು ನಾಶಪಡಿಸಿದ್ದವು. ಈ ಬಗ್ಗೆ ದೂರು ನೀಡಿದ್ದರೂ ಇನ್ನೂ ಪರಿಹಾರ ಸಿಕ್ಕಿಲ್ಲ. ಈಗ ಮತ್ತೆ ಆನೆಗಳ ಹಿಂಡು ಫಸಲನ್ನು ನಾಶ ಮಾಡಿದ್ದು, ಇದಕ್ಕೆ ಅರಣ್ಯ ಇಲಾಖೆ ನಿರ್ಲಕ್ಷ್ಯವೇ ಕಾರಣ ಎಂದು ಆಕ್ರೋಶ ವ್ಯಕ್ತಪಡಿಸಿದರು.



ಸೂಕ್ತ ಪರಿಹಾರಕ್ಕೆ ಕ್ರಮ: ಆರ್‌ಎಫ್‌ಓ ಲೋಕೇಶ್ ಮೂರ್ತಿ ಮಾತನಾಡಿ, 3 ಕಿಮೀ ವರೆಗೆ ರೈಲ್ವೆ ಕಂಬಿ ಬ್ಯಾರಿಕೇಡ್ ಹಾಕುವ ಪ್ರಕ್ರಿಯೆ ಈಗಾಗಲೇ ಆರಂಭಗೊಂಡಿದೆ. ರಾತ್ರಿ ಗಸ್ತು ತಿರುಗಲು ಸಿಬ್ಬಂದಿ ಕೊರತೆ ಇದ್ದು, ಈ ಬಗ್ಗೆ ಮೇಲಧಿಕಾರಿಗಳ ಗಮನಕ್ಕೆ ತರಲಾಗುವುದು. ಪರಿಹಾರ ನೀಡಲು ಶೀಘ್ರ ಕ್ರಮ ವಹಿಸಲಾಗುವುದು ಎಂದು ಭರವಸೆ ನೀಡಿದರು. ನಂತರ ರೈತರು ಪ್ರತಿಭಟನೆ ಕೈ ಬಿಟ್ಟರು.

ವಿಷಯ ತಿಳಿದು ಸ್ಥಳಕ್ಕೆ ಆರ್‌ಎಫ್‌ಓ ಲೋಕೇಶ್‌ಮೂರ್ತಿ ಮತ್ತು ಸಿಬ್ಬಂದಿ ಭೇಟಿ ನೀಡಿದರು. ಈ ವೇಳೆ ಆಕ್ರೋಶಗೊಂಡ ರೈತರು ದೂರಿನ ಸುರಿಮಳೆಗೈದರು. ಈ ಪ್ರದೇಶಗಳ ಸುತ್ತ ಹಾಕಿರುವ ಸೋಲಾರ್ ತಂತಿ ಬೇಲಿ ಕಿತ್ತು ಹೋಗಿದೆ. ಕಂದಕಗಳು ಮುಚ್ಚಿವೆ. ಇಲಾಖೆಯ ಸಿಬ್ಬಂದಿ ರಾತ್ರಿ ಗಸ್ತಿನ ಪಾಳಿಯನ್ನು ಸರಿಯಾಗಿ ನಿರ್ವಹಿಸುತ್ತಿಲ್ಲ. ಇದರಿಂದ ರೈತರ ಬೆಳೆ ನಾಶವಾಗುತ್ತಿದೆ. ಅಲ್ಲದೇ ನಷ್ಟಕ್ಕೊಳಗಾಗಿರುವ ರೈತರಿಗೆ ಸ್ಥಳದಲ್ಲೇ ಸೂಕ್ತ ಪರಿಹಾರ ನೀಡಬೇಕು ಎಂಬುದು ಸೇರಿದಂತೆ ಸಮಸ್ಯೆಗಳನ್ನು ಬಗೆಹರಿಸುವ ಬಗ್ಗೆ ಭರವಸೆ ನೀಡುವಂತೆ ಆಗ್ರಹಿಸಿ ಜೀಪ್ ತಡೆದು ದಿಗ್ಬಂಧನ ಹಾಕಿದರು.

ಈ ವೇಳೆ ರೈತರಾದ ಸಿದ್ದು, ನಾಗೇಗೌಡ, ಸಿದ್ದರಾಜು, ಕುಮಾರ, ಮಹೇಶಪ್ಪ ತ್ಯಾಗರಾಜು, ರವಿ, ಮಹೇಶ್, ವಿರೂಪಾಕ್ಷ ಸೇರಿದಂತೆ ಅನೇಕರಿದ್ದರು.

ನೇಣು ಬಿಗಿದ ಸ್ಥಿತಿಯಲ್ಲಿ ಗೃಹಿಣಿ ಶವ ಪತ್ತೆ

ಮೃತಳ ತಂದೆಯಿಂದ ಕೊಲೆ ಪ್ರಕರಣ ದಾಖಲು: ಪತಿ ಬಂಧನ

ಚಾಮರಾಜನಗರ, ಜೂ.10– ತಾಲೂಕಿನ ನಿಜಲಿಂಗನಪುರದಲ್ಲಿ ಗೃಹಿಣಿಯೊಬ್ಬರ ಶವ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದೆ.

ನಿಜಲಿಂಗನಪುರ ಗ್ರಾಮದ ಗೃಹಿಣಿ ಮಂಜುಳಾ (26) ಮೃತಪಟ್ಟವರು. ಆಕೆ ಪತಿ ನಾಗಮಲ್ಲಪ್ಪ ಅಲಿಯಾಸ್ ನಾಗಮಲ್ಲು (33) ಅವರನ್ನು ಚಾಮರಾಜನಗರ ಗ್ರಾಮಾಂತರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕುಡಿತದ ದಾಸನಾಗಿದ್ದ ನಾಗಮಲ್ಲಪ್ಪ ಮಂಜುಳಾರೊಂದಿಗೆ ಆಗಾಗ್ಗೆ ಜಗಳವಾಡುತ್ತಿದ್ದರು. ಇತ್ತೀಚೆಗೆ ಇವರಿಬ್ಬರ ನಡುವೆ ಜಗಳವಾಗಿದೆ. ಅದು ವಿಕೋಪಕ್ಕೆ ಹೋಗಿ ಈ ಘಟನೆ ನಡೆದಿದೆ ಎಂದು ಹೇಳಲಾಗಿದೆ. ಈ ದಂಪತಿಗೆ ಮೂರು ವರ್ಷದ ಮಗಳಿದ್ದಾಳೆ.

ಪ್ರಕರಣ ಸಂಬಂಧ ಮೃತಳ ತಂದೆ ಇದು ಆತ್ಮಹತ್ಯೆ ಅಲ್ಲ. ಕೊಲೆ ಎಂದು ಚಾಮರಾಜನಗರ ಗ್ರಾಮಾಂತರ ಠಾಣೆ ಪೊಲೀಸರು ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು ಸ್ಥಳಕ್ಕಾಗಮಿಸಿ ಪರಿಶೀಲನೆ ನಡೆಸಿ ಮೃತ ಮಂಜುಳಾ ಪತಿ ನಾಗಮಲ್ಲುನನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ವಿದ್ಯಾರ್ಥಿನಿಲಯ ಪ್ರವೇಶಕ್ಕೆ ಅರ್ಜಿ ಆಹ್ವಾನ

ಚಾಮರಾಜನಗರ, ಜೂ.10– ಪ್ರಸಕ್ತ ಸಾಲಿನ ಮೆಟ್ರಿಕ್ ಪೂರ್ವ ಬಾಲಕರ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯ ಪ್ರವೇಶಾತಿಗಾಗಿ(STATE HOSTEL PORTAL (SHP) ರಾಜ್ಯ ವಿದ್ಯಾರ್ಥಿ ನಿಲಯ ತಂತ್ರಾಂಶದ ಮೂಲಕ ಅರ್ಜಿ ಸಲ್ಲಿಸಲು ಪೋರ್ಟಲ್ ತೆರೆಯಲಾಗಿದ್ದು, ಚಾಮರಾಜನಗರ ತಾಲೂಕು ಸಮಾಜ ಕಲ್ಯಾಣ ಇಲಾಖಾ ವಿದ್ಯಾರ್ಥಿನಿಲಯಗಳಿಗೆ 5 ರಿಂದ 10ನೇ ತರಗತಿವರೆಗೆ ಹೊಸದಾಗಿ ಪ್ರವೇಶ ಪಡೆಯ ಬಯಸುವ ವಿದ್ಯಾರ್ಥಿಗಳು SATS ID ಯೊಂದಿಗೆ (STATE HOSTEL PORTEL (SHP) ರಾಜ್ಯ ವಿದ್ಯಾರ್ಥಿ ನಿಲಯ ಪೋರ್ಟಲ್‌ನಲ್ಲಿ ಆನ್‌ಲೈನ್‌ನಲ್ಲಿ ಜೂ.15ರೊಳಗೆ ಅರ್ಜಿ ಸಲ್ಲಿಸಲು ತಿಳಿಸಿದೆ.

ವಿದ್ಯಾರ್ಥಿನಿಲಯಕ್ಕಾಗಿ https://shp.karnataka.gov.in/ ವೆಬ್‌ಸೈಟ್‌ನ ಮೂಲಕ ಅರ್ಜಿ ಸಲ್ಲಿಸುವುದು. ಹೆಚ್ಚಿನ ಮಾಹಿತಿಗೆ ಸಹಾಯಕ ನಿರ್ದೇಶಕರು (ಗ್ರೇಡ್–1), ಸಮಾಜ ಕಲ್ಯಾಣ ಇಲಾಖೆ ಚಾಮರಾಜನಗರ ತಾಲೂಕು ಕಚೇರಿ ಸಂಪರ್ಕಿಸುವುದು. ದೂ.08226–223143.

ಮೂರನೇ ಪುಟದಿಂದ

ಆಡಳಿತ ವ್ಯವಸ್ಥೆಯೂ ಬದಲಾಗಬೇಕು

ಬಂದಿದೆ. ಜನ ಬದಲಾವಣೆ ಬಯಸಿದ್ದಾರೆ. ಈ ಮಾತನ್ನು ಅಂಡರ್‌ಲೈನ್ ಮಾಡಿಟ್ಟುಕೊಳ್ಳಿ. ಸರ್ಕಾರದ ಜೊತೆಗೆ ಆಡಳಿತ ವ್ಯವಸ್ಥೆಯೂ ಬದಲಾಗಬೇಕು ಎನ್ನುವುದು ಜನರ ನಿರೀಕ್ಷೆಯಾಗಿದೆ. ಇದನ್ನು ಗಮನದಲ್ಲಿಟ್ಟುಕೊಂಡು ಅಧಿಕಾರಿಗಳು ಕೆಲಸ ಮಾಡಬೇಕು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರೇ ಮಾಲೀಕರು. ಜನಪ್ರತಿನಿಧಿಗಳು ಹಾಗೂ ಸರ್ಕಾರಿ ಅಧಿಕಾರಿಗಳಿರುವುದು ಜನರ ಕೆಲಸ ಮಾಡುವುದಕ್ಕಾಗಿಯೇ ಇರುವುದು. ನಿಮ್ಮಿಂದ ಕಾರ್ಯ ಬದ್ಧತೆಯನ್ನು ಸರ್ಕಾರ ಬಯಸುತ್ತದೆ. ನಿರ್ಲಕ್ಷಿಸಿದ ಅಧಿಕಾರಿಗಳನ್ನು ಬರೀ ವರ್ಗಾವಣೆ ಮಾಡುವುದಿಲ್ಲ ಮುಲಾಜಿಲ್ಲದೆ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಖಡಕ್ ಎಚ್ಚರಿಕೆ ನೀಡಿದರು.

ಕ್ಷೇತ್ರಕ್ಕಿಳಿದು ಕೆಲಸ ಮಾಡಿ: ಬಹಳಷ್ಟು ಅಧಿಕಾರಿಗಳು ಸಿದ್ಧತೆ ಮಾಡಿಕೊಳ್ಳದೆ ಕೆಡಿಪಿ ಸಭೆಗೆ ಬರುತ್ತಾರೆ. ಇಲಾಖೆ ಅಧಿಕಾರಿಗಳೊಂದಿಗೆ ಪೂರ್ವಭಾವಿ ಸಭೆ ಮಾಡಿ, ಮಾಹಿತಿ ಇಟ್ಟುಕೊಂಡಿರುವುದಿಲ್ಲ. ಸಚಿವರು, ಶಾಸಕರು ಸಭೆಯಲ್ಲಿ ಏನೆಲ್ಲಾ ಪ್ರಶ್ನಿಸಬಹುದು ಎಂದು ಊಹಿಸಿಕೊಂಡು ಸಿದ್ಧರಾಗಿರಬೇಕು. ಇಲಾಖೆ ಮಾಹಿತಿ ನಿಮ್ಮ ಸ್ಮರಣೆಯಲ್ಲಿರಬೇಕು. ಆದರೆ ಅನೇಕ ಅಧಿಕಾರಿಗಳು ಸಭೆಯಲ್ಲಿ ಯಾವ ಪ್ರಶ್ನೆಗೂ ಸರಿಯಾಗಿ ಉತ್ತರಿಸುವುದಿಲ್ಲ. ನೀವು ಕ್ಷೇತ್ರಕ್ಕಿಳಿದು ಕಾರ್ಯ ನಿರ್ವಹಿಸದಿರುವುದೇ ಇದಕ್ಕೆ ಪ್ರಮುಖ ಕಾರಣ. ಬಹುತೇಕ ಅಧಿಕಾರಿಗಳು ಕಚೇರಿಯಲ್ಲೇ ಕುಳಿತು ಕಾಲಕಳೆಯುತ್ತಾರೆ. ಜಿಲ್ಲಾಧಿಕಾರಿಗಳು ತಹಶೀಲ್ದಾರ್ ಕಚೇರಿಗಳಿಗೆ, ಐಜಿ, ಎಸ್ಪಿಗಳು ಪೊಲೀಸ್ ಠಾಣೆಗಳಿಗೆ, ಜಿಪಂ ಸಿಇಓಗಳು ಇಓ ಕಚೇರಿಗಳಿಗೆ ಭೇಟಿ ನೀಡಿ, ಅಲ್ಲಿನ ಕಾರ್ಯ ವೈಖರಿಯನ್ನು ಪರಾಮರ್ಶಿಸಬೇಕು. ಗ್ರಾಪಂ ಪಿಡಿಓಗಳು ಅಧ್ಯಕ್ಷರ ಮಾತನ್ನೇ ಕೇಳುವುದಿಲ್ಲ ಎಂಬ ದೂರು ವ್ಯಾಪಕವಾಗಿದೆ. ವಾರ್ನಿಂಗ್ ವರ್ಡ್ಸ್ ಟು ಯು(ನಿಮಗೆ ಎಚ್ಚರಿಕೆ ಮಾತು), ಪ್ರಾದೇಶಿಕ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಕಟ್ಟುನಿಟ್ಟಾಗಿ ನಡೆದುಕೊಳ್ಳಬೇಕು ಎಂದು ಸೂಚನೆ ನೀಡಿದರು.

ಸಿಪಿಐಗೆ ಗೊತ್ತಿರಲ್ವಾ?: ಸಿಪಿಐ(ವೃತ್ತ ನಿರೀಕ್ಷಕ)ಗಳಿಗೆ ತಮ್ಮ ಕಾರ್ಯವ್ಯಾಪ್ತಿಯ ಆಗುಹೋಗುಗಳ ಬಗ್ಗೆ ಗೊತ್ತಿರುತ್ತದೆ. ನಿಮಗೆ ಗೊತ್ತಿಲ್ಲದೆ ಕಾನೂನುಬಾಹಿರ ಚಟುವಟಿಕೆಗಳು ನಡೆಯಲು ಸಾಧ್ಯವೇ? ಕ್ಲಬ್ ನಡೆಸಲು ಸಾಧ್ಯವೇ? ರೌಡಿಸಂ ನಡೆಯಲು ಸಾಧ್ಯವೇ? ರೌಡಿಗಳು, ಕಳ್ಳರು ಯಾರೆಂದು ಗೊತ್ತಿರುತ್ತದೆ. ಆದರೂ ಅಪರಾಧ ಕೃತ್ಯಗಳು ಏಕೆ ನಡೆಯುತ್ತವೆ. ಕಾರಣ ನಿಮ್ಮ ಮೇಲೆ ಭಯ ಇಲ್ಲ. ಆದ್ದರಿಂದ ಸಿಪಿಐಗಳು ಪದೇ ಪದೆ ಠಾಣೆಗಳಿಗೆ ಹೋಗಿ ಪರಿಶೀಲನೆ ಮಾಡಿ. ಐಜಿ, ಎಸ್‌ಪಿ, ಡಿವೈಎಸ್ಪಿ, ಸಿಪಿಐಗಳನ್ನು ನಿಯೋಜಿಸಿರುವುದು ಏಕೆ ಎನ್ನುವುದನ್ನು ಗಮನದಲ್ಲಿಟ್ಟುಕೊಂಡು ಬದ್ಧತೆಯಿಂದ ಕಾರ್ಯ ನಿರ್ವಹಿಸಬೇಕು. ತಹಶೀಲ್ದಾರ್ ಕಚೇರಿಗಳಲ್ಲಿ ರೈತರಿಗೆ ತುಂಬಾ ಕಿರುಕುಳವಾಗುತ್ತಿದೆ ಎಂಬ ದೂರಿದೆ. ಜಿಲ್ಲಾಧಿಕಾರಿಗಳು ತಹಶೀಲ್ದಾರ್ ಕಚೇರಿಗಳಿಗೆ ಅನಿರೀಕ್ಷಿತ ಭೇಟಿ ನೀಡಿ, ಪರಾಮರ್ಶೆ ಮಾಡಿ ಸೂಕ್ತ ಕ್ರಮ ವಹಿಸಬೇಕು ಎಂದು ನಿರ್ದೇಶನ ನೀಡಿದರು.

ನಿಮ್ಮ ದರ್ಪ ನಡೆಯೋಲ್ಲ: ಆರ್‌ಟಿಓಗಳಲ್ಲಿ ಮಾತ್ರ ಏಜೆಂಟ್‌ಗಳಿದ್ದರು. ಈಗ ಬಹುತೇಕ ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ಕೆಲ ಅಧಿಕಾರಿಗಳು ಏಜೆಂಟ್‌ಗಳನ್ನು ಇಟ್ಟುಕೊಂಡಿದ್ದಾರೆ. ಜನರಿಗೆ ಬಹಳ ಕಿರುಕುಳವಾಗುತ್ತಿದೆ. ಭ್ರಷ್ಟಾಚಾರ ನಡೆಯುತ್ತಿದೆ. ಜನರೊಂದಿಗೆ ಅಧಿಕಾರಿ ಹಾಗೂ ಸಿಬ್ಬಂದಿ ಸೌಜನ್ಯದಿಂದ ವರ್ತಿಸುವುದಿಲ್ಲ. ದಯವಿಟ್ಟು ಸರ್ಕಾರಿ ಕಚೇರಿಗಳಲ್ಲಿ ಮಧ್ಯವರ್ತಿಗಳಿಗೆ ಬ್ರೇಕ್ ಹಾಕಿ, ಭ್ರಷ್ಟಾಚಾರ ತಡೆಯಲು ಹೊಸ ವ್ಯವಸ್ಥೆ ರೂಪಿಸಬೇಕೆಂದು ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ ಮನವಿ ಮಾಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ನಿಮ್ಮ ದರ್ಪ ಇನ್ಮುಂದೆ ನಡೆಯೋದಿಲ್ಲ. ಅದಕ್ಕೆ ಅವಕಾಶವೂ ಇಲ್ಲ ಎಂದು ಎಚ್ಚರಿಸಿದರು.

ಚುನಾವಣೆಯಲ್ಲಿ ಜನ, ಭ್ರಷ್ಟಾಚಾರದ ವಿರುದ್ಧವೂ ಮತ ಹಾಕಿದ್ದಾರೆ. ನಾನು ರಾಜ್ಯಮಟ್ಟದ ಕೆಡಿಪಿ ಮೀಟಿಂಗ್ ಮಾಡುತ್ತೇನೆ. ನಮ್ಮ ಸರ್ಕಾರ ಭ್ರಷ್ಟಾಚಾರದ ವಿರೋಧಿ. ಶಿಸ್ತಿನಿಂದ ಕಾರ್ಯ ನಿರ್ವಹಿಸಬೇಕೆಂದು ಎಚ್ಚರಿಕೆ ನೀಡುತ್ತೇನೆ. ನಂತರವೂ ಮುಂದುವರೆದರೆ ಬಿ ಕೇರ್ ಫುಲ್(ಜಾಗೃತವಾಗಿರಿ). ಅಧಿಕಾರಿಗಳು ಸಾರ್ವಜನಿಕರೊಂದಿಗೆ ಸೌಜನ್ಯದಿಂದ ವರ್ತಿಸುವುದನ್ನು ರೂಢಿಸಿಕೊಳ್ಳಬೇಕು. ಯಾವುದೇ ಕಚೇರಿಗಳಲ್ಲಿ ಮಧ್ಯವರ್ತಿಗಳು ಇರಕೂಡದು. ಮಧ್ಯವರ್ತಿಗಳ ಮೂಲಕ ಬಂದರೆ ಮಾತ್ರ ಕೆಲಸವಾಗುತ್ತದೆ, ರೈತರು ನೇರವಾಗಿ ಹೋದರೆ ಏನೂ ಆಗುವುದಿಲ್ಲ ಎನ್ನುವ ಧೋರಣೆ ಇರಕೂಡದು. ಯಾರಾದರೂ ಮಧ್ಯವರ್ತಿಗಳಿಗೆ ಅನುವು ಮಾಡಿಕೊಟ್ಟರೆ ಅವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದರು.

ಕೆಡಿಪಿ ಸಭೆ ಕಡ್ಡಾಯ: ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಮೂರು ತಿಂಗಳಿಗೊಮ್ಮೆ ಕಡ್ಡಾಯವಾಗಿ ಕೆಡಿಪಿ ಸಭೆ ನಡೆಸಬೇಕು. ಹಾಗೆಯೇ ಜಿಲ್ಲಾಧಿಕಾರಿ ಹಾಗೂ ಜಿಪಂ ಸಿಇಓ ತಾಲೂಕು ಮಟ್ಟದಲ್ಲಿ ಕೆಸಿಪಿ ಸಭೆ ನಡೆಸಬೇಕು. ಜನಸಂಪರ್ಕ ಸಭೆಗಳನ್ನೂ ತಪ್ಪದೇ ಮಾಡಬೇಕು. ಇಲ್ಲವಾದರೆ ಅಧಿಕಾರಿಗಳು ಹೇಳಿದ್ದೇ ವೇದವಾಕ್ಯ ಎನ್ನುವಂತಾಗುತ್ತದೆ. ಸಭೆಯ ಹಿಂದಿನ ದಿನ ಅಥವಾ ಸಭೆಯಲ್ಲಿ ಜನಪ್ರತಿನಿಧಿಗಳಿಗೆ ಮಾಹಿತಿ ನೀಡಬಾರದು. ಮುಂಚಿತವಾಗಿಯೇ ಅಜೆಂಡಾ ನೀಡಬೇಕು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಕೆಡಿಪಿ ಸಭೆ ನಡೆಸಿದ ನಂತರ ನಾನು ಮತ್ತೊಂದು ಸಭೆ ನಡೆಸುತ್ತೇನೆ ಎಂದು ತಿಳಿಸಿದರು.

ಗ್ಯಾರಂಟಿಗಳ ಫಲಾನುಭವಿಗಳಿಗೆ ತಲುಪಿಸಿ: ನಮ್ಮ ಬಡವರು ಮತ್ತು ಮಧ್ಯಮ ವರ್ಗದವರು ಬಹಳ ಸಂಕಷ್ಟದಲ್ಲಿದ್ದಾರೆ. ಅವರ ಸಂಕಷ್ಟ ಕಡಿಮೆ ಆಗಲಿ ಎಂದು 5 ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿದ್ದೇವೆ. ಆದ್ದರಿಂದ ಅತ್ಯಂತ ಕಾಳಜಿ ವಹಿಸಿ ಹೆಚ್ಚಿನ ಕಾರ್ಯಕ್ಷಮತೆಯಿಂದ ಗ್ಯಾರಂಟಿ ಯೋಜನೆಗಳನ್ನು ಜನರಿಗೆ ತಲುಪಿಸಿ ಎಂದು ಖಡಕ್ ಸೂಚನೆ ನೀಡಿದ ಸಿಎಂ, ಜೂ.11 ರಿಂದ ಮಹಿಳೆಯರಿಗೆ ಉಚಿತ ಬಸ್ ಸೌಲಭ್ಯ ಕಲ್ಪಿಸಲು ಜಿಲ್ಲೆಯಲ್ಲಿ ಸಿದ್ಧತೆ ಮಾಡಿಕೊಂಡಿರುವ ಬಗ್ಗೆ ಮಾಹಿತಿ ಪಡೆದರು.

ಸಭೆಯಲ್ಲಿ ಮೇಯರ್ ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವರೂ ಆದ ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಪಶುಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ.ವೆಂಕಟೇಶ್, ಶಾಸಕರಾದ ಜಿ.ಟಿ. ದೇವೇಗೌಡ, ತನ್ವೀರ್‌ಸೇಠ್, ಜಿ.ಡಿ. ಹರೀಶ್‌ಗೌಡ, ಟಿ.ಎಸ್. ಶ್ರೀವತ್ಸ, ದರ್ಶನ್ ಧ್ರುವನಾರಾಯಣ್, ಅನಿಲ್ ಚಿಕ್ಕಮಾದು, ಡಿ.ರವಿಶಂಕರ್, ಕೆ.ಹರೀಶ್‌ಗೌಡ, ವಿಧಾನ ಪರಿಷತ್ ಸದಸ್ಯರಾದ ಡಾ.ಡಿ.ತಿಮ್ಮಯ್ಯ, ಮರಿತಿಬ್ಬೇಗೌಡ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ನೀರಿಗೆ ಸಮಸ್ಯೆಯಾಗದಂತೆ ಕ್ರಮ ಕೈಗೊಳ್ಳಿ

ನೀರಿನ ಸಮಸ್ಯೆ ಉಂಟಾಗಬಾರದು. ರಾಜ್ಯದ 6 ಜಿಲ್ಲೆಗಳಲ್ಲಿ ಈಗಾಗಲೇ ಸಮಸ್ಯೆ ಉಂಟಾಗಿದೆ. ಕೆಲವೆಡೆ ಕಲುಷಿತ ನೀರು ಸೇವನೆಯಿಂದ ಜನ ಸಾವನ್ನಪ್ಪಿದ್ದಾರೆ. ಅಂತಹ ಘಟನೆ ಇಲ್ಲಿ ಸಂಭವಿಸಬಾರದು ಎಂದು ಆಶಿಸುತ್ತೇನೆ ಎಂದರು.

ಕಟಾವಿಗೆ ಬಂದಿರುವ ಬೆಳೆ ಒಣಗದಂತೆ ಪರಿಸ್ಥಿತಿ ನಿಭಾಯಿಸಬೇಕು. ರೈತರಿಗೆ ತೊಂದರೆಯಾಗದಂತೆ ನೋಡಿಕೊಳ್ಳಬೇಕು. ಹೇಮಾವತಿ ಜಲಾಶಯದಲ್ಲಿ 15 ಟಿಎಂಸಿ ನೀರಿದೆ ಎಂದಿದ್ದೀರಿ. ಆ ಜಿಲ್ಲೆಗೆ ಅಗತ್ಯಕ್ಕಿಂತ ಹೆಚ್ಚುವರಿ ನೀರನ್ನು ಪಡೆಯಲು ಕ್ರಮ ವಹಿಸಿ. ಏನಾ ದರೂ ಸಮಸ್ಯೆಯಿದ್ದರೆ ಜಿಲ್ಲಾ ಉಸ್ತುವಾರಿ ಸಚಿವರ ಗಮನಕ್ಕೆ ತಂದರೆ ಅವರು ನೀರಾವರಿ ಇಲಾಖೆ ಹಾಗೂ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳೊಂದಿಗೆ ಮಾತನಾಡುತ್ತಾರೆ ಎಂದು ತಿಳಿಸಿದರು.

ರೈತರಿಗೆ ಸಮಸ್ಯೆಯಾಗಬಾರದು: ಮುಂಗಾರು ಮಳೆ ಆರಂಭವಾಗುತ್ತಿದ್ದಂತೆ ಕೃಷಿ ಚಟುವಟಿಕೆಗಳು ಚುರುಕಾಗುತ್ತವೆ. ರೈತರಿಗೆ ಯಾವುದೇ ರೀತಿ ತೊಂದರೆಯಾಗದಂತೆ ಎಲ್ಲಾ ರೀತಿಯ ಸಿದ್ಧತೆ ಮಾಡಿಕೊಳ್ಳಬೇಕು. ಗೊಬ್ಬರ, ಬಿತ್ತನೆ ಬೀಜ, ಕೀಟನಾಶಕದ ಬೇಡಿಕೆ ಪ್ರಮಾಣ ತಿಳಿಸಿದರೆ ಸರ್ಕಾರ ಪೂರೈಸಲಿದೆ. ವಿತರಣೆಯಲ್ಲಿ ವಿಳಂಬವಾಗಬಾರದು, ಅನ್ಯಾಯವಾಗಬಾರದು. ರೈತರು ಅಲೆದಾಡುವಂತಹ ಪರಿಸ್ಥಿತಿ ಸೃಷ್ಟಿಸಬಾರದು. ಅಗತ್ಯತೆಯನ್ನು ಪೂರೈಸುವುದು ಕೃಷಿ ಇಲಾಖೆ ಅಧಿಕಾರಿಗಳ ಆದ್ಯ ಕರ್ತವ್ಯ. ಬೇಡಿಕೆಯಷ್ಟು ಬಿತ್ತನೆ ಬೀಜ ಹಾಗೂ ಗೊಬ್ಬರ ಇದೆ ಎಂದಿದ್ದೀರಿ. ದಾಸ್ತಾನು ಇದ್ದರೂ ರೈತರಿಗೆ ಸಿಗದಿದ್ದರೆ ನಿಮ್ಮ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದರು.

ಬಿತ್ತನೆ ಬೀಜದ ಗುಣಮಟ್ಟದ ಬಗ್ಗೆ ಕೃಷಿ ಇಲಾಖೆ ಅಧಿಕಾರಿಗಳು ಖಾತ್ರಿಪಡಿಸಬೇಕು. ಒಂದು ವೇಳೆ ಯಾವೊಬ್ಬ ರೈತರ ಬೆಳೆ ಕಳಪೆ ಬೀಜದಿಂದ ನಷ್ಟವಾದರೆ ಅದಕ್ಕೆ ಕೃಷಿ ಇಲಾಖೆಯ ಜಂಟಿ ನಿರ್ದೇಶಕರನ್ನೇ ಹೊಣೆಗಾರರನ್ನಾಗಿ ಮಾಡಿ ಕ್ರಮ ಜರುಗಿಸಲಾಗುವುದು. ಬಿತ್ತಿದ ಬೀಜ ಶೇಕಡಾ ನೂರರಷ್ಟು ಬೆಳೆ ಬರಬೇಕು. ರೈತರು ಕೇಳುವ ಕಂಪನಿಯ ಬೀಜಗಳನ್ನು ಪೂರೈಸಬೇಕು. ಹಿಂದಿನ ಸಾಲಿನಲ್ಲಿ ಮಳೆ ಹಾನಿಯಿಂದ ಬೆಳೆ ನಷ್ಟವಾದ ರೈತರಿಗೆ ಪರಿಹಾರ ಸಂಪೂರ್ಣವಾಗಿ ಪಾವತಿಯಾಗಲು ಕ್ರಮ ವಹಿಸಬೇಕೆಂದು ತಿಳಿಸಿದರು. ಇದಕ್ಕೂ ಮುನ್ನ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಹಿಂದಿನ ಸಾಲಿನಲ್ಲಿ 3868 ರೈತರ 1267 ಹೆಕ್ಟೇರ್ ಬೆಳೆಹಾನಿಗೆ 1.14 ಕೋಟಿ ರೂ. ಪರಿಹಾರ ನೀಡಲಾಗಿದೆ. ಶಾಸಕರಾದ ಜಿ.ಟಿ.ದೇವೇಗೌಡರು ಹೇಳಿದಂತೆ ತಾಂತ್ರಿಕ ಸಮಸ್ಯೆಯಿಂದ ಕೆಲವರಿಗೆ ಪರಿಹಾರ ಸಿಗದಿದ್ದರೆ ಆ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ಸಾರಿಗೆ ಸಂಸ್ಥೆ ವಿಭಾಗಗಳ ವಿಲೀನ; 2 ಡಿಪೋ ಬಂದ್

ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡರು, ಮುಖ್ಯಮಂತ್ರಿ ಸಿದ್ದ ರಾಮಯ್ಯನವರ ಗಮನಕ್ಕೆ ತಂದರು. ಆಗ ಮುಖ್ಯಮಂತ್ರಿಗಳು, ವಿಭಾಗಗಳ ವಿಲೀನದಿಂದ ಅನುಕೂಲವಾಗಿದೆಯೋ ಅಥವಾ ಸಮಸ್ಯೆಯಾಗಿದೆಯೋ ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳಿಂದ ಸ್ಪಷ್ಟನೆ ಕೇಳಿದರು. ಇದಕ್ಕೆ ಪ್ರತಿಕ್ರಿಯಿಸಿದ ಪ್ರಭಾರ ವಿಭಾಗೀಯ ನಿಯಂತ್ರಣಾಧಿಕಾರಿ ಮರೀಗೌಡ, ವಿಭಾಗಗಳ ವಿಲೀನದಿಂದ ಖಂಡಿತವಾಗಿ ತುಂಬಾ ಅನಾನುಕೂಲವಾಗಿದೆ. ಅಧಿಕಾರಿಗಳ ಸಂಖ್ಯೆ ಕಡಿಮೆ ಮಾಡಬಹುದು, ವೆಚ್ಚ ಕಡಿಮೆ ಮಾಡಬಹುದು ಎಂಬ ಉದ್ದೇಶದಿಂದ ವಿಲೀನಗೊಳಿಸಿದರು. ಆದರೆ ಹಾಗಾಗಲಿಲ್ಲ. ಬನ್ನಿಮಂಟಪದ 2 ಡಿಪೋಗಳು ಮುಚ್ಚಿದವು. ಸಾಕಷ್ಟು ಸಂಖ್ಯೆಯ ಸಿಬ್ಬಂದಿ ನಿವೃತ್ತಿಯಾಗುತ್ತಿದ್ದಾರೆ ಹಾಗೂ 4 ವರ್ಷಗಳಿಂದ ನೇಮಕಾತಿಯಾಗದ ಕಾರಣ ಸಿಬ್ಬಂದಿ ಕೊರತೆಯಾಗಿದೆ ಎಂದರು. ಆಗ ಸಿದ್ದರಾಮಯ್ಯನವರು ಈ ಸಂಬಂಧ ಸಂಸ್ಥೆಯ ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಸೂಕ್ತ ಕ್ರಮ ನಿರ್ಧಾರ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಎರಡು ದಿನದ 'ಮೈ ಗ್ರೀನ್' ವಸ್ತು ಪ್ರದರ್ಶನಕ್ಕೆ ಚಾಲನೆ

ಪರಿಸರ ಸ್ನೇಹಿ ಕಟ್ಟಡ ಸಾಮಗ್ರಿ, ಜೀವನಶೈಲಿ ವಸ್ತುಗಳು ಇಲ್ಲಿ ಲಭ್ಯ



ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಲ್ಲಿ ಹಮ್ಮಿಕೊಂಡಿರುವ 'ಮೈ ಗ್ರೀನ್ 2023' ವಸ್ತು ಪ್ರದರ್ಶನಕ್ಕೆ ಶನಿವಾರ ಬಿಎಐ ಕರ್ನಾಟಕ ಘಟಕದ ರಾಜ್ಯಾಧ್ಯಕ್ಷ ಶ್ರೀನಿವಾಸರೆಡ್ಡಿ ಚಾಲನೆ ನೀಡಿದರು.

ಮೈಸೂರು,ಜೂ.10(ಪಿಎಂ)– ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ (ಬಿಎಐ) ಮೈಸೂರು ಕೇಂದ್ರ ಹಾಗೂ ಮೈಸೂರು ಬಿಲ್ಡರ್ಸ್ ಚಾರಿಟಬಲ್ ಟ್ರಸ್ಟ್ (ಎಂಬಿಸಿಟಿ) ಜಂಟಿ ಆಶ್ರಯದಲ್ಲಿ ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಲ್ಲಿ 'ಮೈ ಗ್ರೀನ್ 2023' ಶೀರ್ಷಿಕೆಯಡಿ ಹಮ್ಮಿಕೊಂಡಿರುವ ಪರಿಸರ ಸ್ನೇಹಿ ಕಟ್ಟಡ ನಿರ್ಮಾಣ ಸಾಮಗ್ರಿಗಳು ಮತ್ತು ಜೀವನಶೈಲಿಯ ಪ್ರತಿನಿತ್ಯ ಬಳಕೆಯ ಪರಿಸರ ಸ್ನೇಹಿ ಸಾಮಗ್ರಿಗಳ ವಸ್ತು ಪ್ರದರ್ಶನಕ್ಕೆ ಶನಿವಾರ ಚಾಲನೆ ದೊರೆಯಿತು.

ಬಿಎಐ ಮೈಸೂರು ಕೇಂದ್ರ ಹಾಗೂ ಎಂಬಿಸಿಟಿ ಜಂಟಿ ಆಶ್ರಯದಲ್ಲಿ ವಿಶ್ವ ಪರಿಸರ ದಿನಾಚರಣೆ (ಪ್ರತಿ ವರ್ಷ ಜೂ.5) ಪ್ರಯುಕ್ತ ಪ್ರತಿ ವರ್ಷದಂತೆ ಈ ಬಾರಿಯೂ ಜೂನ್ ತಿಂಗಳಿಡೀ ಪರಿಸರ ಮಾಸಾಚರಣೆ ಆರಂಭಗೊಂಡಿದ್ದು, ಅದರ ಮುಂದುವರೆದ ಭಾಗವಾಗಿ ಮೈ ಗ್ರೀನ್ ವಸ್ತು ಪ್ರದರ್ಶನ ಎರಡು ದಿನಗಳ ಕಾಲ ನಡೆಯಲಿದೆ.

ವಸ್ತು ಪ್ರದರ್ಶನದಲ್ಲಿ ವಹಿವಾಟಿಗೂ ಅವಕಾಶವಿದ್ದು, ಪರಿಸರ ಸ್ನೇಹಿ ಕಟ್ಟಡ ನಿರ್ಮಾಣ ಸಾಮಗ್ರಿಗಳು, ನವೀಕರಿಸಬಹುದಾದ ಉತ್ಪನ್ನಗಳು, ತಂತ್ರಜ್ಞಾನ, ಸಾವಯವ ಆಹಾರ ಪದಾರ್ಥಗಳು ಸೇರಿದಂತೆ ಜೀವನಶೈಲಿಯ ಉತ್ಪನ್ನಗಳು 20ಕ್ಕೂ ಹೆಚ್ಚು ಮಳಿಗೆಗಳಲ್ಲಿ ಲಭ್ಯವಿವೆ. ಬೆಳಗ್ಗೆ 10ರಿಂದ ರಾತ್ರಿ 8.30ರವರೆಗೆ ಪ್ರದರ್ಶನ ಇರಲಿದೆ ಸಾರ್ವಜನಿಕರಿಗೆ ಪ್ರವೇಶ ಉಚಿತವಿದೆ.

ಪ್ರದರ್ಶನದ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದ ಹಸಿರು ಕಟ್ಟಡ ಮತ್ತು ಪರಿಸರ ಸ್ನೇಹಿ ಸಾಮಗ್ರಿ ಮತ್ತು ವಿಧಾನ ಸಮಿತಿ ಅಧ್ಯಕ್ಷ ಕೆ.ಸುಬ್ರಮಣಿ, ಬಿಎಐ ಮೈಸೂರು ಕೇಂದ್ರದ ವತಿಯಿಂದ ಹಮ್ಮಿಕೊಂಡಿರುವ ಪರಿಸರ ಮಾಸಾಚರಣೆಯ ಪ್ರಯುಕ್ತದ ಮೈ ಗ್ರೀನ್ ವಸ್ತು ಪ್ರದರ್ಶನ ಸಾರ್ವಜನಿಕರಲ್ಲಿ ಪರಿಸರ ಪೂರಕ ಮನೋಭಾವ ಬೆಳೆಸಲು ಸಹಕಾರಿಯಾಗಲಿದೆ. ಕಟ್ಟಡ ನಿರ್ಮಾಣ ಮತ್ತು ಜೀವನಶೈಲಿಯಲ್ಲಿ ಪರಿಸರಕ್ಕೆ ಪೂರಕವಾಗಿ ನಡೆದುಕೊಳ್ಳುವ ಬಗ್ಗೆ ಅರಿವು ಮೂಡಲಿದೆ ಎಂದು ಹೇಳಿದರು.

ಬಿಎಐ ಕರ್ನಾಟಕ ಘಟಕದ ರಾಜ್ಯಾಧ್ಯಕ್ಷ ಶ್ರೀನಿವಾಸರೆಡ್ಡಿ ಪ್ರದರ್ಶನ ಉದ್ಘಾಟಿಸಿ ಮಾತನಾಡಿದರು. ಪ್ರಸ್ತುತ ಹೊರಹೊಮ್ಮುತ್ತಿರುವ ಸಮಸ್ಯೆಗಳಿಗೆ ವಿಜ್ಞಾನದ ಪ್ರಯೋಜನಗಳನ್ನು ಬಳಸಿಕೊಂಡು ಪರಿಹಾರ ಕಂಡುಕೊಳ್ಳಬೇಕಿದೆ. ಈ ನಿಟ್ಟಿನಲ್ಲಿ ಸಾಕಷ್ಟು ಪ್ರಯತ್ನಗಳು ನಡೆಯುತ್ತಿವೆ. ಜೊತೆಗೆ ಸರ್ಕಾರ, ಸಂಬಂಧಿಸಿದ ಕಂಪನಿಗಳು ಕ್ರಮಗಳನ್ನು ತ್ವರಿತಗೊಳಿಸುವುದು ಅಗತ್ಯ ಎಂದು ಹೇಳಿದರು.

ಬಿಎಐ ಮೈಸೂರು ಕೇಂದ್ರದ ಅಧ್ಯಕ್ಷ ನಾಗರಾಜ್ ವಿ.ಭೈರಿ ಮಾತನಾಡಿ, ಪರಿಸರ ಮಾಸಾಚರಣೆ ಬಿಎಐ ಮೈಸೂರು ಘಟಕದ ಗೌರವ ಹೆಚ್ಚಿಸಿದೆ. ಜೊತೆಗೆ ಕಳೆದ ವರ್ಷದಿಂದ ಪರಿಸರ ಮಾಸಾಚರಣೆಯೂ ನಮ್ಮ ಪ್ರಮುಖ ಕಾರ್ಯಕ್ರಮ ಎಂದು ಘೋಷಣೆ ಮಾಡಿದ್ದೇವೆ. ಈ ಬಾರಿ ಪರಿಸರ ಮಾಸಾಚರಣೆಯಲ್ಲಿ 17 ಕಾರ್ಯಕ್ರಮ ಮಾಡುತ್ತಿದ್ದೇವೆ. ಅದರಲ್ಲಿ ಮೈ ಗ್ರೀನ್ ಪ್ರದರ್ಶನವೂ ಒಂದಾಗಿದೆ ಎಂದರು.

ಅಂತೆಯೇ ಮೈ ಗ್ರೀನ್ ವಸ್ತು ಪ್ರದರ್ಶನವೂ ದೊಡ್ಡ ಮಟ್ಟದಲ್ಲಿ ಬೆಳೆಯಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಬಿಎಐ ಮೈಸೂರು ಕೇಂದ್ರದ ಕಾರ್ಯದರ್ಶಿ ಕೆ.ಎಸ್.ಬಾಲಾಜಿ, ಉಪಾಧ್ಯಕ್ಷ ವಿ.ಶ್ರೀನಾಥ್, ಪರಿಸರ ಮಾಸಾಚರಣೆ ಸಂಘಟನಾ ಸಮಿತಿ ಅಧ್ಯಕ್ಷ ಎ.ಎಸ್.ಯೋಗಾನರಸಿಂಹ, ಕಾರ್ಯದರ್ಶಿ ವಿ.ಗುರುದತ್ ಮತ್ತಿತರರು ಹಾಜರಿದ್ದರು.

ಪ್ರದರ್ಶನದಲ್ಲೇನಿದೆ....

ಆರ್‌ಕೆಬಿ ಬಿಲ್ಡ್ ಪ್ರೋನ ಮುಖ್ಯ ಪ್ರಾಯೋಜಕತ್ವ ಹಾಗೂ ಶೆವರನ್ ಲ್ಯಾಬೋ ರೆಟರೀಸ್‌ನ ಸಹ ಪ್ರಾಯೋಜಕತ್ವದಲ್ಲಿ ವಸ್ತು ಪ್ರದರ್ಶನ ಆಯೋಜಿಸಲಾಗಿದೆ. ಪ್ರದರ್ಶನದಲ್ಲಿ ನವೀಕರಿಸಿದ ಮರದ ಉತ್ಪನ್ನಗಳು, ಪರಿಸರ ಸ್ನೇಹಿ ಕಟ್ಟಡ ತಂತ್ರಜ್ಞಾನ ಮತ್ತು ಉತ್ಪನ್ನಗಳು, ಸೋಲಾರ್ ವಾಟರ್ ಹೀಟರ್ಸ್, ಸೋಲಾರ್ ಲೈಟ್‌ಗಳು, ಮೈಕ್ರೋಗ್ರಿಡ್ ಕುಡಿಯುವ ನೀರಿನ ಸಂಸ್ಕರಣೆಯ ವಿಧಾನಗಳು ಹಾಗೂ ಉತ್ಪನ್ನಗಳು, ಕೊಳಚೆ ನೀರು ಸಂಸ್ಕರಣೆ ಮತ್ತು ಮರಬಳಕೆ, ಇಂಧನ ಮೂಲಗಳ ಮಾಹಿತಿ, ಕರಕುಶಲ ವಸ್ತುಗಳು, ವಿದ್ಯುತ್‌ಚಾಲಿತ ವಾಹನಗಳು, ಮರದ ಪರ್ಯಾಯ ಉತ್ಪನ್ನಗಳು, ಹಣ್ಣು ಮತ್ತು ತರಕಾರಿಗಳು ಪ್ರದರ್ಶನದಲ್ಲಿವೆ. ಹೆಚ್ಚಿನ ಮಾಹಿತಿಗಾಗಿ ಮೊ.ಸಂ. 98453 17373, 98803 93343 ಸಂಪರ್ಕಿಸಬಹುದು.

ವಕೀಲರ ಮನೆ ದೋಚಿದ್ದ ಐವರು ಖದೀಮರ ಬಂಧನ

● ಬಂಧಿತರಿಂದ 2 ಲಕ್ಷ ನಗದು, ಕಾರು, ಆಕ್ಟೀವಾ, 5 ಮೊಬೈಲ್ ವಶಕ್ಕೆ ● ಪ್ರಮುಖ ಆರೋಪಿ ಬಂಧನಕ್ಕೆ ಶೋಧ


ಖದೀಮರ ಸೆರೆಹಿಡಿದ ಕುವೆಂಪುನಗರ ಠಾಣೆ ಪೊಲೀಸ್ ಪಡೆ

ಮೈಸೂರು, ಜೂ. 10– ವಕೀಲರ ಮನೆಯ ಹಿಂಬಾಗಿಲು ಮೀಟಿ 6 ಲಕ್ಷ ರೂ. ಕಳವು ಮಾಡಿದ್ದ ಐವರು ಖದೀಮರನ್ನು ಬಂಧಿಸಿರುವ ಕುವೆಂಪುನಗರ ಠಾಣೆ ಪೊಲೀಸರು ಬಂಧಿತರಿಂದ 2 ಲಕ್ಷ ನಗದು, ಕಾರು, ಆಕ್ಟೀವಾ ಸ್ಕೂಟರ್ ಮತ್ತು 5 ಮೊಬೈಲ್‌ಗಳನ್ನು ವಶಪಡಿಸಿಕೊಂಡಿದ್ದಾರೆ. ಈ ಪ್ರಕರಣದಲ್ಲಿ ಖತರ್ನಾಕ್ ಖದೀಮನೋರ್ವ ಭಾಗಿಯಾಗಿದ್ದು, ಆತನ ಬಂಧನಕ್ಕಾಗಿ ಪೊಲೀಸರು ಬಲೆ ಬೀಸಿದ್ದಾರೆ.

ಮಂಡ್ಯ ಜಿಲ್ಲೆ ಮದ್ದೂರಿನ ಅನಿಲ್, ಪುಟ್ಟಸ್ವಾಮಿ, ಅಭಿಷೇಕ್, ಪ್ರಕಾಶ್ ಮತ್ತು ಮೈಸೂರಿನ ನರೇಂದ್ರ ಬಂಧಿತರಾಗಿದ್ದು, ಮದ್ದೂರಿನವನೇ ಆದ ಖತರ್ನಾಕ್ ಖದೀಮ ಯೋಗಾನಂದ ಅಲಿಯಾಸ್ ಉಪೇಂದ್ರ ತಲೆಮರೆಸಿಕೊಂಡಿದ್ದಾನೆ ಈತ ಡಕಾಯಿತಿ, ರಾಬರಿ, ಕನ್ನ ಕಳವು ಸೇರಿದಂತೆ ಸುಮಾರು 15 ಪ್ರಕರಣಗಳಲ್ಲಿ ವಿವಿಧ ಪೊಲೀಸ್ ಠಾಣಾ ವ್ಯಾಪ್ತಿಗಳಲ್ಲಿ ಭಾಗಿಯಾಗಿದ್ದು, ಆತನಿಗಾಗಿ ವಿವಿಧ ಠಾಣೆಗಳ ಪೊಲೀಸರು ಹುಡುಕಾಟ ನಡೆಸುತ್ತಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ವಿವರ: ಬೆಂಗಳೂರಿನ ಮಲ್ಲೇಶ್ವರಂನವರಾದ ವಕೀಲ ಜಯಪ್ರಕಾಶ್ ರಾವ್(70) ಎಂಬುವರು ಮೈಸೂರಿನ ಕೋರ್ಟ್‌ಗಳಿಗೆ ಹಾಜರಾಗುತ್ತಿದ್ದು, ಇಲ್ಲಿನ ಶ್ರೀರಾಂಪುರ ಎಸ್‌ಬಿಎಂ ಕಾಲೋನಿಯಲ್ಲಿ ಮನೆ ಹೊಂದಿದ್ದಾರೆ. ಮೈಸೂರಿನ ನ್ಯಾಯಾಲಯಕ್ಕೆ ಹಾಜರಾಗಬೇಕಾದಾಗ ಇಲ್ಲಿಗೆ ಆಗಮಿಸುವ ಅವರು, ಮನೆ ನೋಡಿಕೊಳ್ಳಲು ಲಕ್ಷ್ಮೀ ಎಂಬಾಕೆಯನ್ನು ನೇಮಿಸಿದ್ದಾರೆ. ಕಳೆದ ಮೇ 2ರಂದು ಮೈಸೂರಿನ ನ್ಯಾಯಾಲಯಕ್ಕೆ ಹಾಜರಾದ ನಂತರ ಈ ಮನೆಯಲ್ಲೇ ಉಳಿದುಕೊಂಡಿದ್ದು, ಮೇ 3ರಂದು ಸಂಜೆ 4 ಗಂಟೆಗೆ ಬೆಂಗಳೂರಿಗೆ ಹಿಂತಿರುಗಿದ್ದಾರೆ.

ಮರುದಿನ ಅಂದರೆ ಮೇ 5ರಂದು ಬೆಳಗ್ಗೆ 9 ಗಂಟೆಗೆ ಕೆಲಸದಾಕೆ ಲಕ್ಷ್ಮೀ, ವಕೀಲ ಜಯಪ್ರಕಾಶ್ ರಾವ್ ಅವರಿಗೆ ಕರೆ ಮಾಡಿ ಮನೆಯಲ್ಲಿ ಕಳ್ಳತನ ನಡೆದಿರುವ ಬಗ್ಗೆ ತಿಳಿಸಿದ್ದಾಳೆ. ಅವರು ಮೈಸೂರಿಗೆ ಬಂದು ನೋಡಿದಾಗ ಖದೀಮರು ಇವರ ಮನೆಯ ಹಿಂಬಾಗಿಲು ಮೀಟಿ 6 ಲಕ್ಷ ರೂ. ಕಳವು ಮಾಡಿರುವುದು ಗೊತ್ತಾಗಿದೆ. ಈ ಸಂಬಂಧ ಅವರು ಕುವೆಂಪುನಗರ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು. ಸಿಸಿ ಕ್ಯಾಮರಾ ದೃಶ್ಯಾವಳಿಗಳ ಆಧಾರದ ಮೇರೆಗೆ ಪೊಲೀಸರು ಐವರನ್ನು ಬಂಧಿಸಿದ್ದಾರೆ.

ರಿಯಲ್ ಎಸ್ಟೇಟ್‌ನಲ್ಲಿ ನಷ್ಟ ಹೊಂದಿದ್ದವನು ಕಳ್ಳತನಕ್ಕೆ ಸ್ಕೆಚ್ ಹಾಕಿದ: ಬಂಧಿತರಲ್ಲಿ ಮದ್ದೂರಿನವನಾದ ಅನಿಲ್ ಮೈಸೂರಿನಲ್ಲಿ ರಿಯಲ್ ಎಸ್ಟೇಟ್ ವ್ಯವಹಾರ ನಡೆಸಿ ನಷ್ಟ ಅನುಭವಿಸಿದ್ದ ಎಂದು ಹೇಳಲಾಗಿದ್ದು, ಎಸ್‌ಬಿಎಂ ಕಾಲೋನಿಯಲ್ಲಿರುವ ವಕೀಲ ಜಯಪ್ರಕಾಶ್ ಮನೆಯಲ್ಲಿ ದೊಡ್ಡ ಮೊತ್ತದ ಹಣ ದೊರೆಯಬಹುದು ಎಂದು ಭಾವಿಸಿ ಆ ಮನೆಯಲ್ಲಿ ಕಳವು ಮಾಡುವ ಬಗ್ಗೆ ತನ್ನ ಸ್ನೇಹಿತನಾದ ಪುಟ್ಟಸ್ವಾಮಿಗೆ ತಿಳಿಸಿದ್ದಾನೆ ಎಂದು ವಿಚಾರಣೆ ವೇಳೆ ತಿಳಿದುಬಂದಿದೆ. ತಮ್ಮೂರಿನವನೇ ಆದ ಯೋಗಾನಂದ ಖತರ್ನಾಕ್ ಖದೀಮ ಎಂಬುದನ್ನು ಅರಿತಿದ್ದ ಪುಟ್ಟಸ್ವಾಮಿ, ಆತನನ್ನು ಸಂಪರ್ಕಿಸಿ ವ್ಯವಹಾರ ಕುದುರಿಸಿದ ಯೋಗಾನಂದ ತನ್ನ ಸಹಚರರೊಂದಿಗೆ ಮೈಸೂರಿಗೆ ಆಗಮಿಸಿ ವಕೀಲ ಜಯಪ್ರಕಾಶ್‌ರಾವ್ ಮನೆಯಲ್ಲಿ ಕಳವು ಮಾಡಿದ ಎಂಬುದು ಪೊಲೀಸರ ವಿಚಾರಣೆಯಲ್ಲಿ ತಿಳಿದುಬಂದಿದೆ. ಈ ಪ್ರಕರಣದಲ್ಲಿ ಬಂಧಿತರಾಗಿರುವ ಅನಿಲ್ ಮತ್ತು ಪುಟ್ಟಸ್ವಾಮಿಗೆ ಯಾವುದೇ ಅಪರಾಧ ಹಿನ್ನೆಲೆ ಇಲ್ಲ. ರಿಯಲ್ ಎಸ್ಟೇಟ್ ವ್ಯವಹಾರದಲ್ಲಿ ಅನುಭವಿಸಿದ್ದ ನಷ್ಟವನ್ನು ಕಳ್ಳತನದಲ್ಲಿ ತುಂಬಿಕೊಳ್ಳಬಹುದೆಂಬ ಅತೀ ಆಸೆಯಿಂದ ಖತರ್ನಾಕ್ ಖದೀಮನನ್ನು ಕರೆತಂದು ಕಳವು ಮಾಡಿಸಿದ್ದಾರೆ ಎಂದು ವಿಚಾರಣೆಯಲ್ಲಿ ತಿಳಿದಿದೆ.

ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಜಾಹ್ನವಿ ಮತ್ತು ಕೆ.ಆರ್. ಉಪ ವಿಭಾಗದ ಎಸಿಪಿ ಗಂಗಾಧರಸ್ವಾಮಿ ಮಾರ್ಗದರ್ಶನದಲ್ಲಿ ಸಬ್‌ಇನ್ಸ್‌ಪೆಕ್ಟರ್‌ಗಳಾದ ಗೋಪಾಲ್ ಪಚ್ಚಣ್ಣನವರ್, ರಾಧಾ, ಸಿಬ್ಬಂದಿಗಳಾದ ಕುಮಾರ್, ಆನಂದ, ಮಂಜುನಾಥ, ಸುರೇಶ, ಪುಟ್ಟಪ್ಪ ಹಜರತ್, ಅಮೋಘ್, ನಾಗೇಶ್, ಶ್ರೀನಿವಾಸ್ ಈ ಕಾರ್ಯಾಚರಣೆ ಯಲ್ಲಿ ಭಾಗವಹಿಸಿದ್ದರು.

ಉಚಿತ ಆರೋಗ್ಯ ತಪಾಸಣಾ ಶಿಬಿರ

ಮೈಸೂರು, ಜೂ. 10– ಎಸ್‌ಜೆಎಸ್ ಚಾರಿಟಬಲ್ ಟ್ರಸ್ಟ್ ಮತ್ತು ಮೈಸೂರು ವೀರಶೈವ ಸಜ್ಜನ ಸಂಘದ ವತಿಯಿಂದ ಜೆಎಸ್‌ಎಸ್ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ, ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಜೆಎಸ್‌ಎಸ್ ಡೆಂಟಲ್ ಆಸ್ಪತ್ರೆ, ಭಾರತ್ ಕ್ಯಾನ್ಸರ್ ಆಸ್ಪತ್ರೆ, ಅನ್ನಪೂರ್ಣ ಕಣ್ಣಿನ ಆಸ್ಪತ್ರೆ, ಮಿಯರ್ ಆರ್ಗ್ಯಾನಿಕ್ಸ್ ಲಿಮಿಟೆಡ್, ಬ್ರಿಟಿಷ್ ಬಯಾಲಜಿಕಲ್, ಯೋಗ ಪ್ರಾಣ ವಿದ್ಯಾಕೇಂದ್ರ ಸಹಯೋಗದೊಂದಿಗೆ ಜೂನ್ 13ರಂದು ಬೆಳಗ್ಗೆ 9ರಿಂದ ಮಧ್ಯಾಹ್ನ 2 ಗಂಟೆವರೆಗೆ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಏರ್ಪಡಿಸಲಾಗಿದೆ.

ಅಂದು ಮೈಸೂರಿನ ಕಂಠಿ ಮಲ್ಲಣ್ಣನವರ ಕಲ್ಯಾಣ ಮಂದಿರದಲ್ಲಿ ಹೃದಯ, ಕಣ್ಣು, ಹಲ್ಲು ಮತ್ತು ಚರ್ಮ ತಪಾಸಣೆ, ವೃದ್ಧಾರೋಗ್ಯ, ಬೋನ್ ಡೆನ್‌ಸಿಟಿ, ಕ್ಯಾನ್ಸರ್ ತಪಾಸಣೆ ಹಾಗೂ ಯೋಗ ಪ್ರಾಣ ವಿದ್ಯಾ ಶಿಬಿರವನ್ನು ಏರ್ಪಡಿಸಲಾಗಿದೆ. ಅವಶ್ಯವಿದ್ದಲ್ಲಿ ಹಲ್ಲನ್ನು ಕೀಳಲಾಗುತ್ತದೆ. ಅಗತ್ಯವಿದ್ದಲ್ಲಿ ಓದಲು ಉಪ ಯೋಗಿಸುವ ಕನ್ನಡಕವನ್ನು ಪ್ರತಿಯೊಬ್ಬರಿಗೂ ಉಚಿತವಾಗಿ ನೀಡಲಾಗುವುದು ಎಂದು ಎನ್‌ಜೆಎಸ್ ಚಾರಿಟಬಲ್ ಟ್ರಸ್ಟ್‌ನ ಎಂ.ಎನ್.ಜೈಪ್ರಕಾಶ್ ತಿಳಿಸಿದ್ದಾರೆ.

ಲೋಕಸಭಾ ಚುನಾವಣೆಯಲ್ಲೂ ಕಾಂಗ್ರೆಸ್ ಜಯಭೇರಿ

ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ವಿಶ್ವಾಸ



ಮೈಸೂರು, ಜೂ. 10 (ಸಿಎನ್)– 2024ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲ್ಲಬೇಕಾದರೆ, ಮೊದಲು ಕೆಲವು ಮಾನದಂಡಗಳನ್ನು ಅನುಸರಿಸಬೇಕು. ಈಗಿನ ವಿಧಾನಸಭಾ ಚುನಾವಣೆಯಲ್ಲಿ ಘೋಷಣೆ ಮಾಡಿದ ಐದು ಗ್ಯಾರಂಟಿಗಳನ್ನು ಯಾವುದೇ ಅಡೆತಡೆಯಿಲ್ಲದೇ ಮುಂದುವರಿಸಿಕೊಂಡು ಹೋಗಬೇಕು. ಬಳಿಕ ಸ್ಥಳೀಯ ನಾಯಕರ ನಾಯಕತ್ವದಲ್ಲಿ, ಬಿಜೆಪಿಗೆ ನೇರ ಸ್ಪರ್ಧೆ ಒಡ್ಡುವ ಕ್ಷೇತ್ರಗಳನ್ನು ಗುರುತಿಸಿ, ಪಕ್ಷ ಸಂಘಟನೆ ಮಾಡಿದರೆ ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ವಿಜಯ ಸಾಧಿಸಲು ಸಾಧ್ಯಎಂದು ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಸಲಹೆ ನೀಡಿದರು.

ನಗರದ ಮೈಸೂರು ವಿಶ್ವವಿದ್ಯಾನಿಲಯ ಸಹಯೋಗದಲ್ಲಿ ಮಾನಸ ಗಂಗೋತ್ರಿಯ ವಿಶ್ವಜ್ಞಾನಿ ಸಭಾಂಗಣದಲ್ಲಿ, ಡಾ.ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ ವತಿಯಿಂದ, '16ನೇ ವಿಧಾನಸಭಾ ಚುನಾವಣೆ ಪ್ರಭಾವ, ಪರಿಣಾಮ ಮತ್ತು ಭವಿಷ್ಯದ ರಾಜಕೀಯ ಆಯಾಮಗಳು' ಎಂಬ ವಿಚಾರ ಕುರಿತು ರಾಜ್ಯಮಟ್ಟದ ವಿಚಾರ ಸಂಕಿರಣ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿದ ಬಳಿಕ ಮಾತನಾಡಿದರು.

ಈ ಒಂದು ವಿಚಾರ ಸಂಕಿರಣ ಪ್ರಸ್ತುತ ದಿನಗಳಲ್ಲಿ ಬಹಳ ಮಹತ್ವದ್ದಾಗಿದೆ. ಈ ಹಿಂದೆ ಕಾಂಗ್ರೆಸ್ ಸೋಲಿಸಲು ಎಲ್ಲಾ ಪಕ್ಷಗಳು ಹೋರಾಟ ನಡೆಸುತ್ತಿದ್ದವು. ಆದರೆ ಈಗ ಬಿಜೆಪಿ ಸೋಲಿಸಲು ಎಲ್ಲಾ ಪಕ್ಷಗಳು ಪಣತೊಟ್ಟು ನಿಂತಿವೆ. ಬಿಜೆಪಿ ಈ ಮಟ್ಟಕ್ಕೆ ಬೆಳೆಯಲು ಈ ಹಿಂದಿನ ಪ್ರಮುಖ ನಾಯಕರ ಅವ್ಯಕ್ತ ಶ್ರಮ ಅಡಗಿದೆ. ನಾನು 1998ರಿಂದಲೂ ಸಕ್ರಿಯ ರಾಜಕಾರಣದಲ್ಲಿದ್ದೇನೆ ಆಗಿನಿಂದಲೂ ರಾಜಕೀಯ ಗಮನಿಸಿದ್ದೇನೆ, ಆಗಿದ್ದ ಬಿಜೆಪಿಗೂ ಈಗಿನ ಬಿಜೆಪಿಗೂ ಅಜಗಜಾಂತರ ವ್ಯತ್ಯಾಸವಿದೆ ಎಂದರು.

ಕರ್ನಾಟಕ ಮೊದಲಿನಿಂದಲೂ ರಾಷ್ಟ್ರೀಯ ಪಕ್ಷಗಳನ್ನ ಬೆಂಬಲಿಸಿಕೊಂಡು ಬಂದಿದೆ. ಒಮ್ಮೆ ಬಿಜೆಪಿ ಗೆದ್ದರೆ, ಮತ್ತೊಮ್ಮೆ ಕಾಂಗ್ರೆಸ್ ಗೆಲುವು ಸಾಧಿಸಿದೆ. ಯಾರಿಗೂ ನಿರಂತರವಾಗಿ ಅಧಿಕಾರ ಸಿಕ್ಕಿಲ್ಲ. ಜೊತೆಗೆ ನಮ್ಮ ಜನರು ಸಹ ಬದಲಾಗಬೇಕಿದೆ. ರಾಜ್ಯದ ಅಭಿವೃದ್ಧಿ ಬಯಸಿ ಭಾಷಣ ಮಾಡುವವರು ಈ ಬಾರಿ ಮತದಾನವನ್ನೇ ಮಾಡಿರುವುದಿಲ್ಲ. ಚುನಾವಣೆಯಲ್ಲಿ ಅಭಿವೃದ್ಧಿ, ವ್ಯಕ್ತಿ ನೋಡಿ ಮತಹಾಕಲ್ಲ. ಪಕ್ಷ, ಸಮುದಾಯ ನೋಡಿ ಮತ ಹಾಕುತ್ತಾರೆ. ಈ ಮನಸ್ಥಿತಿಯಿಂದ ಮೊದಲು ಜನರು ಹೊರಗೆ ಬರಬೇಕು ಎಂದರು.

ನನ್ನ ಸೋಲಿಸಲು ಹೋಗಿ ಬಿಜೆಪಿ ಸೋತಿದೆ: ಈ ಹಿಂದೆ ಕರ್ನಾಟಕದಲ್ಲಿ ಬಿಜೆಪಿ ಸರ್ಕಾರ ಅಧಿಕಾರದಲ್ಲಿತ್ತು. ಈಗ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಿದೆ. ಈ ಬಾರಿಯ ಚುನಾವಣೆಯಲ್ಲಿ ನನ್ನ ಸೋಲಿಗೆ 'ಟಾರ್ಗೆಟ್ ಜಗದೀಶ್ ಶೆಟ್ಟರ್' ಅಜೆಂಡಾವೇ ಕಾರಣ. ನನ್ನನ್ನು ಸೋಲಿಸುವ ನಿಟ್ಟಿನಲ್ಲಿ ಯಶಸ್ವಿಯಾದರು ಆದರೆ ಇಡೀ ಬಿಜೆಪಿ ಧೂಳೀಪಟವಾಯಿತು ಎಂದು ವ್ಯಂಗ್ಯವಾಡಿದರು.

> ರಾಜ್ಯ ಬಿಜೆಪಿ ಸೋಲಿನಿಂದ ಹೊರ ಬಂದು ಸುಧಾರಣೆ ಆಗಿರುವ ನಿಟ್ಟಿನಲ್ಲಿ ಕಂಡು ಬರುತ್ತಿಲ್ಲ. ಸ್ಥಳೀಯ ನಾಯಕರನ್ನು ಕಡೆಗಣಿಸಿ, ಕೇಂದ್ರ ನಾಯಕರ ಮೇಲೆ ಅವಲಂಬಿತರಾಗಿ ದಂಡ ತೆತ್ತಿದ್ದಾರೆ. ಮುಂದಿನ ದಿನಗಳಲ್ಲಿ ಕೆಲವರ ಹಿಡಿತದಿಂದ ಬಿಜೆಪಿ ಹೊರಬರದೇ ಇದ್ದರೆ ಮುಂದಿನ ಲೋಕಸಭೆಯಲ್ಲೂ ಇದೇ ಫಲಿತಾಂಶ ಹೊರಬೀಳುವ ಸಾಧ್ಯತೆ ಇದೆ.
> -ಜಗದೀಶ್ ಶೆಟ್ಟರ್,
> ಕಾಂಗ್ರೆಸ್ ಮುಖಂಡರು

ಗ್ಯಾರಂಟಿ ಯೋಜನೆ ಗಿಮಿಕ್ ಅಲ್ಲ: ಗ್ಯಾರಂಟಿ ಯೋಜನೆಗಳು ಹೊಸದೇನಲ್ಲ, ಇದು ಚುನಾವಣಾ ಗಿಮಿಕ್ ಅಲ್ಲ. ಇಂತಹ ಯೋಜನೆಗಳು ಮುಂದುವರಿದ ರಾಷ್ಟ್ರಗಳಲ್ಲಿ ಈಗಲೂ ಜಾರಿಯಲ್ಲಿವೆ. ನಿರುದ್ಯೋಗ ಭತ್ಯೆ, ಉಚಿತ ವಿದ್ಯುತ್ ಇವುಗಳು ಬೇರೆ ರಾಜ್ಯಗಳಲ್ಲಿ ನೀಡಲಾಗುತ್ತಿದೆ. ಹಾಗಾಗಿ ಕೇವಲ ಚುನಾವಣಾ ಸಂದರ್ಭದಲ್ಲಿ ನೀಡುವ ಭರವಸೆಗಳಲ್ಲ ಎಂದು ವಿವರಣೆ ನೀಡಿದರು.

ಚುನಾವಣಾ ಆಯೋಗ ಪಾತ್ರ ಬಹುಮುಖ್ಯ: ಹಣಹಂಚಿ ಚುನಾವಣೆ ಗೆಲ್ಲುವ ಕೆಲಸಕ್ಕೆ ರಾಜಕಾರಣಿಗಳು ಒಗ್ಗಿಕೊಂಡಿದ್ದಾರೆ. ಅದರ ಪ್ರಭಾವ ಕಡಿಮೆ ಮಾಡದಿದ್ದರೆ ಮುಂದಿನ ದಿನಗಳಲ್ಲಿ ಪ್ರಾಮಾಣಿಕರಿಗೆ ಗೆಲ್ಲುವ ಅವಕಾಶವೇ ಇಲ್ಲದಂತಾಗುತ್ತದೆ. ಇತ್ತೀಚಿನ ಚುನಾವಣೆಗಳು ಒಂದು ರೀತಿಯ ವ್ಯವಹಾರವಾಗಿದೆ. ಬಂಡವಾಳ ಹಾಕಿ ಲಾಭ ತೆಗೆಯುವಂಥ ಕೆಲಸ ನಡೆಯುತ್ತಿದೆ. ಪ್ರಜಾಪ್ರಭುತ್ವ ಉಳಿಯಬೇಕು ಎಂದರೆ ಈ ವ್ಯವಸ್ಥೆ ನಿಲ್ಲಬೇಕು. ಇಲ್ಲವಾದಲ್ಲಿ ಅಪಾಯ ಕಟ್ಟಿಟ್ಟಬುತ್ತಿ. ಚುನಾವಣಾ ಆಯೋಗ ಚುನಾವಣೆಯಲ್ಲಿ ಬಹುಮುಖ್ಯ ಕಾರ್ಯಾಂಗವಾಗಿದ್ದು, ಯಾವುದೇ ಪಕ್ಷದ ಪರ ಕೆಲಸ ಮಾಡಬಾರದು. ನಾನು ಸೋತಿದ್ದು ಕೂಡ ಚುನಾವಣಾ ಆಯೋಗ ಲೋಪದಿಂದಲೇ ಎಂದು ಆರೋಪಿಸಿದರು. ನಾವು ಬಿಜೆಪಿಯೊಂದಿಗೆ ನೇರ ಪೈಪೋಟಿ ಇರುವ ಕ್ಷೇತ್ರಗಳಲ್ಲಿ ಒನ್ ಟು ಒನ್ ಫೈಟ್ ನೀಡಬೇಕು. ಜೊತೆಗೆ ಡಾ.ಬಿ.ಆರ್.ಅಂಬೇಡ್ಕರ್ ಅವರು ಹಾಕಿಕೊಟ್ಟ ಮಾರ್ಗದಲ್ಲೇ ಸಾಗಬೇಕು. ಲೋಕಸಭೆ ಚುನಾವಣೆಗೂ ಪರಿಣಾಮಕಾರಿಯಾದ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿ, ಬಡವರ, ಮಧ್ಯಮ ವರ್ಗದವರ ಪರ ನಿಲ್ಲಬೇಕು. ಹಾಗಾದರೇ ಮಾತ್ರ ಗೆಲುವು ಸಾಧ್ಯ. ಈ ಸಂಬಂಧ ಇದೇ ಜೂನ್ 23 ರಂದು ವಿಪಕ್ಷಗಳೆಲ್ಲಾ ಒಂದೆಡೆ ಸೇರಿ ಸಭೆ ನಡೆಸುತ್ತಿದೆ. ಅಲ್ಲಿ ಈ ಅಂಶಗಳ ಬಗ್ಗೆ ಪ್ರಸ್ತಾಪಿಸಿ ಕೇಂದ್ರದಲ್ಲಿ ಬಿಜೆಪಿ ಕಟ್ಟಿ ಹಾಕುವ ಚಿಂತನೆ ನಡೆಸುತ್ತೇವೆ ಎಂದರು.

ಕಾರ್ಯಕ್ರಮದಲ್ಲಿ ಪ್ರಗತಿ ಪರ ಚಿಂತಕರು ಪ್ರೊ ಪುರುಷೋತ್ತಮ್ ಬಿಳಿಮನೆ, ಮೈವಿವಿ ಸಂದರ್ಶಕ ಪ್ರಾಧ್ಯಾಪಕರಾದ ಪ್ರೊ. ಇಂದಿರಾ, ಹಿರಿಯ ಪತ್ರಕರ್ತರಾದ ಪ್ರೊ. ರವೀಂದ್ರ ರೇಷ್ಮೆ, ಶಶಿಧರ್ ಭಟ್, ಪ್ರೊ. ಎಂ.ಉಮಾಪತಿ ಮತ್ತಿತರರಿದ್ದರು.

ಮುಂದಿನ ವಿಧಾನಪರಿಷತ್ ಉಪ ಚುನಾವಣೆಗೆ ನೀವು ಆಕಾಂಕ್ಷಿಯೇ? ಎಂಬ ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಿದ ಜಗದೀಶ್ ಶೆಟ್ಟರ್ ಅವರು, ನಾನು ಯಾವುದನ್ನು ನಿರೀಕ್ಷೆ ಮಾಡಿಲ್ಲ, ಎಲ್ಲವನ್ನ ಪಕ್ಷಕ್ಕೆ ಬಿಟ್ಟಿದ್ದೇನೆ, ಪಕ್ಷ ಯಾವ ರೀತಿ ನನ್ನನ್ನ ನಡೆಸಿಕೊಳ್ಳುತ್ತೋ ನೋಡೋಣ. ಕಾಂಗ್ರೆಸ್ ಪಕ್ಷದ ತೀರ್ಮಾನಕ್ಕೆ ನಾನು ಬದ್ಧನಾಗಿರುತ್ತೇನೆ. ಇದೇ ವೇಳೆ ಲೋಕಸಭಾ ಚುನಾವಣೆ ಸ್ಪರ್ಧೆ ವಿಚಾರಕ್ಕೆ ಪ್ರತಿಕ್ರಿಯಿಸಿ, ನಾನು ಮೊದಲಿನಿಂದಲೂ ರಾಜ್ಯ ರಾಜಕಾರಣದಲ್ಲಿದ್ದವನು. ಲೋಕಸಭೆ ಚುನಾವಣೆಗೆ ಸ್ಪರ್ಧಿಸುವ ಪ್ರಮೇಯವೇ ಇಲ್ಲ ಎನ್ನುವ ಮೂಲಕ ಸಾರಾಸಗಟಾಗಿ ತಳ್ಳಿ ಹಾಕಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visweswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

'ಮೈಸೂರು ಮಿತ್ರ'ನ 44ನೇ ವಾರ್ಷಿಕೋತ್ಸವದ ಕಥಾಸ್ಪರ್ಧೆಯ ಸಮಾಧಾನಕರ ಬಹುಮಾನಿತ ಕಥೆ

ನಾನು ಸೀತೆಯಾಗಲಾರೆ

ನಾಲ್ಕನೇ ಬಹುಮಾನ



ಬಿ.ಕೆ.ಮೀನಾಕ್ಷಿ
1580, ಶ್ರೀನರಸಿಂಹ,
8ನೇ ಅಡ್ಡ ರಸ್ತೆ,
ಶಾರದಾದೇವಿನಗರ,
ಮೈಸೂರು.

ನಾಟಕ ಪ್ರದರ್ಶನಕ್ಕೆ ಎಲ್ಲಾ ಸಿದ್ಧತೆಗಳು ಭ'ರದಿಂದ ಸಾಗುತ್ತಿದ್ದವು. ಪಾತ್ರಧಾರಿಗಳು ಚಪ್ಪಾಳೆಯ ಸುರಿಮಳೆ ತನಗೇ ದೊರೆಯಬೇಕೆಂಬ ಹಂಬಲದಲ್ಲಿ ಪದೇ ಪದೇ ತಾಲೀಮಿಗೆ ಮೊರೆ ಹೋಗುತ್ತಿದ್ದರು. 'ಸೀತಾ ಪರಿತ್ಯಾಗ' ನಾಟಕ. ಶಿವರಾತ್ರಿಗೆ ಭರ್ಜರಿ ಪ್ರಯೋಗ. ರಂಗಣ್ಣ ರಾಮನ ಪಾತ್ರಧಾರಿ,. ರಾವಣ ಶ್ಯಾಮಸುಂದರ,. ಸೀತೆ ಸುಮಾವತಿ. ಲಕ್ಷ್ಮಣ ಹೊಸಬನಾದ ಅಭಿಷೇಕ್. ಚುರುಕಾದ ಹುಡುಗ. ತಾನು ಕಲಿತ ಸಂಭಾಷಣೆಗಳನ್ನು ಮನಕ್ಕೆ ತಟ್ಟುವಂತೆ ಹೇಳುತ್ತಿದ್ದನು. ಸ್ವಾಭಿಮಾನಿಯಾದ ಈ ಹುಡುಗನನ್ನು ಕಂಡರೆ ಎಲ್ಲರಿಗೂ ವಿಶೇಷವಾದ ಅಭಿಮಾನ. ರಾಮ, ರಾವಣ, ಲಕ್ಷ್ಮಣರ ಪೂರ್ವ ತಯಾರಿಯೆಲ್ಲಾ ಮುಗಿದು ಯಾವಾಗ ರಂಗದ ಮೇಲೆ ಹತ್ತುತ್ತೇವೋ ಎಂದು ಚಾತಕ ಪಕ್ಷಿಗಳಾಗಿದ್ದರು. ಆದರೆ ಇವರ ಆತುರಕ್ಕೆ ತಣ್ಣೀರೆರಚುವಂತೆ ಸೀತೆಯ ಪಾತ್ರಧಾರಿ ಸುಮಾವತಿಯೇ ನಾಪತ್ತೆ!

* * *

ಸೀತಾ ಪರಿತ್ಯಾಗ ಈ ಬಾರಿಯ ನೂರಾ ಐವತ್ತೆರಡನೆಯ ಪ್ರಯೋಗ. ಪ್ರೇಕ್ಷಕರಿಗೆ ನಾಟಕ ಹಿಡಿಸಿತ್ತು. ಎಷ್ಟು ಸಾರಿ ಪ್ರದರ್ಶನ ವಾದರೂ ನಾಟಕದ ಆದಾಯ ಹೆಚ್ಚೇ ಆಗಿತ್ತು. ಒಮ್ಮೊಮ್ಮೆ ರಂಗಮಂದಿರದಲ್ಲಿ ಐವತ್ತು, ನೂರು ಅಧಿಕ ಕುರ್ಚಿಗಳನ್ನು ತರಿಸಿ ಹಾಕಿದ್ದರು. ಪ್ರೇಕ್ಷಕರ ದಟ್ಟಣೆ ಆ ಮಟ್ಟಿಗಿತ್ತು. ತಂಡದವರಿಗೆ ಇನ್ನೇನು ಬೇಕು? ಪ್ರೇಕ್ಷಕರ ಒಲುಮೆ ಸಿಕ್ಕರೆ ನಾಟಕ ಗೆದ್ದಂತೆ ತಾನೆ?

ರಾವಣನಿಗೆ ಕೋಪ ಹೆಚ್ಚಾಗತೊಡಗಿತು. ಈಕೆಗೆ ಸ್ವಲ್ಪವಾದರೂ ಬದ್ಧತೆಯೇ ಬೇಡವೇ? ಆಗಲೇ ಆರೂವರೆ ದಾಟಿತು. ಏಳು ಗಂಟೆಗೆ ನಾಟಕ ಶುರುವಾಗಬೇಕು. ಈಕೆ ಬಂದು ವೇಷ ಧರಿಸಿಕೊಂಡು, ಒಡವೆಗಳನ್ನು ಹಾಕಿಕೊಂಡು, ಅಲಂಕಾರ ಮಾಡಿಕೊಂಡು ಓಹ್! 'ದೇವರೇ ಇವತ್ತಿನ ನಮ್ಮ ನಾಟಕವನ್ನು ನೀನೇ ಕಾಪಾಡಬೇಕು.' ರಾವಣ ದೇವರಲ್ಲಿ ಮೊರೆಯಿಟ್ಟನು. 'ಏನಾಗಿದೆಯೋ ಏನೋ? ಸುಮ್ಮಸುಮ್ಮನೆ ತಪ್ಪಿಸಿಕೊಳ್ಳು ತ್ತಾಳಾ? ಅವಳಿಗೇನು ಬುದ್ಧಿಯಿಲ್ವಾ? ಏನೋ ಆಗಿದೆ.' ರಾಮ ಸಮಾಧಾನದಿಂದ ನುಡಿದನು. ಹೀಗೇ ಮಾತುಗಳು ಮುಂದು ವರೆದು ಸಮಯವಾದದ್ದೇ ತಿಳಿಯಲಿಲ್ಲ. ರಂಗಮಂದಿರ ತುಂಬಿಹೋಗಿದೆ. ಪ್ರದರ್ಶನಕ್ಕೆ ಬಂದವರೆಲ್ಲ ಈ ನಾಟಕದ ಅಭಿಮಾನಿಗಳೇ. ಅವರೂ ಕಾಯುತ್ತಿದ್ದಾರೆ......ಪರದೆಯ ಹಿಂದೆ ಇವರೂ ಕಾಯುತ್ತಿದ್ದಾರೆ! ಅವರು ನೋಡಲು ಕಾದರೆ, ಇವರು ಆಡಲು ಕಾಯುತ್ತಿದ್ದಾರೆ.

* * *

ಕಡೆಗೆ ಶೂರ್ಪನಖಿ ಪಾತ್ರದ ಮೈನಾಳೇ ಸೀತೆ ಪಾತ್ರ ಮಾಡುವುದೆಂದಾಯಿತು. ಮೈನಾಳಿಗೆ ಸಂಭಾಷಣೆಗಳಿಗೆ ಆಪ್ತಭಾವ ತುಂಬುವ ಚುರುಕಿಲ್ಲ. ಶೂರ್ಪನಖಿಯ ಪಾತ್ರದಂತೆ ಸೀತೆಯನ್ನೂ ರೂಪಿಸಿಬಿಡು ತ್ತಾಳೆ. ಅದೇ ಭಯ ಎಲ್ಲರಿಗೂ. ಅದಷ್ಟೇ ಆಗಿದ್ದರೆ ಪರವಾಗಿಲ್ಲ ಅನ್ನಬಹುದಿತ್ತು. ಶೂರ್ಪನಖಿಯ ಮಾತನ್ನೂ ಸೀತೆಯ ಪಾತ್ರದಲ್ಲಿ ಆಡಿಬಿಡುತ್ತಾಳೆ. ಹೀಗೊಮ್ಮೆ ಅವಳೇ ಸೀತೆಯ ಪಾತ್ರ ಮಾಡುವ ಅನಿವಾರ್ಯತೆ ಬಂದಾಗ, ಅವಳ ಈ ಕಲಸುಮೇಲೋಗರವನ್ನು ಕಂಡು ಜನ ಬಿದ್ದು ಬಿದ್ದು ನಕ್ಕಿದ್ದರು, ಬಾಯ ಮೇಲೆ ಬೆರಳಿಟ್ಟಿದ್ದರು. 'ಇವಳೇನು ಸೀತೆಯೋ ಶೂರ್ಪನಖಿಯೋ ಮೊದಲು ಹೇಳ್ರಪ್ಪಾ?' ಅಂತ ಲೇವಡಿ ಮಾಡಿ ಕಿರುಚಿದ್ದರು. ಆದರೂ ಮೈನಾ ಇವತ್ತು ಎದೆ ಗುಂದದೆ ನಾನೇ ಸೀತೆಯಾಗುತ್ತೇನೆಂದು ಮುಂದೆ ಬಂದಿದ್ದಾಳೆ. ಅವಳಿಗೆ ಪ್ರೋತ್ಸಾಹಕ ನುಡಿಗಳನ್ನಾಡಿ, ಧೈರ್ಯ ತುಂಬಿ, ಎಚ್ಚರಿಸಿ ರಂಗಮಂಚಕ್ಕೆ ಕಳಿಸಿದ್ದರು. ಮೈನಾ ಹೆದರಲಿಲ್ಲ. ಆದರೆ ಡೈಲಾಗುಗಳು ಕೆಲವು ಕಡೆ ಬದಲಾದವು. ಹೇಗೋ ನಾಟಕ ಮುಗಿದು ಯಶಸ್ವಿ ಅಂತಲ್ಲದಿದ್ದರೂ ಪರವಾಗಿಲ್ಲ ಎಂದು ಹಸಿರು ನಿಶಾನೆ ಹಾರಿಸಿತು.

* * *

ಸುಮಾವತಿ ಹದಿನೈದು ದಿವಸಗಳಾದರೂ ಈ ಕಡೆಗೆ ತಲೆ ಹಾಕಲಿಲ್ಲ. ಮೈನಾ ಈಗ ಸೀತೆಯಾಗಿ ನುರಿತುಹೋಗಿದ್ದಳು. ಸುಮಾ ನಾಟಕ ಬಿಟ್ಟಳೆಂದೇ ಎಲ್ಲರೂ ಭಾವಿಸಿದ್ದರು. ಆದರೆ ಇದ್ದಕ್ಕಿದ್ದಂತೆ ಒಂದು ದಿನ ಪ್ರತ್ಯಕ್ಷಳಾದಳು. ಬಂದವಳು ನನಗೆ ಸೀತೆ ಪಾತ್ರ ಬೇಡವೇ ಬೇಡ. ಬೇರೆ ಪಾತ್ರ ಕೊಡಿ ಎಂದು ರಾಗ ತೆಗೆದಳು. ಸೀತಾ ಪರಿತ್ಯಾಗ ಹೆಸರು ಮಾಡಿದ್ದೇ ಸುಮಾ ಸೀತೆಯಾಗಿದ್ದರಿಂದ. ಎಲ್ಲರಿಗೂ ಆಶ್ಚರ್ಯವಾಯಿತು. ಯಾಕೆ ಏನು ಹೀಗೆ ಪ್ರಶ್ನೆಗಳು ಬಂದರೂ ಸುಮಾ ಉತ್ತರಿಸಲಿಲ್ಲ.

* * *

ಸುಮಾ ಅವತ್ತು ನಾಟಕ ಮುಗಿಸಿ ತಡವಾಯಿತೆಂದು ಗಾಬರಿಯಿಂದ ಹೋದಳು. ಅವತ್ತು ನಾಟಕ ಮುಗಿಯುವುದೇ ತಡವಾಗಿತ್ತು. ಸುಮಾ ಪ್ರಾಕ್ಟೀಸಿಗೂ ಸಮಯ ಮಾಡಿಕೊಂಡು ಬರುತ್ತಿದ್ದಳು. ಮನೆಯಲ್ಲೇ ಸಂಭಾಷಣೆಗಳನ್ನು ಕಲಿಯುತ್ತಿದ್ದಳು. ಅಲ್ಲದೆ ಒಂದು ಕಡೆ ಕೆಲಸಕ್ಕೂ ಸೇರಿದ್ದಳು. ಮನೆಯ ಆಧಾರ ಸ್ತಂಭವೇ ಅವಳಾದ್ದರಿಂದ ಗಂಧ ತೇಯ್ದಂತೆ ತೇಯ್ದುಕೊಳ್ಳುತ್ತಿದ್ದಳು. ಇಬ್ಬರು ತಂಗಿಯರ ಜವಾಬ್ದಾರಿ ಕೂಡ ಇತ್ತು. ದುಡಿಯುವ ವಯಸ್ಸಿನಲ್ಲಿ ಅಪ್ಪ ದುಡಿಯದೆ, ಕುಡಿತಕ್ಕೆ ದಾಸನಾಗಿ ಮನೆಯನ್ನು ಬೀದಿಗಿಟ್ಟಿದ್ದನು. ತಾಯಿಯಾದರೂ ಏನು ಮಾಡುತ್ತಾಳೆ? ಆದರೂ ಎಂಟನೇ ತರಗತಿ ಅಂತ ಸರ್ಟಿಫಿಕೇಟ್ ಇದ್ದುದರಿಂದ ಗಾರ್ಮೆಂಟ್ ಒಂದರಲ್ಲಿ ಕೆಲಸಕ್ಕೆ ಸೇರಿದ್ದಳು. ಚಿಕ್ಕ ಹೆಣ್ಣು ಮಕ್ಕಳು ಓದುತ್ತಿದ್ದರು. ಪಿ.ಯು.ಸಿ. ಓದಿ ಕಾಲೇಜು ಬಿಟ್ಟು, ಎಲ್ಲೋ ಒಂದು ಕಡೆ ಆಫೀಸಿನಲ್ಲಿ ಸಹಾಯಕಿಯಾಗಿ ಕೆಲಸಕ್ಕೆ ಸೇರಿದ್ದಳು. ಶಾಲಾ ದಿನಗಳಲ್ಲಿ ನಾಟಕದ ಗೀಳು ಇದ್ದುದರಿಂದ, ಒಮ್ಮೆ ತಮ್ಮ ಬೀದಿಯಲ್ಲಿ ನಡೆದ ನಾಟಕಕ್ಕೆ ಹೋಗಿದ್ದಳು. ಅವರು ಆಡಿದ ಸದಾರಮೆ ನಾಟಕ, ಅವಳಿಗೆ ಬಹಳ ಇಷ್ಟವಾಗಿ ನನ್ನನ್ನು ನಾಟಕಕ್ಕೆ ಸೇರಿಸಿಕೊಳ್ಳುತ್ತೀರಾ ಎಂದು ಆ ತಂಡದವರನ್ನು ಹೋಗಿ ಕೇಳಿದ್ದಳು. ಅಂದವಾದ ಚಿಕ್ಕವಯಸ್ಸಿನ ಹುರುಪಿನ ಹುಡುಗಿ! ಇವಳಿಂದ ಯಾವ ಪಾತ್ರವನ್ನಾದರೂ ಮಾಡಿಸಬಹುದೆಂದು ಲೆಕ್ಕ ಹಾಕಿದ ಮುಖ್ಯಸ್ಥರು ಇವಳನ್ನು ಸೇರಿಸಿಕೊಂಡಿದ್ದರು. ಇವಳು ಯಾವುದೇ ಮುಜುಗರಕ್ಕೆ ಒಳಪಡದೆ ತನ್ನ ಮನೆಯ ಎಲ್ಲಾ ವಿಷಯಗಳನ್ನೂ ಹೇಳಿಕೊಂಡು, ಸಂಬಳ ಬೇಕೆಂದು ಕೇಳಿದ್ದಳು. ತಾನು ಹೋಗುವ ಕೆಲಸಕ್ಕೆ ಅಡ್ಡಿಯಾಗಬಾರದೆಂದು ಷರತ್ತು ವಿಧಿಸಿದ್ದಳು. ಅವರೂ ಅವಳ ನೇರನುಡಿಗಳನ್ನು ಮೆಚ್ಚಿ, ಒಪ್ಪಿಕೊಂಡಿದ್ದರು. ಇಂತಹ ಹುಡುಗಿ ಸುಮಾ ನಾಟಕ ತಂಡಕ್ಕೆ ಸೇರಿ ನಾಲ್ಕು ವರ್ಷಗಳೇ ಕಳೆದಿದ್ದವು. ಈಗ ಇವಳಿಗೆ ಇದ್ದಕ್ಕಿದ್ದಂತೆ ಏನಾಯಿತು? ತಂದೆ ತೀರಿ ಹೋದರೇ? ಅಥವಾ ಬೇರೇನಾದರೂ ಕಷ್ಟಗಳು ಒದಗಿಬಂದಿರಬಹುದೇ? ಹದಿನೈದು ದಿನ ತಪ್ಪಿಸಿಕೊಂಡಿರುವುದಲ್ಲದೆ, ಸೀತೆ ಪಾತ್ರ ಬೇಡವೆನ್ನುತ್ತಿದ್ದಾಳೆ. ಕಡ್ಡಿ ಮುರಿದಂತ ಅವಳ ಮಾತಿಗೆ ಉತ್ತರ ಕೊಡಲು ಯಾರಿಗೂ ಸಾಧ್ಯವಾಗಲಿಲ್ಲ. ಇಲ್ಲಿ ಮುಗಿಸಿಬಿಡು, ಬೇರೆ ಕಡೆ ಹಾಕಿದಾಗ ಅಲ್ಲಿ ಮೈನಾ ಮಾಡುತ್ತಾಳೆ ಎಂದರೂ ಒಪ್ಪಲಿಲ್ಲ. ಆ ಪಾತ್ರ ನನಗಲ್ಲ ಇದರ ಮುಂದಕ್ಕೆ ಮತ್ತೆ ಮತ್ತೆ ಪ್ರಶ್ನೆ ಮಾಡಿದರೆ ನಾನು ಉತ್ತರಿಸುವುದಿಲ್ಲ. ಬೇಸರದಿಂದ ನುಡಿದವಳಿಗೆ ಮತ್ತೆ ಯಾರೂ ಪ್ರಶ್ನೆ ಮಾಡಲಿಲ್ಲ. ಹಾಲಿನಂತಾ ತಿಳಿ ಮನಸಿನ ಸುಮಾ, ಒಡೆದ ಹಾಲಿನಂತೆ ನಗುತ್ತಿದ್ದಾಳೆ. ಮಾತನಾಡಿದರೆ ಮೌನವನ್ನೇ ಉತ್ತರವಾಗಿಸುತ್ತಿದ್ದಾಳೆ. ಏಕಾಂಗಿಯಾಗಿ ಕುಳಿತು ದೂರದಲ್ಲೆಲ್ಲೋ ದೃಷ್ಟಿ ನೆಟ್ಟು ತನ್ನ ಇರುವನ್ನೇ ಮರೆಯುತ್ತಿದ್ದಾಳೆ. ಇದನ್ನು ಮೊದಲು ಗುರುತಿಸಿದವನು ಲಕ್ಷ್ಮಣ ಅಂದರೆ ಅಭಿಷೇಕ್. ಅವಳ ನಡೆ-ನುಡಿಯಲ್ಲಾಗಿರುವ ಬದಲಾವಣೆಯಿಂದ ಅವಳಿಗೇನೋ ಮಾನಸಿಕ ಒತ್ತಡವಿದೆ ಎಂದು ಖಚಿತವಾಗಿ ತಿಳಿದುಕೊಂಡ. ಯಾವ ರೀತಿ ಕೇಳಿದರೂ ಏನೂ ಹೇಳುವುದಿಲ್ಲ. ತನಗೇನು ಚೆನ್ನಾಗಿಯೇ ಇದ್ದೇನೆ ಎನ್ನುತ್ತಾಳೆ. ಒಂದಷ್ಟು ದಿನ ತಪ್ಪಿಸಿಕೊಂಡೆ ನೆಂದು ಅದೆಷ್ಟು ಕತೆ ಕಟ್ಟುತ್ತೀರಪ್ಪಾ ಎಂದು ಅವನನ್ನೇ ಪ್ರಶ್ನಿಸುತ್ತಾಳೆ. ತಾನವಳನ್ನು ವಿಚಾರಿಸಿದ್ದೇ ತಪ್ಪು ಅನ್ನುವಂತೆ ಅವನ ಮೇಲೇ ದೋಷಾರೋಪ ಮಾಡಿ ನುಣುಚಿಕೊಳ್ಳುತ್ತಾಳೆ.

* * *

ಅವಳ ಈ ನುಣುಚಿಕೊಳ್ಳುವಾಟ ಬಹಳ ದಿನ ನಡೆಯಲಿಲ್ಲ. ಒಂದು ದಿನ ಅಭಿಷೇಕ್ ಅವಳ ಮನೆಗೇ ಹೋದ. ಮನೆಯಲ್ಲಿ ತಂಗಿಯರಿಬ್ಬರೂ ಮನೆಗೆಲಸ ಮುಗಿಸಿ ಟಿ.ವಿ.ಚಾನೆಲ್ ಬದಲಿಸಿಕೊಂಡು ಕುಳಿತಿದ್ದರು. ತಂದೆ ಮೆಲ್ಲಗೆ ಓಡಾಡಿಕೊಂಡು ಸಿಗರೇಟು ಸೇದುತ್ತಿದ್ದರು. ಅಮ್ಮ ಒಳಗೆ ಅಡುಗೆ ಮಾಡುತ್ತಿದ್ದರೋ ಏನೋ ತಿಳಿಯಲಿಲ್ಲ. ಸುಮಾ ಕಾಣಲಿಲ್ಲ. ಅಭಿಷೇಕ್ ಮನೆಗೆ ಬರುತ್ತಿದ್ದಂತೆ ಯಾರು? ಯಾರು ಬೇಕಿತ್ತು ಎಂದು ಪ್ರಶ್ನಿಸುವ ಮೊದಲೇ ಸುಮಾವತಿಯವರು ಇದ್ದಾರಾ? ಅವರನ್ನು ನಮ್ಮ ಮ್ಯಾನೇಜರ್ ಕರೆತರಲು ಹೇಳಿದ್ದಾರೆ ಎಂದು ಮಾತು ಮುಗಿಸಿದ. ಹಿತ್ತಲಿನಲ್ಲಿ ಒಬ್ಬಳೇ ಕುಳಿತಿದ್ದ ಸುಮಾಳನ್ನು ಒಳಗಿನಿಂದ ಬಂದ ತಾಯಿ ಕರೆದುಕೊಂಡು ಬಂದರು. ಓ ನೀವಾ ಕುಳಿತುಕೊಳ್ಳಿ, ಕುಳಿತುಕೊಳ್ಳಿ ಎಂದು ಉಪಚರಿಸುತ್ತಲೇ ಸುಮಾ ಕಾಫಿ ತರುತ್ತೇನೆ ಎಂದು ಒಳಹೋದಳು. ಮುಖದ ತುಂಬ ತಣ್ಣೀರೆರಚಿಕೊಂಡು ಸೆರಗಿನಲ್ಲೇ ಮುಖ ಒರೆಸಿಕೊಂಡು ಕಾಫಿ ಹಿಡಿದು ಬಂದಳು. ಅವಳು ಒಬ್ಬಳೇ ಕುಳಿತು ಅತ್ತಿದ್ದಾಳೆ ಎಂದು ಅವಳ ಮುಖ ನೋಡಿದ ಯಾರಾದರೂ ಊಹಿಸಬಹುದಿತ್ತು.. 'ನಿಮ್ಮನ್ನು ಈಗಲೇ ಕರೆತರಲು ಹೇಳಿದ್ದಾರೆ. ಹೊರಡಿ.' ಎಂದು ಸರಸರನೆ ಕಾಫೀ ಹೀರಿ ನಿಂತುಬಿಟ್ಟ. ಇವಳು ಮುಂದಲೆಯನ್ನು ಹಾಗೇ ಹಿಂದಕ್ಕೆ ಸವರಿ, ತಲೆಯ ಕ್ಲಿಪ್ಪನ್ನು ಬಿಗಿಯಾಗಿ ಎಳೆದು ಸರಿಮಾಡಿಕೊಂಡು, 'ನಾಳೆ ಬಂದರಾಗುವುದಿಲ್ಲವೇ?' ಎಂದವಳನ್ನು 'ಬರಲೇಬೇಕಂತೆ.' ಎನ್ನುತ್ತಾ ಆಚೆ ನಡೆದನು.

ಆಟೋ ಹಿಡಿದ ಅಭಿಷೇಕ್ ಇವಳನ್ನು ಹತ್ತುವಂತೆ ಹೇಳಿ, ತಾನೂ ಹತ್ತಿಕೊಂಡನು. ಆಟೋ ಸೀದಾ ಬೋರೆಯ ಉದ್ಯಾನವನದ ಕಡೆಗೆ ಹೊರಟು ಒಂದು ಮರದ ಕೆಳಗೆ ನಿಂತಿತು. ಅಭಿಷೇಕ್ ಹಣ ಕೊಟ್ಟು ಇಳಿದನು. ಸುಮಾ ಇವನನ್ನು ಇದೇಕೆ ಇಲ್ಲಿ ಕರೆದುಕೊಂಡು ಬಂದೆ ಎನ್ನುವಂತೆ ನೋಡಿದಳು. ಆದರೆ ಕೇಳಲಿಲ್ಲ. ಇಬ್ಬರೂ ನಿರ್ಜನವಾದ ಒಂದು ಕಲ್ಲುಬೆಂಚಿನ ಮೇಲೆ ಕುಳಿತರು. ಮೌನ ಮಾತ್ರ ಅವರಿಬ್ಬರ ನಡುವಿನ ಸೇತುವೆಯಾಗಿತ್ತು. ಮಾತಿಗೆ ಮೊದಲಿಟ್ಟ ಅಭಿಷೇಕ್, 'ಈಗ ಹೇಳಿ, ನಿಮ್ಮ ಈ ನಿರ್ಲಿಪ್ತತೆಗೆ ಕಾರಣ ವೇನು? ಅಥವಾ ಯಾರು?'

* * *

ನೇರವಾಗಿ ಗುಂಡೇಟಿನಂತೆ ಎಸೆದ ಪ್ರಶ್ನೆಗೆ ಸುಮಾ ತಣ್ಣಗಾದಳು. ಆದರೆ ಅವಳಿಗೀಗ ಕಿವಿಗಳ ಅವಶ್ಯಕತೆ ಇತ್ತು. ಭುಜ ಸಿಗದಿದ್ದರೂ ಪರವಾಗಿಲ್ಲ. ಮಾತಿನ ಸಾಂತ್ವನ ಬೇಕಿತ್ತು. ಹೇಳಿಬಿಡಬೇಕು, ಎಲ್ಲವನ್ನೂ ಹೇಳಿಬಿಡಬೇಕು! ಬಾಯಿ ಬಿಟ್ಟಳು. ಸೋನೆ ಮಳೆಯಂತಿದ್ದದ್ದು ಧಾರಾಕಾರವಾಗಿ ಪ್ರವಹಿಸಿತು.

'ಅಭಿ, ಅವತ್ತು ನಾನು ನಾಟಕ ಮುಗಿಸಿಕೊಂಡು ಹೋದೆನಲ್ಲ, ಅವತ್ತೇ ನಾನು ಸತ್ತುಬಿಡಬೇಕಿತ್ತು. ಸಾವು ಬಂದಿದ್ದರೂ ನಾನು ಹೆದರುತ್ತಿರಲಿಲ್ಲ. ಆದರೆ ಬದುಕು ಸಾವಿನ ಕ್ರೌರ್ಯವನ್ನು ತೋರಿಸಿತು.' ಮೌನವಾದವಳಿಗೆ ಅವತ್ತಿನ ಘಟನೆಗಳೇನಾದರೂ ಕಣ್ಣಮುಂದೆ ಸುಳಿದವೇನೋ ಎನ್ನುತ್ತಾ ಅಭಿ ಅವಳ ಮುಖವನ್ನೇ ನೋಡಿದ. 'ಹೌದು ಅಭಿ, ನಾನು ಇನ್ನು ಮುಂದೆ ಸೀತೆಯಾಗುವುದಿಲ್ಲ. ಸೀತೆಯಾಗಲಾರೆ. ನಾನು ಸೀತೆಯಾದರೆ ಸೀತೆಯ ಹೆಸರಿಗೆ ಕಳಂಕ ತರುತ್ತೇನೆ. ಆ ಮಹಾ ಪತಿವ್ರತೆಯ ಹೆಸರು ಹೇಳಲೂ ನಾನು ಅರ್ಹಳಲ್ಲ.' ಗಂಟಲುಬ್ಬಿ ಬಂದು ಮಾತುಗಳು ಗಂಟಲಲ್ಲೇ ಹುಗಿದುಕೊಂಡವು. ಅಭಿ ಅವಳನ್ನು ತನ್ನ ಕೈಗಳಿಂದ ಬಾಚಿ ತಬ್ಬಿದವನೇ 'ಏನಾಯಿತು ಸುಮಾ? ಎಂದವನನ್ನು ದೂರ ತಳ್ಳಿ, 'ಛೀ ದೂರ ಸರಿ, ಈ ಪಾಪಿಯನ್ನು ಮುಟ್ಟಬೇಡ.' 'ಸುಮಾ, ಸುಮ್ಮನೆ ಅದೇನಾಯಿತು ಹೇಳಿಬಿಡು. ನಾನು ನಿನಗೆ ಬೇರೆಯವನೇ?' 'ಇಷ್ಟುದಿನ ನೀನು ನನಗೆ ಆಪ್ತನೇ ಆಗಿದ್ದೆ. ಆದರೀಗ ಪರಕೀಯ.' ಅವಳ ಒಗಟಿನ ಮಾತುಗಳು ಅವನಿಗೆ ಅರ್ಥವಾಗದೆ 'ಅದೇನು ಹೇಳು ಸುಮಾ?" ಕೋಪದಿಂದ ಅವನ ಧ್ವನಿ ನಡುಗುತ್ತಿತ್ತು. 'ಅವತ್ತು ಮನೆಗೆ ಹೊರಟೆನಲ್ಲ, ಇದ್ದಕ್ಕಿದ್ದಂತೆ ಕರೆಂಟು ಹೊರಟುಹೋಯಿತು. ಆಟೋ ಹತ್ತಿಬಿಡೋಣ ಎಂದು ಆಟೋಗಳನ್ನು ನೋಡುತ್ತಿದ್ದೆ ಒಂದು ಆಟೋ ಬಂದು ಮುಂದೆ ನಿಂತಿತು. ಮನೆಯ ದಾರಿ ಹೇಳಿದೆ. ಮನೆಯ ದಾರಿಯಲ್ಲಿ ಆಟೋ ಹೋಗಿ, ಅಲ್ಲಿಂದ ಬೇರೆ ಕಡೆ ತಿರುಗಿ, ಮುಂದೆ ಒಂದಿಬ್ಬರು ದಾಂಡಿಗರು ಆಟೋ ಹತ್ತಿದರು. ಕಿರುಚಿದೆ, ಕೂಗಾಡಿದೆ. ಮೊದಲೇ ತಡವಾಗಿತ್ತು. ರಸ್ತೆಯಲ್ಲಿ ಒಂದು ನರಪಿಳ್ಳೆಯಿಲ್ಲ.. ಯಾವನೋ ಮೂಗಿಗೆ ಕರ್ಚಿಫ್ ಬಿಗಿದ. ನನಗೆ ಜ್ಞಾನ ತಪ್ಪಿತ್ತು. ಅವರ್‍ಯಾರೋ ಏನೋ ಒಂದೂ ತಿಳಿಯದೆ ನನ್ನ ತಿಳಿವೇ ಪ್ರಜ್ಞೆ ತಪ್ಪಿತು. ನನಗೆ ಎಚ್ಚರವಾದಾಗ ಯಾವುದೋ ಒಂದು ಪೊದೆಯ ಹಿಂದೆ ಬಿದ್ದಿದ್ದೆ. ಕತ್ತಲು! ಗವ್ವೆನ್ನುವ ಕತ್ತಲು.! ನನ್ನೊಳಗೂ ಹೊರಗೂ! ಅಸ್ತವ್ಯಸ್ತವಾದ ಬಟ್ಟೆಗಳನ್ನು ಸರಿಪಡಿಸಿಕೊಂಡು ಹೇಗೋ ಬೆಳಕಾಗುವವರೆಗೂ ಅಲ್ಲೇ ಅವಿತು ಕುಳಿತುಕೊಂಡೆ. ಸೂರ್ಯ ಹುಟ್ಟುವ ಸೂಚನೆ ಸಿಕ್ಕಿದ ಮೇಲೆ ಮೈತುಂಬ ಸೆರಗು ಹೊದ್ದು, ದಾರಿಯಲ್ಲಿ ಸಿಕ್ಕ ಬೋರ್‌ವೆಲ್ಲಿನಲ್ಲಿ ಕೈಕಾಲು ಮುಖ ತೊಳೆದು, ಮನೆಯ ಹಾದಿ ಹಿಡಿದೆ. ನಾಟಕ ಇಲ್ಲಿಯವರೆಗೂ ಪ್ರಾಕ್ಟೀಸು ಮಾಡುತ್ತಿದ್ದರೆಂದು ಸುಳ್ಳು ಹೇಳಿ, ಸುಮ್ಮನೆ ಮಲಗಿದೆ. ಮನೆ ಬಿಟ್ಟು ಎಲ್ಲಿಗೂ ಹೋಗಲಿಲ್ಲ. ಮೂರ್‍ನಾಲ್ಕು ದಿನ ಜ್ವರ ಬಂತು. ಅಮ್ಮನ ಆರೈಕೆಯಿಂದ ಚೇತರಿಸಿಕೊಂಡೆ. ಆದರೆ ಇದನ್ನು ನಾನು ಮನೆಯಲ್ಲಿ ಹೇಳದಾದೆ. ಮದುವೆಯಾಗುವ ತಂಗಿಯರಿದ್ದಾರೆ. ಅಮ್ಮ ಎದೆಯೊಡೆದು ಸತ್ತೇ ಹೋದಾಳು. ಈ ಸತ್ಯ ನನ್ನನ್ನು ಕೊಲ್ಲುತ್ತಿದೆ. ನನ್ನಲ್ಲೇ ಕೊಳೆಯುತ್ತಿದೆ. ಇವತ್ತು ನಿನ್ನೆದುರಿಗೆ ಬಾಯಿ ಬಿಡಬೇಕಾಯಿತು. ಇನ್ನುಮುಂದೆ ನಾನು ವೇಶ್ಯೆಯ ಪಾತ್ರಕ್ಕೆ ಅರ್ಹಳು. ಆ ಪಾತ್ರಗಳಿದ್ದರೆ ಕೊಡಿ. ಆ ಪಾವನಜೀವಿ ಸೀತೆಯನ್ನು ಹೊರಲಾರೆ ನಾನು. ಅವಳನ್ನು ಕಲುಷಿತಗೊಳಿಸಲಾರೆ.' ಸುಮಾಳ ದುಃಖ ಕಟ್ಟೆಯೊಡೆಯಿತು. ಬಹಳ ಹೊತ್ತು ಅವಳನ್ನೇ ನೋಡುತ್ತಾ ಕುಳಿತ ಅಭಿಷೇಕ್ ಬಾಯಿ ತೆರೆದ. 'ನೋಡು ಸುಮಾ, ಅದೊಂದು ನಿನ್ನ ಜೀವನದ ಗ್ರಹಣಕಾಲ. ಈಗ ಬಿಟ್ಟುಹೋಯಿತು. ನಿನ್ನ ಬಾಳಿಗೆ ಹೊಸ ಬೆಳಕು ತರಲು ನಾನಿದ್ದೇನೆ. ಬಾ ಇಬ್ಬರೂ ಜೊತೆಯಾಗಿ ಹೆಜ್ಜೆ ಹಾಕೋಣ.' ಅವನ ಮಾತು ಕೇಳಿ ಸುಮಾ ಅಚ್ಚರಿಯಿಂದ ಅವನ ಮುಖವನ್ನೇ ನೋಡಿದಳು. ಸುಮ್ಮನೆ ನಕ್ಕಳು. ಅವಳಿಗೆ ಅವನಾಡಿದ ಮಾತು ಅಮೃತ ಸಿಂಚನವಾಯಿತು. ಅವನ ಕೈ ಹಿಡಿದು ಕಣ್ಣಿಗೊತ್ತಿಕೊಂಡಳು. ಮಾರನೇ ದಿನ ನಾಟಕ ತಂಡಕ್ಕೆ ಬರಸಿಡಿಲಿನಂತೆ ವಿಷಯವೊಂದು ಬಂದೆರಗಿತು. 'ಸುಮಾ ಸತ್ತುಹೋದಳಂತೆ. ಮನೆಯವರ ಗೋಳು ಮುಗಿಲು ಮುಟ್ಟಿದೆ.' ಮಾತಾಡಿಕೊಳ್ಳುತ್ತಿದ್ದರು. ಆದರೆ ಎಲ್ಲವನ್ನೂ ಬಲ್ಲ ಅಭಿಯ ದುಃಖಕ್ಕೆ ಸಾಂತ್ವನವಿದೆಯೇ?



'ಅಭಿ, ಅವತ್ತು ನಾನು ನಾಟಕ ಮುಗಿಸಿಕೊಂಡು ಹೋದೆನಲ್ಲ, ಅವತ್ತೇ ನಾನು ಸತ್ತುಬಿಡಬೇಕಿತ್ತು. ಸಾವು ಬಂದಿದ್ದರೂ ನಾನು ಹೆದರುತ್ತಿರಲಿಲ್ಲ. ಆದರೆ ಬದುಕು ಸಾವಿನ ಕ್ರೌರ್ಯವನ್ನು ತೋರಿಸಿತು.' ಮೌನವಾದವಳಿಗೆ ಅವತ್ತಿನ ಘಟನೆಗಳೇನಾದರೂ ಕಣ್ಣಮುಂದೆ ಸುಳಿದವೇನೋ ಎನ್ನುತ್ತಾ ಅಭಿ ಅವಳ ಮುಖವನ್ನೇ ನೋಡಿದ. 'ಹೌದು ಅಭಿ, ನಾನು ಇನ್ನು ಮುಂದೆ ಸೀತೆಯಾಗುವುದಿಲ್ಲ. ಸೀತೆಯಾಗಲಾರೆ. ನಾನು ಸೀತೆಯಾದರೆ ಸೀತೆಯ ಹೆಸರಿಗೆ ಕಳಂಕ ತರುತ್ತೇನೆ. ಆ ಮಹಾಪತಿವ್ರತೆಯ ಹೆಸರು ಹೇಳಲೂ ನಾನು ಅರ್ಹಳಲ್ಲ.' ಗಂಟಲುಬ್ಬಿ ಬಂದು ಮಾತುಗಳು ಗಂಟಲಲ್ಲೇ ಹುಗಿದುಕೊಂಡವು.

ವಾರಭವಿಷ್ಯ

11.6.2023 ರಿಂದ 17.06.2023

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ವೃಷಭ, ಮಿಥುನ, ಚಂದ್ರ-ಕುಂಭ, ಮೀನ, ಮೇಷ, ವೃಷಭ, ಕುಜ-ಕಟಕ, ಬುಧ-ವೃಷಭ, ಗುರು-ಮೇಷ, ಶುಕ್ರ-ಕಟಕ, ಶನಿ-ಕುಂಭ, ರಾಹು-ಮೇಷ ಮತ್ತು ಕೇತು-ತುಲಾ.



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720

ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ವಾರದಾರಂಭಕ್ಕೆ ಸಹೋದರರೊಂದಿಗೆ ಸ್ಥಿರಾಸ್ತಿಗೆ ಸಂಬಂಧಿಸಿದ ಒಪ್ಪಂದಗಳು ಮುಂದೂಡಲ್ಪಡುತ್ತದೆ. ಶುಭ ಚಂದ್ರ ಗೋಚರದಿಂದ ಮಾತೃಶ್ರೀಯವರ ಸಹಾಯದಿಂದ ವೈಯಕ್ತಿಕ ಸಮಸ್ಯೆಗೆ ಪರಿಹಾರ ಒದಗುವುದು. ವಾರ ಮಧ್ಯೆ ಹಣಕಾಸಿನ ಪರಿಸ್ಥಿತಿ ಅಸ್ತವ್ಯಸ್ತವಾಗುವುದು. ಸಂಬಂಧಿಕರಲ್ಲಿ ಭಿನ್ನಾಭಿಪ್ರಾಯಗಳು ಉಂಟಾಗಲಿವೆ. ವಾರದ ಕಡೆಗೆ ಸ್ನೇಹಿತರಿಂದ ಒಳ್ಳೆಯ ಸುದ್ದಿ ಹಾಗೂ ಆಕಸ್ಮಿಕ ಧನಲಾಭ.
ಶ್ರೀ ಗಣಪತಿ ಅರ್ಚನೆ. ಶುಭ ಸಂಖ್ಯೆ-5.

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ಸೆಟ್ ಬ್ಯಾಕ್ ನಂತರ ಕಂ ಬ್ಯಾಕ್ ಇದ್ದೇ ಇರುತ್ತದೆ. ಕಷ್ಟ ಬಂದಾಗ ದುಡಿಮೆಯೇ ದೇವರು. ಫರ್ನಿಚರ್ ವ್ಯಾಪಾರಿಗಳಿಗೆ ಹೇರಳ ಧನಲಾಭ. ಎಲೆಕ್ಟ್ರಿಕಲ್ ವಸ್ತು ವಿತರಕರಿಗೆ ಉತ್ತಮ ಆರ್ಡರ್‌ಗಳು ದೊರೆಯುವುದರ ಮಧ್ಯೆ ಆಪ್ತೇಷ್ಟರ ಮಿಲನದಿಂದ ಮನಸಂತೋಷ. ಮನೋಭಿಷ್ಟ ವಸ್ತುಗಳ ಖರೀದಿಗೆ ಹಣ ವ್ಯಯ. ಶತ್ರುಗಳು ತಾತ್ಕಾಲಿಕವಾಗಿ ಹಿಂದೆ ಸರಿಯುತ್ತಾರೆ. ವೇದಾಂತ ವಿಷಯದಲ್ಲಿ ಆಸಕ್ತಿ.
ಶ್ರೀ ದೇವೀ ಸ್ತೋತ್ರ ಪಠಣ. ಶುಭ ಸಂಖ್ಯೆ-8.

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ಈ ಸಪ್ತಾಹ ನಿಮಗೆ 'ಕಭಿ ಖುಷಿ ಕಭಿ ಗಮ್' ಎಂಬಂತೆ ಸಾಗಲಿದೆ. ಹಣ ಸಂಪಾದನೆಗೆ ಕೊರತೆ ಇಲ್ಲ. ಆದರೆ ಬಾರಾಮಾರ್ಗವಾಗಿ ವ್ಯಯ ಆಗುತ್ತದೆ. ನಿಮ್ಮ ಬಹುಮುಖ ಪ್ರತಿಭೆ ಈ ವಾರ ಅನಾವರಣಗೊಳ್ಳುವುದು. ಸಾರ್ವಜನಿಕವಾಗಿ ಗೌರವಾದರಗಳಿಗೆ ಭಾಜನರಾಗುವಿರಿ. ಮಕ್ಕಳ ಸಾಧನೆಯಿಂದ ಸಂತಸ. ವಾರಾಂತ್ಯಕ್ಕೆ ಆಧ್ಯಾತ್ಮ ವಿಷಯಗಳತ್ತ ಮನಸ್ಸು ಹರಿಯುವುದರಿಂದ ಚಿತ್ತಕ್ಕೆ ಶಾಂತಿ ಎನಿಸುವುದು. ಶ್ರೀ ಶಿರಡಿಸಾಯಿ ದರ್ಶನ. ಶುಭ ಸಂಖ್ಯೆ-2.

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)

ಶುಭ ಭಾವಗಳಲ್ಲಿ ಚಂದ್ರ ಸಂಚಾರವಿರುವುದರಿಂದ ಧನಾಗಮ, ವಿಜಯ, ಮನೋವಾಂಛಿತ ಕಾರ್ಯಗಳಲ್ಲಿ ಸಫಲತೆಗಳು ನಿಮ್ಮನ್ನು ಮುದಗೊಳಿಸಲಿದೆ. ಮಿತ್ರರ ಮಿಲನ ಸಣ್ಣ ಪುಟ್ಟ 'ಪಾರ್ಟಿ'ಗಳು ನಡೆದೀತು. ವಾರ ಮುಂದೆ ಸಾಗಿದಂತೆ ಅಷ್ಟಮ ಶನಿದೇವನ ಪ್ರಭಾವದಿಂದ ಆರೋಗ್ಯಕ್ಕೂ, ಮನಃಶಾಂತಿಗೂ ಧಕ್ಕೆಯಾಗುವುದು. ವಾಹನ ಚಲಿಸುವಾಗ ಭಯ-ಭಕ್ತಿ ಇರಲಿ, ಉಡಾಫೆಯಿಂದ ತೊಂದರೆ ಅನುಭವಿಸುವಿರಿ. ಶ್ರೀ ದುರ್ಗಾಪರಮೇಶ್ವರಿ ಅರ್ಚನೆ. ಶುಭ ಸಂಖ್ಯೆ-7

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ವಾರದಾರಂಭಕ್ಕೆ ಬೃಹಸ್ಪತಿಯ ಅನುಗ್ರಹ ಚೆನ್ನಾಗಿದ್ದು ಕೆಲಸ ಕಾರ್ಯಗಳು ಸುಗಮವಾಗಿ ಸಾಗುವುದು. ಸುವರ್ಣ ಹಾಗೂ ಹಳದಿ ಧಾನ್ಯಗಳಿಂದ ಅಧಿಕ ಧನಲಾಭ. ನವೀನ ದುಬಾರಿ ಗೃಹ ಬಳಕೆ ವಸ್ತುಗಳ ಖರೀದಿ. ಸರ್ಕಾರಿ ಕೆಲಸ ಕಾರ್ಯಗಳಲ್ಲಿ ಅಧಿಕಾರಿಗಳ ಸಹಾಯಹಸ್ತ ದೊರಕುವುದು. ವಿವಾಹ ಸಂಬಂಧಿ ಮಾತುಕತೆಗಳಲ್ಲಿ ಪಾಸಿಟೀವ್ ಫಲ. ವಾರದ ಕಡೆಗೆ ಪರಸ್ಥಳ ವಾಸದಿಂದ ತೊಂದರೆಗಳು.
ಶ್ರೀ ಸುದರ್ಶನ ಮಂತ್ರ ಜಪಿಸಿ. ಶುಭ ಸಂಖ್ಯೆ-6.

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ಕೆಲವು ಬಾರಿ ಹಲವು ಪರೀಕ್ಷೆಗಳು ಒಂದೇ ಬಾರಿ ಎದುರಾಗುತ್ತವೆ. ಅದನ್ನು ಎದುರಿಸುವಲ್ಲಿ ನಿಮಗೆ ಆತ್ಮ ವಿಶ್ವಾಸ ತುಂಬುವ ಗುರು ಅಷ್ಟಮದಲ್ಲಿ ಸಂಚರಿಸುತ್ತಿದ್ದಾರೆ. ವಾರ ಮಧ್ಯೆ ಕೊಂಚ ಸಕಾರಾತ್ಮಕ ಬೆಳವಣಿಗೆಗಳೂ ಉಂಟು. ಕಾಂಟ್ರಾಕ್ಟರುಗಳಿಗೆ ಉತ್ತಮ ಯೋಜನೆಗಳು ದೊರಕುವ ಸಂಭವ ಉಂಟು. ಮನೆಯಲ್ಲೂ, ನೆರೆಹೊರೆಯಲ್ಲೂ ಉತ್ತಮ ಸಂಬಂಧವಿರಲಿ. ಮಾಂಗಲ್ಯ ಸರ ಮುಚ್ಚಿಕೊಂಡು ಓಡಾಡಿ. ಶ್ರೀ ಮನೆದೇವರ ಸನ್ನಿಧಿಗೆ ತೆರಳಿ. ಶುಭ ಸಂಖ್ಯೆ-4.

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ನಿಂತು ಹೋಗಿದ್ದ ಕೆಲಸ ಕಾರ್ಯಗಳು ಗುರುಕೃಪೆಯಿಂದ ಮುಂದೆ ಸಾಗುತ್ತವೆ. ಹೊಸ ಜನರ ಸಂಪರ್ಕ ಇದಕ್ಕೆ ಪೂರಕವೆನಿಸಲಿದೆ. ಋಣಭಾರಗಳಿದ್ದರೆ ತೀರಿಸಲು ಪ್ರಯತ್ನಿಸಿ. ನಿಮ್ಮ ರಾಶಿ ಸ್ಥಿತ ಕೇತು ಹಾಗೂ ಸಪ್ತಮ ಸ್ಥಿತ ರಾಹು ಫಲಪ್ರಾಪ್ತಿ ಕಾಲದಲ್ಲಿ ಅಡಚಣೆ ಉಂಟು ಮಾಡುವರು. ಆರೋಗ್ಯದ ಬಗ್ಗೆ ಅಸಡ್ಡೆ ಸಲ್ಲದು. ಮನೆ ಕೆಲಸದವರೇ ನಂಬಿಕೆ ದ್ರೋಹ ಮಾಡುವರು.
ಶ್ರೀ ಸಪ್ತಮಾತೃಕಾದೇವಿ ಸ್ತುತಿ. ಶುಭ ಸಂಖ್ಯೆ-3

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯು)

ತುಳಿಯುವವರು ಎಷ್ಟೇ ಜನ ಇದ್ದರೂ ಕಾಪಾಡಲು ಒಬ್ಬ ದೇವರಿದ್ದಾನೆ. ಕೈಗೊಂಡ ಕೆಲಸಕಾರ್ಯಗಳು ನಿಧಾನಗತಿಯಲ್ಲಿ ಸಾಗಿದರೂ ಪ್ರಯಾಸದಿಂದ ಗುರಿ ಮುಟ್ಟುತ್ತದೆ. ಶ್ರೀಮತಿಯವರ ಶಾಪಿಂಗ್‌ನಿಂದ ಪರ್ಸ್ ಖಾಲಿಯಾಗುವುದು. ಅರ್ಧಾಷ್ಟಮ ಶನಿದೇವ ಕುಟುಂಬದಲ್ಲಿ ಕಲಹ, ಮನಸ್ತಾಪಗಳನ್ನೂ, ವೃತ್ತಿರಂಗದಲ್ಲಿ ಹಿನ್ನಡೆಯನ್ನೂ ನೀಡಲಿದ್ದಾನೆ. ಎಲ್ಲವನ್ನೂ ತಾಳ್ಮೆಯಿಂದ ನಿಭಾಯಿಸಿಕೊಳ್ಳಿ.
ಶ್ರೀ ನೃಸಿಂಹಸ್ವಾಮಿ ಉಪಾಸನೆ. ಶುಭ ಸಂಖ್ಯೆ-2.

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ವಾರದ ಆದಿಗೆ ಜವಳಿ, ರೇಷ್ಮೆ, ರೆಡಿಮೇಡ್ ವಸ್ತು ವ್ಯಾಪಾರಗಳಲ್ಲಿ ಅಧಿಕ ಧನಲಾಭವಾಗುವುದು. ಮನೆ ಮಂದಿಯಲ್ಲಿದ್ದ ವೈಮನಸ್ಸುಗಳ ನಿವಾರಣೆ, ನ್ಯಾಯಾಲಯ ವಿಚಾರಗಳು ನಿಮ್ಮ ಪರವಾಗಿ ಇತ್ಯರ್ಥವಾಗಬಹುದು. ಪುತ್ರ-ಪುತ್ರಿಯರು ಉನ್ನತ ಸಾಧನೆಗೈಯ್ಯುವರು. ಇದರಿಂದ ಸಮಾಜದಲ್ಲಿ ಸ್ಥಾನಮಾನ ವೃದ್ಧಿ. ಮನೆಯ ಪರಿಚಾರಕ ವರ್ಗದವರು ಮೋಸ ಮಾಡಬಹುದು.
ಶ್ರೀ ಔದುಂಬರ ವೃಕ್ಷಕ್ಕೆ ಪ್ರದಕ್ಷಿಣೆ. ಶುಭ ಸಂಖ್ಯೆ-9.

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ಚಂದ್ರ ಗ್ರಹದ ಶುಭ ಸಂಚಾರದಿಂದ ನಿಮ್ಮ ಸಾಮಾಜಿಕ ಕೆಲಸ ಕಾರ್ಯಗಳು ನಿರ್ವಿಘ್ನವಾಗಿ ಸಾಗುವುದು. ಕೃಷಿಕರಿಗೆ ಉತ್ತಮ ಇಳುವರಿಯೂ, ಬೆಲೆಯೂ ದೊರೆಯುವುದು. ರಿಯಲ್ ಎಸ್ಟೇಟ್ ವ್ಯವಹಾರಸ್ಥರಿಗೆ ಬಂಪರ್ ಒಪ್ಪಂದಗಳು ಉಂಟಾಗುವ ಸಾಧ್ಯತೆ ಇದೆ. ವಯಸ್ಸಿಗೆ ಬಂದ ಮಕ್ಕಳು ನಿಮ್ಮ ಮಾತನ್ನು ವಿರೋಧಿಸುವರು. ಇದರಿಂದ ನೀವು ಚಿಂತೆಗೀಡಾಗುವಿರಿ. ತಾಳ್ಮೆಯ ವಾಹನ ಸಂಚಾರ ಬಾಳ್ವೆಗೆ ಒಳಿತು.
ಶ್ರೀ ಶನಿ ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ-5.

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ವಾರದಾರಂಭಕ್ಕೆ ನಿಮ್ಮ ರಾಶಿಗೆ ಪ್ರವೇಶಿಸುವ ಚಂದ್ರನಿಂದ ಎಲ್ಲರಲ್ಲಿ ಅನುರಾಗ, ಬಂಧು ಜನರಲ್ಲಿ ಆದರ, ಹೊಸ ಅಧಿಕಾರ ಪ್ರಾಪ್ತಿಗಳನ್ನು ದಯಪಾಲಿಸಲಿದ್ದಾನೆ. ಹೊನ್ನು, ಹೆಣ್ಣು ಪ್ರಾಪ್ತಿ ಮದುವೆ ಬಂಧನ ಸಂಭವ. ನಿಮ್ಮ ರಾಶಿಯಲ್ಲೇ ಶನಿದೇವನೂ ಸ್ಥಿತನಿದ್ದಾನೆ. ಪ್ರಾರಬ್ಧಕರ್ಮವನ್ನು ಕಳೆಯಲು ಭಗವಂತನನ್ನು ಆಶ್ರಯಿಸಿ. ದುಡುಕಿನ ಡ್ರೈವಿಂಗ್ ಖಂಡಿತ ಬೇಡವೇ ಬೇಡ.
ಶ್ರೀ ವೆಂಕಟೇಶ್ವರನಿಗೆ ತುಳಸಿ ಮಾಲೆ ಸಮರ್ಪಣೆ. ಶುಭ ಸಂಖ್ಯೆ-1.

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ಮನೋಧೈರ್ಯಗಳಿಂದ ವಾರಕ್ಕೆ ಸ್ವಾಗತ. ಧನಧಾನ್ಯ, ಸ್ಥಾನ, ವಸ್ತ್ರ ಲಾಭ. ಮುಖ್ಯ ಕೆಲಸಗಳು ಅಯಾಚಿತವಾಗಿ ಫಲಪ್ರದವಾಗುವ ಯೋಗ ಗುರುಗ್ರಹ ದಯಪಾಲಿಸಿದೆ. ಪ್ರಿಯ ಕಾಮಿನಿಯ ಸಾಂಗತ್ಯ, ಸಹವಾಸ ಮನಸ್ಸಿಗೆ ಮುದ ನೀಡುವ ಪ್ರಸಂಗಗಳು. ಬಾಧಕ ಸ್ಥಾನದಲ್ಲಿರುವ ರಾಹು-ಕೇತುಗಳಿಂದ ದುರ್ಮಾರ್ಗಿಗಳ ಸಹವಾಸದಿಂದ ತೊಂದರೆ ಎದುರಿಸಬೇಕಾದೀತು. ಬೆಟ್ಟಿಂಗ್ ಕೈ ಸುಡುತ್ತದೆ.
ಶ್ರೀ ರಾಘವೇಂದ್ರ ಆರಾಧನೆ. ಶುಭ ಸಂಖ್ಯೆ-8.

ತಿ.ನರಸೀಪುರದಲ್ಲಿ ಮರಳು ತೆಗೆಯಲು ಅವಕಾಶ ಕೊಡಿ

ಎತ್ತಿನಗಾಡಿ ಮಾಲೀಕರು, ಕೂಲಿ ಕಾರ್ಮಿಕರ ಸಂಘದಿಂದ ಉಸ್ತುವಾರಿ ಸಚಿವ ಡಾ. ಮಹದೇವಪ್ಪನವರಿಗೆ ಮನವಿ



ಸಚಿವ ಮಹದೇವಪ್ಪ ಅವರನ್ನು ಸನ್ಮಾನಿಸಿ, ಮನವಿ ಸಲ್ಲಿಸಿದ ಎತ್ತಿನಗಾಡಿ ಮಾಲೀಕರು ಹಾಗೂ ಕೂಲಿ ಕಾರ್ಮಿಕರು

ತಿ.ನರಸೀಪುರ ಜೂ.10– ಕ್ಷೇತ್ರದ ಜನತೆ ಕಾಂಗ್ರೆಸ್ ಪಕ್ಷವನ್ನು ಗೆಲ್ಲಿಸುವ ಮೂಲಕ ಪ್ರಜಾಪ್ರಭುತ್ವದ ಆಶಯಕ್ಕೆ ಪೂರಕವಾಗಿದ್ದಾರೆ ಎಂದು ಸಮಾಜ ಕಲ್ಯಾಣ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ ಹೇಳಿದರು.

ತಾಲೂಕು ಎತ್ತಿನಗಾಡಿ ಮಾಲೀಕರು ಹಾಗೂ ಕೂಲಿ ಕಾರ್ಮಿಕರ ಸಂಘದ ಅಧ್ಯಕ್ಷ ತಿರುಮಕೂಡಲು ಪುಟ್ಟು ನಿಯೋಗ ಭೇಟಿ ಮಾಡಿ ಮರಳು ಕೂಲಿ ಕಾರ್ಮಿಕರಿಗೆ ಸರ್ಕಾರದ ನಿಯಮದಡಿ ಮರಳು ತೆಗೆದು ಸಾರ್ವಜನಿಕರಿಗೆ ಉಪಯೋಗವಾಗುವ ರೀತಿಯಲ್ಲಿ ಅವಕಾಶ ಮಾಡಿಕೊಡುವಂತೆ ಸಲ್ಲಿಸಿದ ಮನವಿ ಸ್ವೀಕರಿಸಿದ ಅವರು ಮಾತನಾಡಿದರು.

ಮುಂದಿನ ದಿನಗಳಲ್ಲಿ ಕ್ಷೇತ್ರದಲ್ಲಿ ಅಭಿವೃದ್ಧಿ ಪರ್ವವೇ ಆರಂಭವಾಗುವುದರಲ್ಲಿ ಸಂಶಯವಿಲ್ಲ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ರಾಜ್ಯದಲ್ಲಿ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿದ್ದು, ಮಹದೇವಪ್ಪ ಪ್ರಭಾವಿ ಖಾತೆಯ ಸಚಿವರಾಗಿದ್ದು ಕ್ಷೇತ್ರ ಹಿಂದೆಂದೂ ಕಾಣದಂತ ಅಭಿವೃದ್ಧಿ ಕಾಣಲಿದೆ ಎಂದ ಅವರು, ಕಾಂಗ್ರೆಸ್ ಪಕ್ಷವನ್ನು ಗೆಲ್ಲಿಸುವ ಮೂಲಕ ಕ್ಷೇತ್ರದ ಜನತೆ ಸರಿಯಾದ ನಿರ್ಧಾರ ತೆಗೆದುಕೊಂಡಿದ್ದಾರೆ ಎಂದರು.

ಮುಂದಿನ 5 ವರ್ಷಗಳಲ್ಲಿ ಆಗಬಹುದಾದ ಎಲ್ಲ ಕೆಲಸಗಳನ್ನು ಮಾಡಿಕೊಡುತ್ತೇನೆ ಎಂದು ಭರವಸೆ ನೀಡಿದರು. ಸಿದ್ದರಾಮಯ್ಯ ರಾಜ್ಯ ಕಂಡ ಧೀಮಂತ ನಾಯಕರು. ರಾಜ್ಯದ ಜನತೆಗೆ ಅವರು ನೀಡಿದ ಕೊಡುಗೆ ಅಪಾರವಾಗಿದ್ದು, ಬಡವರ ಪರವಾದ ಆಶಾಕಿರಣವಾಗಿದ್ದ ಅವರು ಅನ್ನಭಾಗ್ಯ,ಇಂದಿರಾ ಕ್ಯಾಂಟೀನ್, ಕ್ಷೀರಭಾಗ್ಯ ಸೇರಿದಂತೆ ಅನೇಕ ಜನಪರವಾದ ಯೋಜನೆಗಳನ್ನು ಜಾರಿಗೆ ತಂದು ಜನತೆಯ ಕಷ್ಟ ಸುಖಗಳಿಗೆ ಸ್ಪಂದಿಸುವ ಕೆಲಸ ಮಾಡಿದ್ದಾರೆ. ಅವರು ಮತ್ತೊಮ್ಮೆ ಮುಖ್ಯಮಂತ್ರಿಯಾಗಿದ್ದಾರೆ. ತಿ.ನರಸೀಪುರ ಕ್ಷೇತ್ರವನ್ನು ಸಾವಿರಾರು ಕೋಟಿ ರೂ.ಗಳ ವೆಚ್ಚದಲ್ಲಿ ಸಮಗ್ರವಾಗಿ ಅಭಿವೃದ್ಧಿಪಡಿಸಲು ಕೈ ಜೋಡಿಸೋಣ ಎಂದರು. ಲಕ್ಷ್ಮಣ, ಗುಂಡ, ಮೊಟ್ಟೆ ಮಹೇಶ್, ಕುಮಾರ, ಡಿಲೀಟ್ ಬಸವರಾಜು, ನಿಂಗರಾಜು, ಮಧು, ಗಣೇಶ, ನವೀನ, ವಿನೋದ್, ಉಮೇಶ, ನವೀನ ಹಾಜರಿದ್ದರು.

ಗ್ಯಾರಂಟಿ ಫಲಾನುಭವಿಗಳನ್ನು ಅಲೆದಾಡಿಸಬೇಡಿ: ಡಿ.ರವಿಶಂಕರ್

ಕೆ.ಆರ್.ನಗರ, ಜೂ.10 – ಕಾಂಗ್ರೆಸ್ ಪಕ್ಷ ಚುನಾವಣೆಗೂ ಮುನ್ನಾ ಜನತೆಗೆ ನೀಡಿದ ಐದು ಗ್ಯಾರಂಟಿಗಳನ್ನು ಜಾರಿಗೆ ತರುವ ಮೂಲಕ ಕೊಟ್ಟ ಭರವಸೆಯನ್ನು ಈಡೇರಿಸಿದ್ದು ಸವಲತ್ತಿಗಾಗಿ ಅರ್ಜಿ ಸಲ್ಲಿಸಬೇಕಾಗಿದೆ. ಇದಕ್ಕೆ ಬೇಕಾದ ದಾಖಲಾತಿ ಪಡೆಯಲು ಕಚೇರಿಗೆ ಬಂದಾಗ ತಾಲೂಕು ಮಟ್ಟದ ಅಧಿಕಾರಿಗಳು ಜನತೆಯನ್ನು ಅಲೆದಾಡಿಸಬಾರದು ಎಂದು ಶಾಸಕ ಡಿ.ರವಿಶಂಕರ್ ಎಚ್ಚರಿಕೆ ನೀಡಿದ್ದಾರೆ.

ಪಟ್ಟಣದ ತಾಲೂಕು ಕಚೇರಿ ಸಭಾಂಗಣದಲ್ಲಿ ನಡೆದ ಗ್ರಾಮ ಲೆಕ್ಕಾಧಿಕಾರಿಗಳು ಮತ್ತು ರಾಜಸ್ವ ನಿರೀಕ್ಷಕರ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸರ್ಕಾರ ಜಾರಿಗೆ ತಂದ ಜನಪರ ಯೋಜನೆಗಳು ಯಶಸ್ವಿಯಾಗಿ ಅನುಷ್ಠಾನಗೊಳ್ಳಲು ಅಧಿಕಾರಿಗಳ ಸಹಕಾರ ಅಗತ್ಯ ಇದನ್ನು ಅಧಿಕಾರಿಗಳು ಅರಿತು ಜನರ ಮನೆ ಬಾಗಿಲಿಗೆ ಸವಲತ್ತು ತಲುಪಿಸುವ ಕೆಲಸ ಮಾಡಬೇಕು ಎಂದರು. ಐದು ಗ್ಯಾರಂಟಿಗಳನ್ನು ವಿತರಿಸುವ ಪ್ರಕ್ರಿಯೆ ಮುಗಿದ ನಂತರ ಅಧಿಕಾರಿಗಳಿಗೆ ಒತ್ತಡ ಕಡಿಮೆಯಾಗಲಿದೆ. ಅವರೆಗೆ ತಾವುಗಳು ಸಾರ್ವಜನಿಕರೊಂದಿಗೆ ಸೌಜನ್ಯದಿಂದ ವರ್ತಿಸುವುದರ ಜತೆಗೆ ಸಾಧ್ಯವಾದಷ್ಟು ಜರೂರಾಗಿ ದಾಖಲಾತಿಗಳನ್ನು ನೀಡಬೇಕು ಎಂದು ಸಲಹೆ ನೀಡಿದ ಶಾಸಕರು ಇದಕ್ಕೆ ವಿರುದ್ಧವಾಗಿ ನಡೆದುಕೊಂಡ ಅಧಿಕಾರಿಗಳನ್ನು ಕ್ಷೇತ್ರದಿಂದ ಹೊರ ಕಳುಹಿಸಲಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ತಹಶೀಲ್ದಾರ್ ಸಂತೋಷ್ ಕುಮಾರ್, ತಿಮ್ಮಪ್ಪ, ಉಪ ತಹಶೀಲ್ದಾರ್‌ಗಳಾದ ಕೆ.ಜೆ.ಶರತ್‌ಕುಮಾರ್, ಯೋಗಾರಾಜ್, ಮಹೇಶ್, ಅಸ್ಲಂಪಾಷ, ಮಂಜುನಾಥ್, ಮಹೇಂದ್ರ ಶಿವಕುಮಾರ್ ಸೇರಿದಂತೆ ಗ್ರಾಮ ಲೆಕ್ಕಾಧಿಕಾರಿಗಳು, ರಾಜಸ್ವ ನಿರೀಕ್ಷಕರು ಹಾಜರಿದ್ದರು.

2500ಕ್ಕೂ ಹೆಚ್ಚು ಸ್ವಸಹಾಯ ಸಂಘಗಳ ಸ್ಥಾಪನೆ



ಹೆಚ್.ಡಿ.ಕೋಟೆ, ಜೂ.10 – ತಾಲೂಕಿನಲ್ಲಿ ಕಳೆದ ಐದು ವರ್ಷಗಳಲ್ಲಿ 2500ಕ್ಕೂ ಹೆಚ್ಚು ಧರ್ಮಸ್ಥಳ ಯೋಜನೆಯ ಸ್ವಸಹಾಯ ಸಂಘಗಳನ್ನು ಸ್ಥಾಪಿಸಲಾಗಿದೆ ಎಂದು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ನಿರ್ಗಮಿತ ಯೋಜನಾಧಿಕಾರಿ ಶಶಿಧರ್ ತಿಳಿಸಿದರು.

ಪಟ್ಟಣದ ಪುರಸಭಾ ಕಚೇರಿಯಲ್ಲಿ ಬೀಳ್ಕೊಡುಗೆ ಸ್ವೀಕರಿಸಿ ಮಾತನಾಡಿದ ಅವರು, ತಾಲೂಕಿಗೆ ಬಂದು ಐದು ವರ್ಷಗಳು ಕಳೆದದ್ದೇ ತಿಳಿಯಲಿಲ್ಲ. ಸಬಲೆಯರ ಮತ್ತು ದುರ್ಬಲರನ್ನು ಗುರುತಿಸಿ ಅವರಿಗೆ ಸೇವೆ ಸಲ್ಲಿಸುವ ಭಾಗ್ಯ ತಾಲೂಕಿನಲ್ಲಿ ದೊರೆಯಿತು. ಅದಕ್ಕೆ ನಾನೂ ಈ ತಾಲೂಕನ್ನು ಒಲ್ಲದ ಮನಸ್ಸಿನಿಂದ ಬಿಟ್ಟು ತೆರಳುವ ಅನಿವಾರ್ಯ ಬಂದೊದಗಿದೆ ಎಂದರು.

ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಐಡಿಯಾ ವೆಂಕಟೇಶ್ ಮಾತನಾಡಿ, ತಾಲೂಕಿನಲ್ಲಿ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಘವು ಕೆರೆಗಳ ಅಭಿವೃದ್ಧಿ, ಸಂಕಷ್ಟದಲ್ಲಿರುವ ಬಡ ಕುಟುಂಬ ವರ್ಗಗಳಿಗೆ, ಮಹಿಳಾ ಸಂಘಗಳಿಗೆ, ನಿರ್ಗತಿಕ ಬಡ ಕುಟುಂಬದವರಿಗೆ ಮನೆ ನಿರ್ಮಿಸಿ ಕೊಡುವುದರ ಮೂಲಕ ಹಲವಾರು ಯೋಜನೆಗಳನ್ನು ಕೈಗೊಂಡು ಸಾಕಷ್ಟು ಅಭಿವೃದ್ಧಿ ಕೆಲಸಗಳನ್ನು ಮಾಡುವುದರಲ್ಲಿ ಸಂಸ್ಥೆ ಮುಂದಾಗಿದೆ ಎಂದರು.

ಈ ವೇಳೆ ಪುರಸಭಾ ಮುಖ್ಯಾಧಿಕಾರಿ ಸುರೇಶ್, ಸ್ಥಾಯಿ ಸಮಿತಿ ಅಧ್ಯಕ್ಷ ಐಡಿಯಾ ವೆಂಕಟೇಶ್, ಸದಸ್ಯರುಗಳಾದ ಪ್ರೇಮ್ ಸಾಗರ್, ಆಸಿಫ್, ಕನ್ನಡ ಸಾಹಿತ್ಯ ಪರಿಷತ್ತಿನ ತಾಲೂಕು ಅಧ್ಯಕ್ಷ ಕನ್ನಡ ಪ್ರಮೋದ್, ಕೃಷ್ಣ, ಜಿಮ್ ಯಶವಂತ್, ಧರ್ಮಸ್ಥಳ ಸಂಘದ ಮೇಲ್ವಿಚಾರಕಿ ಪವಿತ್ರ, ಮ್ಯಾನೇಜರ್ ರೇಷ್ಮಾ, ವರ್ತಕರ ಸಂಘದ ಅಧ್ಯಕ್ಷ ವಿನಯ ಭಜರಂಗಿ, ಡೈರಿ ಶ್ರೀಕಾಂತ್ ಸೇರಿದಂತೆ ಇತರರು ಭಾಗವಹಿಸಿದ್ದರು.

ಹೊಸೂರು ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಅಧ್ಯಕ್ಷ, ಉಪಾಧ್ಯಕ್ಷರ ಅವಿರೋಧ ಆಯ್ಕೆ



ಚುಂಚನಕಟ್ಟೆ, ಜೂ.10– ಸಾಲಿಗ್ರಾಮ ತಾಲೂಕಿನ ಹೊಸೂರು ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಜೆಡಿಎಸ್ ಬೆಂಬಲಿತರಾದ ಎಚ್.ಎಲ್. ಸುದರ್ಶನ್ ಮತ್ತು ಉಪಾಧ್ಯಕ್ಷರಾಗಿ ಪಾರ್ಥಯ್ಯ ಅವಿರೋಧವಾಗಿ ಆಯ್ಕೆಯಾದರು.

ಶುಕ್ರವಾರ ಸಂಘದ ಕಚೇರಿಯಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಎಚ್.ಎಲ್. ಸುದರ್ಶನ್ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಪಾರ್ಥಯ್ಯ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಚುನಾವಣಾಧಿಕಾರಿ ಸಹಕಾರ ಇಲಾಖೆಯ ಅಧಿಕಾರಿ ಎಸ್.ರವಿ ಇವರ ಅವಿರೋಧ ಆಯ್ಕೆಯನ್ನು ಪ್ರಕಟಿಸಿದರು

ಹಾಲಿ ಅಧ್ಯಕ್ಷರಾಗಿದ್ದ ಎಸ್.ಎಸ್. ಶಿವಸ್ವಾಮಿ ಮತ್ತು ಉಪಾಧ್ಯಕ್ಷರಾಗಿದ್ದ ಸವಿತಾ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಈ ಚುನಾವಣೆ ನಡೆಯಿತು.

ಚುನಾವಣಾ ಸಭೆಯಲ್ಲಿ ಸಂಘದ ನಿರ್ದೇಶಕರಾದ ಎಚ್.ಆರ್.ಮಹೇಶ್, ಎಸ್.ಎಸ್.ಶಿವಸ್ವಾಮಿ, ಎಚ್.ಆರ್.ಮಧುಚಂದ್ರ ಹುಚ್ಚೇಗೌಡ, ಭಾಗ್ಯಮ್ಮ, ಸುಲೋಚನಾ, ಸವಿತಾ, ಕೃಷ್ಣಮೂರ್ತಿ, ಕೆಂಪನಾಯಕ, ಸಹಕಾರ ಬ್ಯಾಂಕಿನ ಮೇಲ್ವಿಚಾರಕ ಸತೀಶ್, ಸಂಘದ ಸಿಇಓ ಚಂದ್ರಕಲಾ ಇದ್ದರು

ಈ ಸಂದರ್ಭದಲ್ಲಿ ಜಿಲ್ಲಾ ಹಾಪ್‌ಕಾಮ್ಸ್ ಮಾಜಿ ಅಧ್ಯಕ್ಷ ಸುದರ್ಶನ್, ಮಾಜಿ ಗ್ರಾಪಂ ಉಪಾಧ್ಯಕ್ಷರಾದ ಕೃಷ್ಣಮೂರ್ತಿ, ಭಾಸ್ಕರ್, ಮಾಜಿ ಸದಸ್ಯ ಶಿವಣ್ಣ, ಹೊಸೂರು ಡೈರಿ ಮಾಜಿ ಅಧ್ಯಕ್ಷ ಸುರೇಶ್, ನಿರ್ದೇಶಕರಾದ ಸ್ವಾಮಿ, ಬುದ್ದಿಸಾಗರ, ಮುಖಂಡರಾದ ಎಚ್.ಆರ್.ರಾಘವೇಂದ್ರ, ಜಯಶಂಕರ್ ಕೋಟಿ,ಸಂತೋಷ್, ವಸಂತ್ ಹರೀಶ, ಶಿಲ್ಪಿ, ಗೋಪಿ, ಅವ್ವಾಚಿ, ಬೆಳ್ಳಿರಾಘು, ದರ್ಶನ್ ವಿಶ್ವಚಾರಿ, ದಿಡ್ಡಹಳ್ಳಿ ಅಶೋಕ್ ಸೇರಿದಂತೆ ಮತ್ತಿತರರು ನೂತನ ಅಧ್ಯಕ್ಷ, ಉಪಾಧ್ಯಕ್ಷರನ್ನು ಅಭಿನಂದಿಸಿ, ಪಟಾಕಿ ಸಿಡಿಸಿ ವಿಜಯೋತ್ಸವ ಆಚರಿಸಿದರು.

ಉಚಿತ ಕಣ್ಣಿನ ತಪಾಸಣಾ ಶಿಬಿರ

ಬನ್ನೂರು : ಪಟ್ಟಣದ ಖಾಸಗಿ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ವರ್ಧಮಾನ್ ಜೈನ್ ನೇತ್ರಾಲಯ, ಆರೋಗ್ಯ ಕುಟುಂಬ ಇಲಾಖೆ ಮತ್ತು ಜಿಲ್ಲಾ ಅಂಧತ್ವ ನಿವಾರಣಾ ಸಂಸ್ಥೆ ಸಹಯೋಗದಲ್ಲಿ ಶನಿವಾರ ಉಚಿತ ಕಣ್ಣಿನ ತಪಾಸಣಾ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. ಬೆಳಗ್ಗೆ 10 ರಿಂದ ಪ್ರಾರಂಭವಾಗಿ ಮಧ್ಯಾಹ್ನ 1 ರವರೆಗೆ ನಡೆದ ಶಿಬಿರದಲ್ಲಿ ವಿವಿಧ ಗ್ರಾಮ ಮತ್ತು ಪಟ್ಟಣ ಪ್ರದೇಶದಿಂದ ಸುಮಾರು 150 ಜನರು ಆಗಮಿಸಿ ತಮ್ಮ ಕಣ್ಣಿನ ತಪಾಸಣೆಯನ್ನು ಮಾಡಿಸಿಕೊಂಡು ಚಿಕಿತ್ಸೆ ಪಡೆದುಕೊಂಡರು. 35ಜನ ಶಸ್ತ್ರಚಿಕಿತ್ಸೆಗೆ ಅರ್ಹತೆ ಪಡೆದು ಕೊಯಮತ್ತೂರು ಆಸ್ಪತ್ರೆಗೆ ತೆರಳಿದರು. ಹಿರಿಯ ಆಡಳಿತ ವೈದ್ಯಾಧಿಕಾರಿ ಡಾ.ರವಿಕುಮಾರ್, ಕಣ್ಣಿನ ವೈದ್ಯರಾದ ಡಾ.ರಂಗಸ್ವಾಮಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಮರು ಮೌಲ್ಯಮಾಪನದಿಂದ ತಾಲೂಕಿಗೆ ಪ್ರಥಮ ಸ್ಥಾನ



ತಿ.ನರಸೀಪುರ, ಜೂ.10– ಎಸ್‌ಎಸ್‌ಎಲ್‌ಸಿ ಮರು ಮೌಲ್ಯಮಾಪನದಲ್ಲಿ ಸೋಸಲೆ ಆದರ್ಶ ವಿದ್ಯಾಲಯದ ವಿದ್ಯಾರ್ಥಿ ಬಿ.ಆರ್. ಪ್ರಜ್ವಲ್ ಗೌಡ ಹೆಚ್ಚುವರಿ 6 ಅಂಕಗಳನ್ನು ಪಡೆದು ಒಟ್ಟು 617 ಅಂಕಗಳನ್ನು ಪಡೆಯುವ ಮೂಲಕ ತಿ.ನರಸೀಪುರ ತಾಲೂಕಿಗೆ ಪ್ರಥಮ ಸ್ಥಾನ ಪಡೆದಿದ್ದಾರೆ.

ಮರು ಮೌಲ್ಯಮಾಪನಕ್ಕೂ ಮುನ್ನ ಈ ವಿದ್ಯಾರ್ಥಿಗೆ 611 ಅಂಕ ಬಂದಿತ್ತು ಇಂಗ್ಲೀಷ್, ವಿಜ್ಞಾನ, ಸಮಾಜ ವಿಜ್ಞಾನ ಮೂರು ವಿಷಯದಲ್ಲೂ ಮರುಮೌಲ್ಯಮಾಪನ ಮಾಡಿಸಿದ ತಲಾ 2 ಅಂಕಗಳು ಸೇರಿ ಒಟ್ಟು 6 ಅಂಕಗಳು ಹೆಚ್ಚಾಗಿದೆ. ಇದರಿಂದ ತಾಲೂಕಿಗೆ ಪ್ರಥಮ ಮಾತ್ರವಲ್ಲದೆ, ಜಿಲ್ಲೆಗೆ ತೃತೀಯ ಸ್ಥಾನವನ್ನು, ರಾಜ್ಯಕ್ಕೆ 8ನೇ ಸ್ಥಾನವನ್ನು ಪಡೆದಿದ್ದಾನೆ. ಸರ್ಕಾರಿ ಪ್ರೌಢಶಾಲೆಯಲ್ಲಿ ಕನ್ನಡ ಭಾಷಾ ಶಿಕ್ಷಕ ಬಿ.ಆರ್.ರಂಗಸ್ವಾಮಿ ಹಾಗೂ ಗೌರಿ ದಂಪತಿಯ ಪುತ್ರ

ಜಯಪುರದಲ್ಲಿ ವಿಶ್ವಗುರು ಬಸವೇಶ್ವರ ಬಳಗದ ನಾಮಫಲಕ ಅನಾವರಣ



ಜಯಪುರ, ಜೂ.10– ಬಸವಣ್ಣನವರನ್ನು ಒಂದು ಜಾತಿಗೆ ಸೀಮಿತಗೊಳಿಸಬೇಡಿ. ಅವರು ಮಹಾತ್ಮರು. ಅವರು ಹೇಳಿದಂತೆ ನಡೆಯಬೇಕು ಎಂದು ಬರಡನಪುರ ಮಹಾಂತೇಶ್ವರ ಸ್ವಾಮಿ ಮಠದ ಪರಶಿವಮೂರ್ತಿ ಸ್ವಾಮೀಜಿ ತಿಳಿಸಿದರು.

ಅವರು ಜಯಪುರ ಗ್ರಾಮದಲ್ಲಿ ಶುಕ್ರವಾರ ವಿಶ್ವಗುರು ಬಸವೇಶ್ವರ ಬಳಗದ ನಾಮಫಲಕವನ್ನು ಅನಾವರಣಗೊಳಿಸಿ ಮಾತನಾಡಿದರು.

ಪ್ರಾರಂಭದಲ್ಲಿ ಸಂಘ ಸಂಸ್ಥೆಗಳನ್ನು ಸ್ಥಾಪಿಸಿ ಉದ್ಘಾಟಿಸಿ ಅನಂತರ ಕೈಬಿಡಬಾರದು. ಸಂಘದ ಮೂಲ ಉದ್ದೇಶ ನಿಸ್ವಾರ್ಥ ಸೇವೆಯಾಗಿರಬೇಕು. ಪ್ರತಿಯೊಬ್ಬರು ವಿವಿಧ ಸೇವಾ ಕಾರ್ಯಗಳಲ್ಲಿ ತೊಡಗಿಸಿಕೊಂಡು ಒಗ್ಗಟ್ಟಾಗಿರಬೇಕು ಎಂದರು.

ಬರಡನಪುರ ಗ್ರಾಮ ಮಹಾಂತೇಶ್ವರ ಮಠದ ಪೀಠಾಧ್ಯಕ್ಷರಾದ ಪರಶಿವಮೂರ್ತಿ ಸ್ವಾಮೀಜಿ, ಗಣೇಶ್ ಸ್ವಾಮಿ, ಗೌಡಿಕೆ ಮಲ್ಲಪ್ಪ, ಹಿರಿಯರಾದ ಎ.ದೇವಣ್ಣ, ಸೋಮಪ್ಪ, ಹೊಟೇಲ್ ಸ್ವಾಮಿ ಜಯಪುರ ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ನಾಗರಾಜು, ಗ್ರಾಮ ಪಂಚಾಯಿತಿ ಸದಸ್ಯ ಬಿ.ರೇಣುಕಾ, ಮಾಜಿ ತಾ.ಪಂ ಜವರನಾಯಕ, ಕಾಂತರಾಜು, ಸುರೇಶ್, ಶಿವರಾಜು, ಜಯಪುರ ಡೇರಿ ಕಾರ್ಯದರ್ಶಿ ಪಿ.ಬಸವರಾಜು, ಡೇರಿ ಸಿದ್ದಪ್ಪಾಜಿ, ಸೋಮೇಶ್, ಶಿವಣ್ಣ ಮತ್ತು ವಿಶ್ವಗುರು ಬಸವೇಶ್ವರ ಬಳಗದ ಗೌರವಾಧ್ಯಕ್ಷ ವೆಂಕಟರಮಣ, ಅಧ್ಯಕ್ಷ ಮಹೇಶ್, ಉಪಾಧ್ಯಕ್ಷ ಎಂ.ಮಹೇಶ, ಕಾರ್ಯದರ್ಶಿ ಅನಿಲ್‌ಕುಮಾರ್, ಖಜಾಂಚಿ ಡಿ.ದೇವಣ್ಣ, ಸಂಘಟನಾ ಕಾರ್ಯದರ್ಶಿ ಎಂ.ಮಹದೇವಸ್ವಾಮಿ, ಸಂಚಾಲಕ ರವಿಕುಮಾರ್, ನಿರ್ದೇಶಕರಾದ ರುದ್ರಪ್ಪ, ಸುರೇಶ್, ಉಮೇಶ, ಪಿ.ಅಂಕಪ್ಪ ಮಹೇಶ್ ಇದ್ದರು.

ನಿರುದ್ಯೋಗ ಸಮಸ್ಯೆ ನಿವಾರಣೆಯಿಂದ ರಾಜ್ಯದ ಅಭಿವೃದ್ಧಿ ಸಾಧ್ಯ

ಕೌಶಲ್ಯ ತರಬೇತಿ ಉದ್ಘಾಟಿಸಿದ ಶಾಸಕ ಎ.ಆರ್.ಕೃಷ್ಣಮೂರ್ತಿ ಪ್ರತಿಪಾದನೆ



ತಿ. ನರಸೀಪುರ, ಜೂ.10–ಮಹಿಳೆಯರು ಸ್ವಂತ ಉದ್ಯಮಗಳನ್ನು ಪ್ರಾರಂಭಿಸಿ ಸ್ವಾವಲಂಬನೆಯ ಬದುಕು ಸಾಗಿಸಬೇಕು ಎಂದು ಕೊಳ್ಳೇಗಾಲ ಕ್ಷೇತ್ರದ ಶಾಸಕ ಎ.ಆರ್. ಕೃಷ್ಣಮೂರ್ತಿ ಕರೆ ನೀಡಿದರು.

ಪಟ್ಟಣದ ವರುಣ ಕ್ಷೇತ್ರ ವ್ಯಾಪ್ತಿಯ ವಿದ್ಯಾನಗರದಲ್ಲಿ ಶ್ರೀ ಮಹದೇಶ್ವರ ಗಾರ್ಮೆಂಟ್ಸ್ ಮತ್ತು ಕೌಶಲ್ಯ ತರಬೇತಿ ಕೇಂದ್ರದ ಉದ್ಘಾಟನೆಯನ್ನು ನೆರವೇರಿಸಿ ಮಾತನಾಡಿದರು. ಮಹಿಳೆಯರು ಇಂತಹ ಕೌಶಲ್ಯ ತರಬೇತಿ ಕೇಂದ್ರಗಳಲ್ಲಿ ತರಬೇತಿ ಪಡೆದು ಸ್ವಯಂ ಉದ್ಯೋಗದಲ್ಲಿ ತೊಡಗಿಸಿಕೊಂಡಾಗ ನಿರುದ್ಯೋಗ ಸಮಸ್ಯೆ ಹೋಗಲಾಡಿಸಿ ರಾಜ್ಯ ಅಭಿವೃದ್ಧಿ ಪಥದತ್ತ ಕೊಂಡೊಯ್ಯಲು ಸಾಧ್ಯವಾಗುತ್ತದೆ ಎಂದು ಅಭಿಪ್ರಾಯಪಟ್ಟರು,

ಮಹದೇಶ್ವರ ಗಾರ್ಮೆಂಟ್ಸ್ ಉಚಿತವಾಗಿ ತರಬೇತಿಗಳನ್ನು ನೀಡುತ್ತಿದೆ. ಈ ಪ್ರದೇಶದ ಸುತ್ತಮುತ್ತಲಿನ ಜನ ಇದರ ಪ್ರಯೋಜನವನ್ನು ಪಡೆದುಕೊಂಡು ನಿರುದ್ಯೋಗ ಸಮಸ್ಯೆಯನ್ನು ಹೋಗಲಾಡಿಸಿ. ಆರ್ಥಿಕವಾಗಿ ಮಹಿಳೆಯರು ಸಬಲೀಕರಣಗೊಳ್ಳಬಹುದು ಎಂದರು.

ನಿರುದ್ಯೋಗ ಹೆಚ್ಚಾಗುತ್ತಿರುವ ಸಮಯದಲ್ಲಿ ಕೈ ಕಟ್ಟಿ ಕೂರುವ ಬದಲು ಸ್ವಾವಲಂಬಿ ಬದುಕು ಕಟ್ಟಿಕೊಳ್ಳಬೇಕಿದೆ. ಅದರಲ್ಲೂ ಮಹಿಳೆಯರು ಸ್ವಂತ ಉದ್ಯಮ ಕಂಡುಕೊಂಡರೆ ಇತರರಿಗೂ ಉದ್ಯೋಗ ನೀಡುವುದರ ಜತೆಗೆ ಆರ್ಥಿಕವಾಗಿ ಸಬಲೀಕರಣಗೊಳ್ಳಬಹುದಾಗಿದೆ. ಅದರಲ್ಲೂ ಮುಖ್ಯಮಂತ್ರಿ ಸಿದ್ದರಾಮಯ್ಯನವರ ವರುಣ ವಿಧಾನಸಭಾ ಕ್ಷೇತ್ರದಲ್ಲಿ ಇಂತಹ ಕೌಶಲ್ಯ ತರಬೇತಿ ಕೇಂದ್ರಗಳು ನಡೆಯುತ್ತಿರುವುದು ಶ್ಲಾಘನೀಯವಾದದ್ದು. ಸ್ವಂತ ಉದ್ಯೋಗ ಮಾಡಿಕೊಳ್ಳುವುದರಿಂದ ಬದುಕು ಉತ್ತಮ ಹಾದಿಯಲ್ಲಿ ಸಾಗಲಿದೆ ಎಂದು ತರಬೇತಿದಾರರಿಗೆ ಕಿವಿಮಾತು ಹೇಳಿದರು.

> ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಿದ್ದು ಮುಖ್ಯಮಂತ್ರಿ ಸಿದ್ದರಾಮಯ್ಯನವರು ನಾಳೆಯಿಂದ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣಕ್ಕೆ ಚಾಲನೆ ನೀಡಲಿದ್ದು, ಅದನ್ನು ಮಹಿಳೆಯರು ಉಪಯೋಗಿಸಿಕೊಂಡು ಪ್ರವಾಸಿ ತಾಣಗಳಿಗೆ ಭೇಟಿ ನೀಡಿ ಕಣ್ತುಂಬಿಸಿಕೊಳ್ಳಿ
> – ಟಿ.ಎಂ. ನಂಜುಂಡಸ್ವಾಮಿ, ಪುರಸಭಾ ಮಾಜಿ ಅಧ್ಯಕ್ಷ

ಕಾರ್ಯಕ್ರಮದಲ್ಲಿ ಅಂಬೇಡ್ಕರ್ ಅಭಿವೃದ್ಧಿ ನಿಗಮದ ಎಂ.ಡಿ. ಸುರೇಶ್ ಕುಮಾರ್, ಹಾರೋಪುರ ಶಿವಣ್ಣ, ಜಿಲ್ಲಾ ಖಾದ್ರಿ ಗ್ರಾಮೋದ್ಯೋಗ ಅಧಿಕಾರಿ ಸತ್ಯ ಪ್ರೇಮ್ ಕುಮಾರ್, ಶರತ್ ಕುಮಾರ್, ಕರ್ನಾಟಕ ಗ್ರಾಮೀಣ ಬ್ಯಾಂಕ್ ವ್ಯವಸ್ಥಾಪಕ ರಾಧಾಕೃಷ್ಣ ರೈ.ತಗಡೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಂಗಸ್ವಾಮಿ, ಪುರಸಭಾ ಮಾಜಿ ಅಧ್ಯಕ್ಷ ಟಿ.ಎಂ. ನಂಜುಂಡಸ್ವಾಮಿ, ಸದಸ್ಯ ತುಂಬಲಾ ಪ್ರಕಾಶ್, ಪುರಸಭಾ ಮಾಜಿ ಸದಸ್ಯ ಗಣೇಶ್, ಎಸ್‌ಸಿ ಘಟಕದ ಅಧ್ಯಕ್ಷ ಸೋಮ ಸುಂದರ್, ನಂಜನಗೂಡು ತಾಪಂ ಮಾಜಿ ಅಧ್ಯಕ್ಷ ನಾಗೇಶ್ ರಾಜ್, ಜಿ.ಪಂ ಮಾಜಿ ಉಪಾಧ್ಯಕ್ಷ ಡಾ. ಶಿವರಾಂ, ಮುಖಂಡರಾದ ಬೆಳಗಲಿ ಕುಮಾರ್, ಗೆಜ್ಜನಹಳ್ಳಿ ವಿಠಲ್ ಜಗದೀಶ್, ಹೇಮಂತ್ ಕುಮಾರ್, ಕಲ್ಮಳ್ಳಿ ಬಾಬು, ರೂಪೇಶ್ ಗೌಡ, ಮಹದೇವ ಪ್ರಸಾದ್, ಕೌಶಲ್ಯ ತರಬೇತಿ ಕೇಂದ್ರದ ವ್ಯವಸ್ಥಾಪಕಿ ವಿ.ಎನ್. ತೇಜಸ್ವಿನಿ. ಎಚ್‌ಎಸ್. ನವೀನ್ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಛತ್ರಪತಿ ಶಿವಾಜಿ ಶೌರ್ಯ, ಧೈರ್ಯದ ಪ್ರತೀಕ: ಜಿ.ಟಿ.ದೇವೇಗೌಡ

ಹುಣಸೂರು ಗಾವಡಗೆರೆಯಲ್ಲಿ ಶಿವಾಜಿ ಪಟ್ಟಾಭಿಷೇಕ, ಪ್ರತಿಭಾ ಪುರಸ್ಕಾರ, ಶಾಸಕರಿಗೆ ಅಭಿನಂದನಾ ಸಮಾರಂಭ



ಹುಣಸೂರು.ಜೂ.10–ಛತ್ರಪತಿ ಶಿವಾಜಿ ಶೌರ್ಯ ಮತ್ತು ಧೈರ್ಯದ ದಾರಿದೀಪವಾಗಿದ್ದರು ಮತ್ತು ನಮಗೆ ಸ್ವರಾಜ್ಯವನ್ನು ತೋರಿಸಿದರು ಎಂದು ಮಾಜಿ ಸಚಿವ, ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡ ಹೇಳಿದರು.

ಅವರು ಹುಣಸೂರು ತಾಲೂಕಿನ ಗಾವಡಗೆರೆಯಲ್ಲಿ ಛತ್ರಪತಿ ಶಿವಾಜಿ ಪಟ್ಟಾಭಿಷೇಕ ಕಾರ್ಯಕ್ರಮ ಮತ್ತು ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರ ಮತ್ತು ನೂತನ ಶಾಸಕರಿಗೆ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದರು.

ಛತ್ರಪತಿ ಶಿವಾಜಿ ಮಹಾರಾಜರ ಪಟ್ಟಾಭಿಷೇಕ ನಡೆದಾಗ ಅದು ಸ್ವರಾಜ್ಯದ ಘೋಷಣೆಯನ್ನು ಹೊಂದಿತ್ತು. ಛತ್ರಪತಿ ಶಿವಾಜಿ ನಮಗೆ ಸ್ಫೂರ್ತಿ ನೀಡುತ್ತಲೇ ಇದ್ದಾರೆ. ಶಿವಾಜಿ ಮಹಾನ್ ಸೈನಿಕ ಹಾಗೂ ಮಹಾನ್ ಆಡಳಿತಗಾರರಾಗಿದ್ದರು ಮತ್ತು ಅವರು ಗುಲಾಮಗಿರಿಯ ಮನಸ್ಥಿತಿಯನ್ನು ಕೊನೆಗೊಳಿಸಿದರು ಎಂದರು.

ನೂರಾರು ವರ್ಷಗಳ ಗುಲಾಮಗಿರಿಯು ದೇಶವಾಸಿಗಳ ಸ್ವಾಭಿಮಾನ ಮತ್ತು ಆತ್ಮವಿಶ್ವಾಸವನ್ನು ಕಸಿದುಕೊಂಡಿದೆ ಮತ್ತು ಆ ಸಮಯದಲ್ಲಿ ಜನರಲ್ಲಿ ಆತ್ಮವಿಶ್ವಾಸವನ್ನು ತುಂಬುವುದು ಕಷ್ಟಕರವಾದ ಕೆಲಸವಾಗಿತ್ತು. ಆದರೆ ಛತ್ರಪತಿ ಶಿವಾಜಿ ಮಹಾರಾಜರು ಆ ಅವಧಿಯಲ್ಲಿ ಆಕ್ರಮಣಕಾರರ ವಿರುದ್ಧ ಹೋರಾಡಿದರು, ಮಾತ್ರವಲ್ಲದೆ ಸ್ವರಾಜ್ಯ ಸಾಧ್ಯ ಎಂಬ ನಂಬಿಕೆಯನ್ನು ಜನರಲ್ಲಿ ಮೂಡಿಸಿದರು. ಛತ್ರಪತಿ ಶಿವಾಜಿ ಮಹಾರಾಜರ ಆದರ್ಶಗಳು ಸ್ಫೂರ್ತಿದಾಯಕವಾಗಿವೆ ಎಂದರು.

ಗಾವಡಗೆರೆ ಗ್ರಾಮದ ಸಂಬಂಧ ತುಂಬಾ ಹಳೆಯದು. ತವರು ಮಗನ ರೀತಿಯಲ್ಲಿ ಜಾತ್ಯತೀತವಾಗಿ ಪ್ರೀತಿ ತೋರಿಸುತ್ತಾರೆ. ನಾನು ಈ ಭಾಗಕ್ಕೆ ನಾಲೆ ಆಧುನೀಕರಣ, ಕೆರೆಗೆ ನೀರು ತುಂಬಿಸುವ ಕೆಲಸ, ವಿದ್ಯುತ್ ಉಪಕೇಂದ್ರ, ಮುಜರಾಯಿ ಇಲಾಖೆ ವತಿಯಿಂದ ದೇವಾಲಯಗಳ ಜೀರ್ಣೋದ್ಧಾರ ಹೀಗೆ ಹತ್ತು ಹಲವು ಯೋಜನೆಗಳನ್ನು ಮಾಡಲಾಗಿದೆ. ಯಾವುದೇ ಕಾಮಗಾರಿಗೂ ನನ್ನ ಹೆಸರು ಬರಬೇಕು ಎಂಬ ಉದ್ದೇಶ ನನಗಿರಲಿಲ್ಲ. ನನಗೆ ತಾಲೂಕಿನ ಸರ್ವತೋಮುಖ ಅಭಿವೃದ್ಧಿಯೇ ಮುಖ್ಯವಾಗಿತ್ತು. ಆದ್ದರಿಂದ ತಾಲೂಕಿನ ಜನ ನಾನು ಮಾಡಿರುವ ಸೇವೆ ನೆನೆದು ಕ್ಷೇತ್ರದಲ್ಲಿ ನನ್ನ ಮಗನನ್ನು ಶಾಸಕರಾಗಿ ಆಯ್ಕೆ ಮಾಡಿ ಸೇವೆ ಸಲ್ಲಿಸಲು ಅವಕಾಶ ಮಾಡಿಕೊಟ್ಟಿದ್ದಾರೆ ಎಂದು ಭಾವುಕರಾದರು.

ಶಾಸಕ ಜಿ.ಡಿ.ಹರೀಶ್ ಗೌಡ ಮಾತನಾಡಿ, ಶಿವಾಜಿ ಮಹಾರಾಜರು ಯಾವಾಗಲೂ ಭಾರತದ ಏಕತೆ ಮತ್ತು ಸಮಗ್ರತೆಯನ್ನು ಪ್ರಮುಖವಾಗಿ ಇಟ್ಟುಕೊಂಡಿದ್ದರು. ಇಂದು ಶಿವಾಜಿ ಮಹಾರಾಜರ ಚಿಂತನೆಗಳ ಪ್ರತಿಬಿಂಬವನ್ನು 'ಏಕ ಭಾರತ–ಶ್ರೇಷ್ಠ ಭಾರತ' ದೃಷ್ಟಿಯಲ್ಲಿ ಕಾಣಬಹುದು ಎಂದರು.

ಸಮಾರಂಭದಲ್ಲಿ ಶಿವಾಜಿ ಛತ್ರಪತಿ ಮರಾಠ ಶ್ರೇಯೋಭಿವೃದ್ಧಿ ಸಂಘದ ಅಧ್ಯಕ್ಷ ಹೊನ್ನಾರಾವ್ ಕಾಳಿಂಗೆ, ಗೌರವ ಅಧ್ಯಕ್ಷೆ ಅನ್ನಪೂರ್ಣಬಾಯಿ, ವೀರೇಶ್ ರಾವ್, ಸತ್ಯ ಫೌಂಡೇಶನ್ ಅಧ್ಯಕ್ಷ ಸತ್ಯಪ್ಪ ಕೃಷ್ಣಜಿರಾವ್ ಜಿ.ವಿ.ಶ್ರೀನಾಥ್, ಗ್ರಾ.ಪಂ ಸದಸ್ಯರಾದ ಶ್ರೀನಾಥ್ ಪಿ ಶಂಕರ್, ಅನುಸೂಯ, ಯಶೋಧ ಬಾಯಿ, ಸಮಾಜದ ಮುಖಂಡರು ಹಾಜರಿದ್ದರು.

ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೆರವೇರಿತು. ನಂತರ ಶಾಸಕರಾದ ಜಿ.ಟಿ.ದೇವೇಗೌಡ ಮತ್ತು ಜಿ.ಡಿ.ಹರೀಶ್‌ಗೌಡರವರನ್ನು ಸನ್ಮಾನಿಸಲಾಯಿತು. ಇದೇ ಸಂದರ್ಭದಲ್ಲಿ ಶಾಸಕ ಜಿ.ಟಿ.ದೇವೇಗೌಡ ಅವರು ಪ್ರತಿಭಾ ಪುರಸ್ಕಾರಕ್ಕೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ವೈಯಕ್ತಿಕವಾಗಿ ಆರ್ಥಿಕ ನೆರವು ನೀಡಿದರು.



ಮತ್ತೆ ಮುಖ್ಯಮಂತ್ರಿಯಾದ ನಂತರ ಇದೇ ಮೊದಲ ಬಾರಿಗೆ ಶನಿವಾರ ಸುತ್ತೂರು ಮಠಕ್ಕೆ ಭೇಟಿ ನೀಡಿದ ಸಿದ್ದರಾಮಯ್ಯ ಅವರಿಗೆ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರು ರುದ್ರಾಕ್ಷಿ ಹಾರ ಹಾಕಿ, ಆಶೀರ್ವದಿಸಿದರು. ಈ ವೇಳೆ ಮೈಸೂರು ಜಿಲ್ಲಾ ಉಸ್ತುವಾರಿ ಡಾ.ಹೆಚ್.ಸಿ.ಮಹದೇವಪ್ಪ, ಶಾಸಕರಾದ ಎ.ಆರ್.ಕೃಷ್ಣಮೂರ್ತಿ, ರವಿಶಂಕರ್, ವಿಧಾನಪರಿಷತ್ ಸದಸ್ಯ ಡಾ.ತಿಮ್ಮಯ್ಯ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಯುವ ಮುಖಂಡ ಸಂದೇಶ್ ಉಪಸ್ಥಿತರಿದ್ದರು.



ವರುಣ ಕ್ಷೇತ್ರದ ಬಿಳಿಗೆರೆ ಗ್ರಾಮದಲ್ಲಿ ಮತದಾರರು ಮತ್ತು ಕಾರ್ಯಕರ್ತರಿಗೆ ಏರ್ಪಡಿಸಲಾಗಿದ್ದ ಕೃತಜ್ಞತಾ ಸಮಾವೇಶವನ್ನು ಉದ್ಘಾಟಿಸಿದ ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನೆರೆದಿದ್ದ ಭಾರೀ ಜನಸ್ತೋಮದತ್ತ ಕೈ ಬೀಸಿ ಸಂತಸ ವ್ಯಕ್ತಪಡಿಸಿದರು.

ವಿಶೇಷವಾಗಿ ಡಾ.ಯತೀಂದ್ರರಿಗೆ ಅಭಿನಂದಿಸುತ್ತೇನೆ

ಮೈಸೂರು, ಜೂ.10(ಎಂಟಿವೈ)– ವರುಣ ಕ್ಷೇತ್ರದಲ್ಲಿ ನಾನು ಎದುರಿಸಿದ ಕೊನೆ ಚುನಾವಣೆಯಲ್ಲಿ ಐತಿಹಾಸಿಕ ಗೆಲುವಿಗೆ ಕ್ಷೇತ್ರದ ಜನ ಶ್ರಮಿಸಿದ್ದೀರಿ. ಆದರೆ, ಡಾ.ಯತೀಂದ್ರ ಅವರಿಗೆ ವಿಶೇಷವಾಗಿ ಅಭಿನಂದಿಸುತ್ತೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ವರುಣ ಕ್ಷೇತ್ರದ ಕಾರ್ಯಕರ್ತರ ಕೃತಜ್ಞತಾ ಸಭೆಯಲ್ಲಿ ಮಾತನಾಡುತ್ತಿದ್ದ ಅವರು, ಡಾ.ಯತೀಂದ್ರ ಅವರು ನನಗೆ ಕ್ಷೇತ್ರ ಬಿಟ್ಟುಕೊಟ್ಟಿರುವುದು ಮಾತ್ರವಲ್ಲದೆ, ಚುನಾವಣೆಯಲ್ಲಿ ಸಾಕಷ್ಟು ಓಡಾಡಿದ್ದಾರೆ. ಸ್ವತಃ ಅವರೇ ಅಭ್ಯರ್ಥಿಯಾಗಿದ್ದರೂ ಇಷ್ಟೊಂದು ಶ್ರಮಪಡುತ್ತಿರಲ್ಲಿಲ್ಲ. ನಿಮ್ಮನ್ನೆಲ್ಲ ಒಂದುಗೂಡಿಸಿ, ಕೆಲಸ ಮಾಡಿದ್ದಾರೆ. ನಾನು ಚುನಾವಣಾ ಪ್ರಚಾರಕ್ಕೆ ಬಂದಿದ್ದು ಕೇವಲ ಎರಡು ಮೂರು ದಿನವಷ್ಟೇ. ಆದರೆ, ಯತೀಂದ್ರ ಅವರು ಒಂದೂವರೆ ತಿಂಗಳು ಸತತ ಕೆಲಸ ಮಾಡಿದ್ದಾರೆ. ಅದಕ್ಕಾಗಿ ನಾನು ಅವರಿಗೆ ವಿಶೇಷವಾಗಿ ಅಭಿನಂದಿಸುತ್ತೇನೆ ಎಂದು ಹೇಳಿದರು.

ನನ್ನ ಜಯ, ವರುಣ ಕ್ಷೇತ್ರದ ಜನರದ್ದು: ವರುಣ ಕ್ಷೇತ್ರದಲ್ಲಿ ನಾನು ಸಾಧಿಸಿದ ಜಯ ವರುಣ ಕ್ಷೇತ್ರದ ಜನರಿಗೆ ಸಂದ ಜಯ. ರಾಜ್ಯದಲ್ಲಿ ಕಾಂಗ್ರೆಸ್ ಪ್ರಚಂಡ ಗೆಲುವು ಸಾಧಿಸಿದಾಗ ಕೆಪಿಸಿಸಿ ಕಚೇರಿಯಲ್ಲಿಯೇ ಹೇಳಿದ್ದೆ. ಕಾಂಗ್ರೆಸ್ ಗೆಲುವು ರಾಜ್ಯದ ಜನತೆಗೆ ಸಿಕ್ಕ ಗೆಲುವಾಗಿದೆ ಎಂದು ತಿಳಿಸಿದ್ದೆ. ವಿಶೇಷವಾಗಿ ವರುಣ ಕ್ಷೇತ್ರದ ಜನರಿಗೆ ಅಭಿನಂದಿಸುತ್ತೇನೆ ಎಂದು ತಿಳಿಸಿದರು.

ಮಗನಿಗೆ ಸಿಕ್ಕಿದ ಲೀಡ್, ನನಗೆ ಸಿಗಲಿಲ್ಲ

ಮೈಸೂರು, ಜೂ.10(ಎಂಟಿವೈ)– ವರುಣ ಕ್ಷೇತ್ರದಲ್ಲಿ ಈ ಬಾರಿ ನನಗೆ ದೊರೆತ ಗೆಲುವು ಐತಿಹಾಸಿಕ ಗೆಲುವಾಗಿದೆ. ನಾನು ಎದುರಿಸಿದ ಚುನಾವಣೆಯಲ್ಲಿ ಇದೇ ಮೊದಲ ಬಾರಿಗೆ 46 ಸಾವಿರ ಲೀಡ್ ಪಡೆದು ಗೆಲುವು ಸಾಧಿಸಿದ್ದೇನೆ. ಆದರೆ, ಕಳೆದ ಬಾರಿ ಪುತ್ರ ಡಾ.ಯತೀಂದ್ರ ಅವರಿಗೆ ದೊರೆತ ಲೀಡ್ ನನಗೆ ಸಿಗಲಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಕಳೆದ ಚುನಾವಣೆಯಲ್ಲಿ ವರುಣ ಕ್ಷೇತ್ರದಿಂದ ಸ್ಪರ್ಧಿಸಿದ್ದ ಡಾ.ಯತೀಂದ್ರ ಅವರು 59 ಸಾವಿರ ಮತಗಳ ಅಂತರದಲ್ಲಿ ಗೆಲ್ಲಿಸಿದ್ದೀರಿ. ಮಗನಿಗೆ ಸಿಕ್ಕ ಲೀಡ್ ನನಗೆ ಸಿಗಲಿಲ್ಲ ಎನ್ನಿಸುತ್ತದೆ. ವರುಣ ಕ್ಷೇತ್ರ ರಚನೆಗೊಂಡಾಗ 2008ರಲ್ಲಿ ನಾನು ಮೊದಲ ಚುನಾವಣೆ ಎದುರಿಸಿದಾಗ 18 ಸಾವಿರ ಮತಗಳ ಅಂತರದಿಂದ ಗೆಲ್ಲಿಸಿ, ನನ್ನನ್ನು ವಿರೋಧ ಪಕ್ಷದ ನಾಯಕನಾಗಲು ವರುಣ ಕ್ಷೇತ್ರದ ಜನ ನೆರವಾದರು. 2013ರ ಚುನಾವಣೆಯಲ್ಲಿ ಎರಡನೇ ಬಾರಿ ಸ್ಪರ್ಧಿಸಿದಾಗ 29 ಸಾವಿರ ಲೀಡ್‌ನಲ್ಲಿ ಗೆಲ್ಲಿಸಿ ಮುಖ್ಯಮಂತ್ರಿ ಮಾಡಿದ್ದೀರಾ. ಇದೀಗ 46 ಸಾವಿರ ಅಂತರದ ಗೆಲುವಿಗೆ ಕಾರಣರಾಗಿ ಎರಡನೇ ಬಾರಿಗೆ ಮುಖ್ಯಮಂತ್ರಿ ಮಾಡಿದ್ದಕ್ಕೆ ವರುಣ ಕ್ಷೇತ್ರ ಜನತೆಗೆ ನಾನು ಸದಾ ಅಭಾರಿಯಾಗಿದ್ದೇನೆ ಎಂದರು.

ಬಂದಿರೋರು ಹತ್ತತ್ತು ವೋಟ್ ಹಾಕ್ಸಿದ್ರೆ ನಿಮ್ ಮಂಜಣ್ಣ ಮಂತ್ರಿಯಾಗ್ತಿದ್ದ!

ಹುಣಸೂರು ಕಾಂಗ್ರೆಸ್ ಕಾರ್ಯಕರ್ತರ ವಿರುದ್ಧ ಸಿಎಂ ಕಿಡಿ

ಹುಣಸೂರು, ಜೂ.10– ಗೆಲ್ಲಿಸಿದ್ದರೆ ಮಂತ್ರಿಯಾಗ್ತಿದ್ದ, ನೀವು ಮಂಜುನಾಥನನ್ನು ಸೋಲಿಸಿ ಬಂದಿದ್ದೀರಾ, ಇಲ್ಲಿ ಬಂದಿರುವ ಒಬ್ಬೊಬ್ಬರು ಹತ್ತು ಓಟ್ ಹಾಕಿಸಿದ್ದರೂ ಗೆಲ್ತಿದ್ದ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹುಣಸೂರು ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರ ವಿರುದ್ಧ ಕಿಡಿಕಾರಿದರು.

ಮೈಸೂರಿನ ಸಿದ್ದರಾಮಯ್ಯ ಅವರ ನಿವಾಸಕ್ಕೆ ತೆರಳಿದ್ದ ಹುಣಸೂರು ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಅವರ ನೂರಾರು ಬೆಂಬಲಿಗರು ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಅತ್ಯಲ್ಪ ಮತಗಳಿಂದ ಸೋಲು ಅನುಭವಿಸಿದ ಹೆಚ್.ಪಿ.ಮಂಜುನಾಥ್ ಅವರಿಗೆ ಎಂಎಲ್‌ಸಿ ಸ್ಥಾನ ನೀಡಬೇಕು ಎಂದು ಮನವಿ ಮಾಡಿದ ಕಾರ್ಯಕರ್ತರ ವಿರುದ್ಧ ಕಿಡಿಕಾರಿದ ಅವರು, ರಾಜ್ಯದಲ್ಲಿ ಸೋತವರು 90 ಮಂದಿ ಇದ್ದಾರೆ, ಎಲ್ಲರಿಗೂ ಎಂಎಲ್‌ಸಿ ಕೊಡಲು ಸಾಧ್ಯವಿಲ್ಲ. ಆದರೂ ಈ ಮಂಜುಗೆ ಉನ್ನತ ಹುದ್ದೆ ಕೊಡಿಸುವ ಜವಾಬ್ದಾರಿ ನನ್ನದು ಎಂದು ಮುಖಂಡರಿಗೆ ಆಶ್ವಾಸನೆ ನೀಡಿದರು.

ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಡಾ.ಪುಷ್ಪ ಅಮರ್‌ನಾಥ್, ಹುಣಸೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ನಾರಾಯಣ್, ಕಲ್ಕುಣಿಕೆ ರಮೇಶ್, ಮಂಜುಳ, ಶೋಭಾ, ಕಾರ್ಯಾಧ್ಯಕ್ಷರಾದ ಬಸವರಾಜಪ್ಪ, ಪುಟ್ಟರಾಜು, ನಗರಸಭೆ ಸದಸ್ಯೆ ಸೌರಭ ಸಿದ್ದರಾಜು, ಮಾಜಿ ಅಧ್ಯಕ್ಷೆ ಸುನಿತಾ ಜಯರಾಮೇಗೌಡ, ಜಿ.ಪಂ. ಮಾಜಿ ಸದಸ್ಯ ಕುನ್ನೇಗೌಡ, ಉದ್ಯಮಿಗಳಾದ ರಾಜು ಶಿವರಾಜೇಗೌಡ, ಕೃಷ್ಣ ಮುಖಂಡರಾದ ಬಿ.ಎನ್. ಜಯರಾಂ, ಮಂಡ್ಯ ಮಹೇಶ್, ನೇರಳಕುಪ್ಪೆ ಮಹದೇವ್, ಕುಮಾರ್, ಅಜ್ಗರ್ ಪಾಷಾ, ಲೋಕೇಶ್, ಹೊನ್ನಪ್ಪ, ಚಿಲ್ಕುಂದ ನಾಗರಾಜ್ ಮತ್ತಿತರರು ಸಿಎಂಗೆ ಮನವಿ ಸಲ್ಲಿಸಿದರು. ಮುಖ್ಯಮಂತ್ರಿಗಳೊಂದಿಗೆ ಸಚಿವ ಕೆ.ವೆಂಕಟೇಶ್, ಶಾಸಕ ರವಿಶಂಕರ್, ಜಿಲ್ಲಾ ಗ್ರಾಮಾಂತರ ಅಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್ ಇದ್ದರು.

ಕರೆಂಟ್ ಬಿಲ್ ಏರಿಕೆ ಬೆನ್ನಲ್ಲೇ ಸದ್ದಿಲ್ಲದೆ ಮದ್ಯ ಬೆಲೆ ಏರಿಕೆ

ಬೆಂಗಳೂರು, ಜೂ.10– ಗೃಹಜ್ಯೋತಿ ಯೋಜನೆಯಲ್ಲಿ 200 ಯೂನಿಟ್ ಫ್ರೀ ಕರೆಂಟ್ ಸಿಗುತ್ತದೆ ಎಂದು ರಾಜ್ಯದ ಜನರು ಸಂತಸಪಟ್ಟರೆ, ಕೆಲವೆಡೆ



ವಿದ್ಯುತ್ ಬಿಲ್ ಅನ್ನು ದುಪ್ಪಟ್ಟು ಮಾಡಿ ಶಾಕ್ ನೀಡಲಾಗಿದೆ. ಕರೆಂಟ್ ಬಿಲ್ ದರ ಏರಿಕೆ ಬೆನ್ನಲ್ಲೇ ಅಬಕಾರಿ ಇಲಾಖೆ ಮದ್ಯ ಪ್ರಿಯರಿಗೆ ಮತ್ತೊಂದು ಶಾಕ್ ನೀಡಿದೆ.

ಅಬಕಾರಿ ಇಲಾಖೆ ಸದ್ದಿಲ್ಲದೆ ಮದ್ಯ ಬೆಲೆ ಏರಿಕೆ ಮಾಡಿದೆ. ಸ್ಲಾಬ್‌ಗಳಲ್ಲಿ ಏರಿಕೆ ಮಾಡಲಾಗಿದ್ದು, ಬಿಯರ್‌ಗೆ 10 ರೂ. ಏರಿಕೆ ಮಾಡಲಾಗಿದೆ. ಹಾಗೂ ಹಾಟ್ ಡ್ರಿಂಕ್ಸ್‌ಗಳ ವಿವಿಧ ಬ್ರ್ಯಾಂಡ್‌ಗಳಿಗೆ ಬೇರೆ ಬೇರೆ ರೀತಿಯಾಗಿ ಏರಿಕೆ ಮಾಡಲಾಗಿದೆ.

ಯಾವೆಲ್ಲಾ ಬ್ರ್ಯಾಂಡ್ ಎಷ್ಟು ಬೆಲೆ ಏರಿಕೆ: 650 ಎಂಎಲ್‌ನ ಬಿಯರ್ 160ರಿಂದ 170 ರೂ., ಮ್ಯಾಕ್ ಡ್ಯಾವೆಲ್ಸ್ 180 ಎಂಎಲ್ 198 ರಿಂದ 220 ರೂ., ಕಿಂಗ್ ಫಿಷರ್ 650 ಎಂಎಲ್‌ಗೆ 160ರಿಂದ 170 ರೂ., ಟ್ಯೂಬರ್ಗ್ 160ರಿಂದ 170 ರೂ., ಬಡ್ವೈಸರ್ 200ರಿಂದ 220 ರೂ., ಪವರ್ ಕೂಲ್ 100ರಿಂದ 110 ರೂ., ಬಕಾರ್ಡಿ 275 ಎಂಎಲ್‌ಗೆ 90ರಿಂದ 105 ರೂ. ಏರಿಕೆ ಮಾಡಲಾಗಿದೆ.

ಉಚಿತ ಆರೋಗ್ಯ ತಪಾಸಣಾ ಶಿಬಿರ

ಮೈಸೂರು, ಜೂ.10–ಮೈಸೂರಿನ ಎನ್‌ಜೆಎಸ್ ಚಾರಿಟಬಲ್ ಟ್ರಸ್ಟ್ ಮತ್ತು ಮೈಸೂರು ವೀರಶೈವ ಸಜ್ಜನ ಸಂಘದ ವತಿಯಿಂದ ಜೂ.13ರಂದು ಬೆಳಗ್ಗೆ 9.30ರಿಂದ ಮಂಡಿ ಮೊಹಲ್ಲಾದ ಕಂಠಿ ಮಲ್ಲಣ್ಣನವರ ಕಲ್ಯಾಣ ಮಂದಿರದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ ಮೊ.9916155453 ಸಂಪರ್ಕಿಸಿ.

10ನೇ ವರ್ಷದ ಸವಿನೆನಪು



ಗೋವಿಂದ ತಿಮ್ಮ
ದುಃಖತಪ್ತರು: ಕಮ್ಮಲಮ್ಮ ಮತ್ತು ಮಕ್ಕಳು, ಮೊಮ್ಮಕ್ಕಳು: ಯಶವಂತ್, ಗೌತಮಿ, ಛಾಯ, ಅನ್ವಿತ, ಮೋಹಿತ್

8ನೇ ವರ್ಷದ ಸವಿನೆನಪು



ಶ್ರೀಮತಿ ರುಕ್ಮಿಣಿ
ನೀನು ನಮ್ಮನ್ನಗಲಿ ಇಂದಿಗೆ 8 ವರ್ಷ ಕಳೆದರೂ ಸದಾ ನಿನ್ನ ನೆನಪಿನಲ್ಲಿರುವ ದುಃಖತಪ್ತ: ಪತಿ ಸೊಸೈಟಿ ನರಸಿಂಹಯ್ಯ, ಮತ್ತು ಮಕ್ಕಳು, ಮೊಮ್ಮಕ್ಕಳು ಹಾಗೂ ಕುಟುಂಬ ವರ್ಗ, ಕರೀಗೌಡರ ಬೀದಿ, ಹುಣಸೂರು

13ನೇ ವರ್ಷದ ಸವಿನೆನಪು



ಕೆ.ಕೃಷ್ಣ M.A., BL.,
ನೀವು ನಮ್ಮನ್ನು ಅಗಲಿ ಇಂದಿಗೆ 13 ವರ್ಷ ಕಳೆದರೂ ನಿಮ್ಮ ಸವಿನೆನಪು ನಮ್ಮಲ್ಲಿ ಹಚ್ಚ ಹಸಿರಾಗಿ ಉಳಿದಿರುತ್ತದೆ. ಪತ್ನಿ: ಎಸ್.ವಿ ಜಯಮ್ಮ, ಮಕ್ಕಳು, ಅಳಿಯಂದಿರು ಹಾಗೂ ಮೊಮ್ಮಕ್ಕಳು, ಆರ್.ಕೆ.ನಗರ, ಮೈಸೂರು

23ನೇ ವರ್ಷದ ವಿವಾಹ ವಾರ್ಷಿಕೋತ್ಸವದ ಶುಭಾಶಯಗಳು



ಶ್ರೀ ಸುರೇಶ್ ಮತ್ತು ಶ್ರೀಮತಿ ಶೋಭ
ಶುಭಕೋರುವವರು:
ಕೆ.ಆರ್.ಎಸ್ ಸ್ಪೀಡ್ ಗಿರಿ, ದರ್ಶನ್, ಶಿವು, ಸುಲ್ತಾನ್, ಅಭಿ, ಪ್ರಜ್ವಲ್, ಅಭಿ ಮೋಸಸ್, ರಾಕೇಶ್, ಮನೋಜ್, ಧನಂಜಯ್, ಮದನ್, ಆಕಾಶ್ ಶಶಾಂಕ್

Promotional Feature



ಹಂಸವಾಣಿ ಹಿರಿಯ ನಾಗರಿಕರ ಹಿತರಕ್ಷಣಾ ಸಮಿತಿ, ಹಂಸವಾಣಿ ಕನ್ನಡ ಬಳಗ, ಹಂಸವಾಣಿ ಸ್ತ್ರೀಶಕ್ತಿ ಸ್ವಸಹಾಯ ಸಂಘ, ಸಾತಗಳ್ಳಿ ಬಿ ವಲಯ, ಹಂಸ ವೃತ್ತ ಇವರ ಸಂಯುಕ್ತಾಶ್ರಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮೂರನೇ ಬಾರಿ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಜಿ.ಟಿ ದೇವೆಗೌಡರಿಗೆ ಅಭಿನಂದನಾ ಕಾರ್ಯಕ್ರಮ ಹಾಗೂ ಶಾಸಕರ ಜೊತೆಯಲ್ಲಿ ಬೆಳದಿಂಗಳ ಊಟದ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ವಕೀಲರಾದ ಪಾಲಾಕ್ಷರವರು, ಹಂಸವಾಣಿ ಹಿರಿಯ ನಾಗರಿಕರ ಹಿತರಕ್ಷಣಾ ಸಮಿತಿ ಅಧ್ಯಕ್ಷರಾದ ಕಾಂತರಾಜು, ಹಂಸವಾಣಿ ಕನ್ನಡ ಬಳಗದ ಅಧ್ಯಕ್ಷರಾದ ಕೆ.ಸಿ.ಪ್ರಶಾಂತ್, ಹಂಸವಾಣಿ ಸ್ತ್ರೀಶಕ್ತಿ ಸ್ವಸಹಾಯ ಸಂಘ ಅಧ್ಯಕ್ಷರಾದ ಶಿವಮ್ಮರವರು, ಮೈಸೂರು ಚಾಮುಂಡೇಶ್ವರಿ ಕ್ಷೇತ್ರದ ಜಿಲ್ಲಾ ಸಂಘಟನಾ ಕಾರ್ಯದರ್ಶಿ ಹೆಚ್.ಎಸ್. ರಾಘವೇಂದ್ರ ಭಟ್‌ರವರು, ಪ್ರವೀಣ್ ಲಾರ್ಡ್, ಸೋಮಣ್ಣ, ನಾಗಸುಂದರ್, ರಂಗರಾಜು, ವೆಂಕಟೇಶ್, ನಟರಾಜು, ಯೋಗಿಂದ್ರ, ವೈ.ಎಸ್.ಬಸವರಾಜು, ಎಂ.ಪ್ರೋ.ಕಾಂತರಾಜು, ಸುರೇಶ್ ಗೌಡರು, ವಿನಾಯಕ ರಾಜೇಂದ್ರ, ಮಹೇಂದ್ರ, ಮಹದೇವಣ್ಣ ಮತಿತ್ತರು ಉಪಸ್ಥಿತರಿದ್ದರು. ಈ ವೇಳೆ ಜಿ.ಟಿ ದೇವೆಗೌಡರು ರಮ್ಮನಹಳ್ಳಿ ಪಟ್ಟಣ ಪಂಚಾಯಿತಿ ಚುನಾವಣೆಯಲ್ಲಿ ಸಾತಗಳ್ಳಿ ಬಿ ವಲಯದಲ್ಲಿ ತಮ್ಮ ಬೆಂಬಲಿಗರಾದ ರಾಮೇಗೌಡರವರ ಸ್ಪರ್ಧೆಗೆ ಘೋಷಣೆ ಮಾಡಿದರು.